EBITDA*	1,793.65	1,421.70	1,494.63	5,447.19	4,107.88	5,750.02
Profit / (Loss) before tax	544.41	356.47	54.26	2,830.85	(1,053.31)	(616.91)
Profit / (Loss) after tax	378.41	253.64	54.26	2,157.18	(752.77)	(396.81)
Total comprehensive income / (loss)	292.92	215.93	3.66	2,027.68	(927.41)	(434.58)

* Excluding other income.

5. The above unaudited consolidated financial results of the Group are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed.

For **AXISCADES Technologies Limited**
Sd/-
Dr. Sampath Ravinarayanan
Chairman and Non-Executive Director

Place : Bengaluru
Dated : 31.01.2025

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

COMMERCIAL CONVERTED Land for RENT, 61410 sqft.for Built-to-Suit, exclusively off parking space and park,`with BIAAPA approved plan.`Situated on Bangalore Hyderabad National Highway (NH-7),Near Devanahalli. Contact: 9916929394.

OFFICE SPACE For Rent16,000 sqft HBR layout 4th Block Facing Ring Road Contact: 8861817913/ 9008025761

Flats

FOR LEASE: 2 Bedroom Flat 1st Floor, with Carparking, Basaweshwara Nagar, Bangalore-79. Rs.27 Lakhs. 9980133336.

DH Classifieds ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact: 9901641752 9845114560
*Conditions apply

MORE Classifieds IN SUPPLEMENT

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

FOR RENT 12,000 sqft of Empty Compounded Land in KIADB 2nd Phase, Harohalli. Contact: 9972299585.

MATRIMONIAL

Brides Wanted

Brahmin

BRIDE WANTED
Seek Alliance for **Smartha Brahmin Boy Age 35 Years, 5'.8" Ht,** BE (E & C) Working as Manager in Telecom Tech Co. Bangalore Erng Rs.40 Lakhs PA, from KTK Brahmin Educated & Employed **Girls of Cultured, Traditional, Family values background,**
WhatsApp/ Contact: 9379241402 7019952764

Hindu

VEG1982 MTECH Manager Bangalore seek bride CAST NO BAR 9448732793 sriningag82@gmail.com

Matrimonial Bureaus

Are you looking for BRIDE / GROOM Contact SUSAN for Good Matches Free Registration
82174 81850
90368 26010

BUSINESS

Business Offers

Finance

URGENT LOAN Avail @ 3.5% per annum Personal-Business Housing- Project Take Over all types loan. Good Finance. Phone:: 7678360713.

Business For Sale

BAKING EQUIPMENT for SALE. 2-Tier Gasoven, 10-Litre Mixer-Grinder, Chiller Unit. Contact: 8301092766, Doddanekkunddi, Marathahalli, Bangalore.

General

I HAVE 70-80 pots with different plants which I would like to dispose of. Interested persons can contact 9448491041

PERSONAL

Change of Name

CHANGE OF NAME
I, **SANATKUMAR KANDRATTI** Residing at Komal Building, SN 130, A/2, Plot No. 01, 19th Cross, College Road, Vidyagiri, Bagalkot, Karnataka-587102 have changed my name to **SANATKUMAR M KANDRATTI** vide affidavit dated 01.02.2025 before notary B.M. Chandrashekar, Bangalore.

Lost

ಕಳೆದಿದೆ
ರೋಹನ್ ಪಿರೇರಾ ಆದ ನನ್ನ ಹೆಸರಿಗೆ ನೋಂದಣಿಯಾದ ನಿವೇಶನದ ಸಂಖ್ಯೆ. ಪಿ.ಐ.ಡಿ.ನಂ.15020030170042874 7 ಶುದ್ಧಕ್ರಯಪತ್ರದ ಸಂಖ್ಯೆ.ಟಿ.ವಿ.ಆರ್–1–00473/2014–15, ಸಿ.ಡಿ.ನಂ.ಟಿ.ವಿ.ಆರ್.ಡಿ.192, ಅಸಲಿ ಪತ್ರವು ಕಳೆದು ಹೋಗಿರುತ್ತದೆ. ಕಳೆದು ಹೋದ ವಸ್ತು/ದಾಖಲೆಯ ವರದಿಯ ಕ್ರಮ ಸಂಖ್ಯೆ. 1456069/2025ರಂತೆ ದಿನಾಂಕ: 31–01–2025 ರಂದು ಆನ್‌ಲೈನ್ ಮೂಲಕ ದೂರು ನೀಡಿರುತ್ತೇನೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಈ ನಂಬರ್‌ಗೆ ಸಂಪರ್ಕಿಸಿ: ಮೊ.8753986101

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

WEEKEND CORNER

RV Institute of Management — Go, change the world
in collaboration with **Boston IT Solutions India Pvt. Ltd** is offering an Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University from March 2025

COURSE DETAILS
- Venue: **Centre for Business Analytics,** RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,60,000/-
- Timings: Mon to Fri: 6.30pm to 9.00pm Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in


SALE CHAMRAJPET
COMMERCIAL BUILDING 18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

RENTAL INCOME INVESTMENT
CONSTRUCT PG BUILDING AND GET Rs 1.5 LAKH RENTAL INCOME
FOR TOTAL INVESTMENT Rs.1.75 Cr.

DC CONVERSION
DTCP APPROVED
RERA APPROVED
E-KATHA
Close to Narasapura / Vemgal KIADB Industrial hub with major companies such as Honda Two wheeler, Wistron (I-Phone Plant) / Mahendra Aero Space / Scania & Mitsubishi many more ancillary units such as Badve Exedy /Aisin/ Bando etc. are fully Operational.
@ NARASAPURA
HOSKOTE - CHENNAI BANGALORE HIGHWAY - 30 Mins drive to International Airport
CONTACT 7829000837 / 9008005029

ಕರವೇಯಿಂದ 3 ಹಕ್ಕೊತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ಹಕ್ಕೊತ್ತಾಯ ಮುಂದಿಟ್ಟುಕೊಂಡು ಕರ್ನಾಟಕ ರಕ್ಷಣಾ ವೇದಿಕೆಯು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ 'ಮಹಾ ಸಂಘರ್ಷ ಯಾತ್ರೆ' ನಡೆಸಿತು. ನೇತೃತ್ವವನ್ನು ವೇದಿಕೆ ಅಧ್ಯಕ್ಷ ಟಿ.ಎ. ನಾರಾಯಣಗೌಡ ವಹಿಸಿದ್ದರು.

ರಾಜ್ಯದಲ್ಲಿ ಮಾರಾಟವಾಗುವ, ಬಳಕೆಯಾಗುವ ಎಲ್ಲ ಬಗೆಯ ಉತ್ಪನ್ನಗಳ ಮೇಲೆ ಶೇಕಡ 60ರಷ್ಟು ಬರಹಗಳು ಕನ್ನಡದಲ್ಲಿಯೇ ಇರಬೇಕು. ಎಲ್ಲ ಬಗೆಯ ಉತ್ಪನ್ನಗಳ ಏಜೆನ್ಸಿಗಳು ಪರಭಾಷಿಕರ ಪಾಲಾಗುತ್ತಿವೆ. ಇದು ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯ. ಹೀಗಾಗಿ, ಎಲ್ಲ ಉತ್ಪನ್ನಗಳ ಏಜೆನ್ಸಿಗಳು ಕನ್ನಡಿಗರಿಗೇ ಸಿಗಬೇಕು ಅಥವಾ ಈ ಏಜೆನ್ಸಿಗಳಲ್ಲಿ ಕನ್ನಡಿಗರು ಪಾಲುದಾರರಾಗಿ ರಬೇಕು ಎಂದು ಕಾರ್ಯಕರ್ತರು ಆಗ್ರಹಿಸಿದರು.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲ ಬಗೆಯ ರಾಷ್ಟ್ರೀಯ, ಖಾಸಗಿ, ಗ್ರಾಮೀಣ, ಸಹಕಾರ ಬ್ಯಾಂಕ್‌ಗಳು, ಫೈನಾನ್ಸ್‌ಗಳು, ಚಿನ್ನದ ಅಡಮಾನ ಸಂಸ್ಥೆಗಳು, ಜೀವ ವಿಮಾ ಸಂಸ್ಥೆಗಳು, ಆರೋಗ್ಯ ವಿಮಾ ಸಂಸ್ಥೆಗಳು ಮತ್ತು ಇತರ ಯಾವುದೇ ಸ್ವರೂಪದ ಹಣಕಾಸು ಸಂಸ್ಥೆಗಳಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಶೇ 100ರಷ್ಟು ಹುದ್ದೆಗಳು ಮತ್ತು ಇತರೆ ಹುದ್ದೆಗಳಲ್ಲಿ ಶೇ 60ರಷ್ಟನ್ನು ಕನ್ನಡಿಗರಿಗೆ ನೀಡಬೇಕು. ಈ ಸಂಸ್ಥೆಗಳು ಬಳಸುವ, ಗ್ರಾಹಕರಿಗೆ ನೀಡುವ ದಾಖಲೆಗಳು ಕನ್ನಡದಲ್ಲಿರಬೇಕು ಎಂದು ಆಗ್ರಹಿಸ-ಲಾಯಿತು. ಈ ಹಕ್ಕೊತ್ತಾಯಗಳನ್ನು ಕೇಂದ್ರ, ರಾಜ್ಯ ಸರ್ಕಾರ, ಕಾರ್ಪೊರೇಟ್ ಸಂಸ್ಥೆಗಳು, ಹಣಕಾಸು ಸಂಸ್ಥೆಗಳು ಈಡೇರಿಸಬೇಕು. ಇಲ್ಲವಾದಲ್ಲಿ ವೇದಿಕೆ ಪ್ರತಿಭಟನೆ ನಡೆಸಲಿದೆ ಎಂದು ಟಿ.ಎ. ನಾರಾಯಣಗೌಡ ಅವರು ಎಚ್ಚರಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ 'ಮಹಾಸಂಘರ್ಷ ಯಾತ್ರೆ'ಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ಮಾತನಾಡಿದರು
—ಪ್ರಜಾವಾಣಿ ಚಿತ್ರ

ಗೃಹರಕ್ಷಕ ದಳದ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಲೇಜು ವಿದ್ಯಾರ್ಥಿಗಳ ಕೊಠಡಿಗೆ ನುಗ್ಗಿ ಸುಲಿಗೆ ಮಾಡಿದ್ದ ಆರೋಪದಡಿ ಗೃಹರಕ್ಷಕ ದಳದ ಸಿಬ್ಬಂದಿಯನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪೊಲೀಸ್ ಠಾಣೆಯೊಂದರಲ್ಲಿ ನಿಯೋಜಿತವಾಗಿದ್ದ ಸುರೇಶ್ ಕುಮಾರ್ (40) ಬಂಧಿತ. ಈತ ಎಂ.ಎಸ್. ರಾಮಯ್ಯ ನಗರದಲ್ಲಿ ವಿದ್ಯಾರ್ಥಿನಿಯರ ಕೊಠಡಿಗೆ ನುಗ್ಗಿ ಅನುಚಿತವಾಗಿ ವರ್ತಿಸಿ, ₹5 ಸಾವಿರ ಸುಲಿಗೆ ಮಾಡಿದ್ದ ಎಂಬುದು ತನಿಖೆಯಿಂದ ಗೊತ್ತಾಗಿದೆ. 'ಬಿ.ಎಸ್‌ಸಿ ವ್ಯಾಸಂಗ ಮಾಡುತ್ತಿರುವ ಕೇರಳದ ವಿದ್ಯಾರ್ಥಿನಿ ಎಂ.ಎಸ್.ರಾಮಯ್ಯ ನಗರದಲ್ಲಿ ಸ್ನೇಹಿತೆಯರೊಂದಿಗೆ ಬಾಡಿಗೆ ಕೊಠಡಿಯಲ್ಲಿ ವಾಸವಿದ್ದಳು. ಜನವರಿ 25ರ ರಾತ್ರಿ ಒಂದು ಗಂಟೆ ಸುಮಾರಿಗೆ ಆರೋಪಿಯು, 'ನಾನು ಅಪರಾಧ ವಿಭಾಗದ ಪೊಲೀಸ್ ಅಧಿಕಾರಿ. ನಿಮ್ಮ ವಿರುದ್ಧ ದೂರು ಬಂದಿದೆ' ಎಂದು ಕೊಠಡಿ ಪ್ರವೇಶಿಸಿದ್ದ ಎಂದು ಪೊಲೀಸರು ಹೇಳಿದರು.

ಅದೇ ವೇಳೆ ವಿದ್ಯಾರ್ಥಿನಿಯೊಬ್ಬರ ಸ್ನೇಹಿತ ಕೊಠಡಿ ಬಳಿ ಬಂದಿದ್ದ. ಆರೋಪಿಯು ಆರು ತಿಂಗಳ ಹಿಂದೆ ತನ್ನನ್ನು ಬೆದರಿಸಿ ಹಣ ವಸೂಲಿ ಮಾಡಿದ್ದ ಎಂದು ತಿಳಿಸಿ, ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದ. ಸ್ಥಳಕ್ಕೆ ಬಂದ ಹೊಯ್ಸಳ ಸಿಬ್ಬಂದಿ, ಸುರೇಶ್ ಕುಮಾರ್‌ನನ್ನು ವಶಕ್ಕೆ ಪಡೆದು ಸದಾಶಿವನಗರ ಠಾಣೆಗೆ ಒಪ್ಪಿಸಿದ್ದಾರೆ.

ಹೆಬ್ಬಾಳ ಠಾಣೆ ಪೊಲೀಸರ ಕಾರ್ಯಾಚರಣೆ: ಆರು ಮಂದಿ ಬಂಧನ

'ಹನಿಟ್ರ್ಯಾಪ್' ಮಾಡಿ ಸುಲಿಗೆ

ಪ್ರಜಾವಾಣಿ ವಾರ್ತೆ

ಮಂಜುಳಾ ವಿಜಯಮ್ಮ ಲೀಲಾವತಿ ಶಿಲ್ಪಾ ವೆಂಕಟೇಶ್ ಹರೀಶ್

ಅಪರಾಧ ಸುದ್ದಿ

ಬೆಂಗಳೂರು: ಮದುವೆಗೆ ವಧು ತೋರಿಸುವ ನೆಪದಲ್ಲಿ ಹನಿಟ್ರ್ಯಾಪ್ ಮಾಡಿ ಸುಲಿಗೆ ಮಾಡುತ್ತಿದ್ದ ನಾಲ್ವರು ಮಹಿಳೆಯರೂ ಸೇರಿದಂತೆ ಆರು ಆರೋಪಿಗಳನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭದ್ರಪ್ಪ ಲೇಔಟ್‌ನ ಮಂಜುಳಾ (45), ಮಂಗನಹಳ್ಳಿ ತಾವರೆಕೆರೆಯ ಶಿಲ್ಪಾ (45), ಎಂ.ಎಸ್.ಪಾಳ್ಯದ ಲೀಲಾವತಿ (37), ಹೆಬ್ಬಾಳದ ವಿಜಯಮ್ಮ (52) ಹಾಗೂ ಎಚ್. ವೆಂಕಟೇಶ್, ವಿದ್ಯಾರಣ್ಯಪುರದ ಎಂ.ಹರೀಶ್ (41) ಬಂಧಿತರು.

ನ್ಯಾಯಾಲಯವು ಎಲ್ಲ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖ ಆರೋಪಿ ಮಂಜುಳಾಗೆ ಕೆಲ ದಿನಗಳ ಹಿಂದೆ ಯುವಕನೊಬ್ಬ ಪರಿಚಯವಾಗಿದ್ದ. 'ವಧು ಹುಡುಕುತ್ತಿದ್ದು, ಕನ್ಯೆ ಇದ್ದರೆ ಹೇಳಿ' ಎಂದು ಮಂಜುಳಾ ಬಳಿ ಯುವಕ ಹೇಳಿದ್ದ. ಹೆಬ್ಬಾಳದ ತನ್ನ ಸ್ನೇಹಿತೆ ಮನೆಗೆ ಹೋದರೆ ಕನ್ಯೆ ತೋರಿಸುವುದಾಗಿ ಮಂಜುಳಾ ಹೇಳಿದ್ದಳು. ಅದರಂತೆ ಮಂಜುಳಾ ಸ್ನೇಹಿತೆ ವಿಜಯಲಕ್ಷ್ಮಿ ಮನೆಗೆ ಯುವಕ ಹೋಗಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮನೆಯಲ್ಲಿ ಲೀಲಾವತಿ ಎಂಬ ಯುವತಿಯನ್ನು ವಿಜಯಲಕ್ಷ್ಮಿ ಪರಿಚಯಿಸಿದ್ದಳು. ಕೆಲವೇ ಹೊತ್ತಿನಲ್ಲಿ ಇಬ್ಬರೂ ಮಾತನಾಡುತ್ತಿರಿ ಎಂದು ಹೇಳಿ ವಿಜಯಲಕ್ಷ್ಮಿ ಹೊರಕ್ಕೆ ಹೋಗಿದ್ದಳು. ಕೆಲವೇ ಹೊತ್ತಿನಲ್ಲಿ ಪೊಲೀಸರ ಸೋಗಿನಲ್ಲಿ ಗೀತಾ, ಹರೀಶ ಮತ್ತು ವೆಂಕಟೇಶ ಮನೆಗೆ ಬಂದಿದ್ದರು. ಮನೆಯಲ್ಲಿ ವೈಶ್ಯಾವಾಟಿಕೆ ನಡೆಯುತ್ತಿದೆ, ಜೈಲಿಗೆ ಕಳುಹಿಸುತ್ತೇವೆ ಬೆದರಿಕೆ ಹಾಕಿದ್ದರು. ಬೆದರಿದ್ದ ಯುವಕ, ಫೋನ್ ಪೇ ಮೂಲಕ ₹50 ಸಾವಿರ ನೀಡಿದ್ದ' ಎಂದು ಮೂಲಗಳು ತಿಳಿಸಿವೆ.

ಕಾಣೆಯಾಗಿದ್ದಾರೆ



ಕೃಷ್ಣಪ್ಪ, ವಯಸ್ಸು 68 ವರ್ಷ
ಎಡ ಕಾಲು ಸ್ವಲ್ಪ ಕುಂಟು, ಕಂದು ಬಣ್ಣ, ಕೋಲು ಮುಖ ದಿನಾಂಕ : 07/05/2024ರಿಂದ ದೊಡ್ಡಬಳ್ಳಾಪುರದಿಂದ ಕಾಣೆಯಾಗಿರುತ್ತಾರೆ. ಯಾರಾದರೂ ಕಂಡಲ್ಲಿ ಸಂಪರ್ಕಿಸಿ:
9538177106

ಸೈಬರ್ ವಂಚಕ ಸೆರೆ: ₹1.7 ಲಕ್ಷ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟ್ರಾಯ್ ಅಧಿಕಾರಿಯ ಸೋಗಿನಲ್ಲಿ ಕರೆ ಮಾಡಿ ಗೃಹಿಣಿಯೊಬ್ಬರಿಗೆ ₹39.74 ಲಕ್ಷ ವಂಚನೆ ಮಾಡಿದ್ದ ಆರೋಪದಡಿ ಪರಪ್ಪನ ಅಗ್ರಹಾರದ ನಿವಾಸಿ ಕವಿ ಅರಸು ಅವರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯ ಮನೆಯಿಂದ ₹1.07 ಲಕ್ಷ ವಶಕ್ಕೆ ಪಡೆಯಲಾಗಿದೆ. ಆತನನ್ನು ಕೋರ್ಟ್‌ಗೆ ಹಾಜರುಪಡಿಸಿದ್ದು, ಕೋರ್ಟ್ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಉಳಿದ ಆರೋಪಿಗಳ ಪತ್ತೆಗೆ ಶೋಧ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕೆಲ ವರ್ಷಗಳ ಹಿಂದೆ ತಮಿಳುನಾಡಿನಿಂದ ನಗರಕ್ಕೆ ಬಂದಿದ್ದ ಆರೋಪಿ, ಪರಪ್ಪನ ಅಗ್ರಹಾರದಲ್ಲಿರುವ ಬಾಡಿಗೆ ಮನೆಯಲ್ಲಿ ವಾಸವಾಗಿದ್ದ. ಜೀವನ ನಿರ್ವಹಣೆಗಾಗಿ ಐಸ್ ಕ್ರೀಮ್ ಪಾರ್ಲರ್ ಇಟ್ಟುಕೊಂಡು, ಮುಂಬೈನಲ್ಲಿರುವ ಕಿಂಗ್‌ಪಿನ್‌ನ ಸೂಚನೆ ಮೇರೆಗೆ ಸೈಬರ್ ವಂಚನೆಗೆ ಇಳಿದಿದ್ದ' ಎಂದು ಹೇಳಿದರು.

'ಮುಂಬೈನಲ್ಲಿರುವ ಅಪರಿಚಿತ ವ್ಯಕ್ತಿ ಡಿಸೆಂಬರ್ 24ರಂದು ಟ್ರಾಯ್ ಅಧಿಕಾರಿ ಹೆಸರಿನಲ್ಲಿ ಮಹಿಳೆಗೆ ಕರೆ ಮಾಡಿ, 'ಸಿಬಿಐನಲ್ಲಿ ನಿಮ್ಮ ನಂಬರ್ ಮೇಲೆ ದೂರು ದಾಖಲಾಗಿರುವ ಕಾರಣ ಏರ್‌ಟೆಲ್ ಸಿಮ್ ಕಾರ್ಡ್ ಬ್ಲಾಕ್ ಮಾಡಲಾಗಿದೆ. ನೀರವ್ ಅಗರ್‌ವಾಲ್ ಎಂಬ ವ್ಯಕ್ತಿಯ ಜೊತೆ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವುದು ಕಂಡು ಬಂದಿದೆ. ತಕ್ಷಣ ದೆಹಲಿಗೆ ಬರಬೇಕಾಗುತ್ತದೆ' ಎಂದು ಹೇಳಿದ್ದಾನೆ. ಕೆಲ ಸಮಯದ ಬಳಿಕ ವಾಟ್ಸ್‌ಆ್ಯಪ್ ಕರೆ ಮಾಡಿದ ವಂಚಕ, 'ನಿಮ್ಮ ಬ್ಯಾಂಕ್ ಖಾತೆಯಿಂದ ಹಣ ಅಕ್ರಮವಾಗಿ ವರ್ಗಾವಣೆ ಆಗಿರುವ ಕಾರಣ ನಿಮ್ಮನ್ನು 'ಡಿಜಿಟಲ್ ಅರೆಸ್ಟ್' ಮಾಡಿದ್ದೇವೆ. ಈ ಪ್ರಕರಣದಿಂದ ಹೊರ ಬರಬೇಕಾದರೆ ಹಣ ನೀಡಬೇಕೆಂದು ₹39,74 ಲಕ್ಷ ವರ್ಗಾವಣೆ ಮಾಡಿಸಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು, ದೂರುದಾರರ ಖಾತೆಯಿಂದ ವರ್ಗಾವಣೆಯಾದ ಬ್ಯಾಂಕ್ ಖಾತೆಗಳ ವಿವರ ಪರಿಶೀಲಿಸಿದಾಗ ಆರೋಪಿ ಖಾತೆಗೆ ₹6.52 ಲಕ್ಷ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದರು.

'ಆರೋಪಿ ಕವಿ ಅರಸು, ಮುಂಬೈನಲ್ಲಿರುವ ವ್ಯಕ್ತಿ ಜೊತೆ ಸುಮಾರು ಒಂದು ವರ್ಷದಿಂದ ಸಂಪರ್ಕ-ದಲ್ಲಿದ್ದಾನೆ. ವಂಚನೆ ಹಣವನ್ನು ನಕಲಿ ಖಾತೆಗಳಿಗೆ ವರ್ಗಾವಣೆ ಮಾಡಿದ ಬಳಿಕ ಆರೋಪಿ, ಹಣವನ್ನು ಚೆಕ್ ಮೂಲಕ ಡ್ರಾ ಮಾಡಿ, ಕ್ರಿಪ್ಟೋ ಕರೆನ್ಸಿಗೆ ಪರಿವರ್ತಿಸಿ ಕೊಡುತ್ತಾನೆ' ಎಂದು ಪೊಲೀಸರು ಹೇಳಿದರು.

7 ದ್ವಿಚಕ್ರ ವಾಹನ, ಆಟೊ ವಶ

ಬೆಂಗಳೂರು: ದ್ವಿಚಕ್ರ ವಾಹನ ಮತ್ತು ಆಟೊ ಕಳವು ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿರುವ ಚಂದ್ರಾ ಲೇಔಟ್ ಠಾಣೆ ಪೊಲೀಸರು, ₹ 4.87 ಲಕ್ಷ ಮೌಲ್ಯದ ಏಳು ದ್ವಿಚಕ್ರ ವಾಹನ ಮತ್ತು ಒಂದು ಆಟೊ ರಿಕ್ಷಾ ವಶಪಡಿಸಿಕೊಂಡಿದ್ದಾರೆ.

ಗೋರಿಪಾಳ್ಯ ನಿವಾಸಿ ಮಜಿದ್ ಪಾಷಾ (24) ಬಂಧಿತ ಆರೋಪಿ. ಕೆನರಾ ಬ್ಯಾಂಕ್ ಕಾಲೊನಿಯ ನಿವಾಸಿಯೊಬ್ಬರು ತಮ್ಮ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವಾಗಿತ್ತು. ಈ ಬಗ್ಗೆ ಠಾಣೆಗೆ ದೂರು ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲಸ ಕಾಯಂ, ಅಂತರ್ ಜಿಲ್ಲಾ ವರ್ಗಾವಣೆಗೆ ಸಮುದಾಯ ಆರೋಗ್ಯಾಧಿಕಾರಿಗಳ ಹಕ್ಕೊತ್ತಾಯ

ವೇತನ ಹೆಚ್ಚಳ, ವರ್ಗಾವಣೆಗೆ ಸಿ.ಎಂ ಅಸ್ತು

ಪ್ರಜಾವಾಣಿ ವಾರ್ತೆ

ಮೈಸೂರು: 'ಸಮುದಾಯ ಆರೋಗ್ಯಾಧಿಕಾರಿಗಳಿಗೆ ಬಾಕಿ ಉಳಿದಿರುವ 2022–23ನೇ ಸಾಲಿನ ಶೇ 5ರಷ್ಟು ವೇತನ ಹೆಚ್ಚಿಸಲಾಗುವುದು. 3 ಹಾಗೂ 5 ವರ್ಷ ಸೇವಾವಧಿ ಪೂರ್ಣಗೊಳಿಸಿದವರಿಗೆ ಬೋನಸ್ ನೀಡಲಾಗುವುದು ಮತ್ತು ಅಂತರಜಿಲ್ಲಾ ವರ್ಗಾವಣೆಗೆ ಅವಕಾಶ ಕಲ್ಪಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

'ಆರು ವರ್ಷ ಸೇವೆ ಪೂರ್ಯೆಸಿದವರ ಕೆಲಸ ಕಾಯಂಗೊಳಿಸಬೇಕು' ಎಂಬ ಪ್ರಮುಖ ಬೇಡಿಕೆಯೊಂದಿಗೆ ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ (ಎನ್‌ಎಚ್‌ಎಂ) ಗುತ್ತಿಗೆ ನೌಕರರ ಸಂಘವು ನಗರದಲ್ಲಿ ಶನಿವಾರ ಆಯೋಜಿಸಿದ್ದ 'ರಾಜ್ಯಮಟ್ಟದ ಪ್ರಥಮ ಸಮುದಾಯ ಆರೋಗ್ಯ ಅಧಿಕಾರಿಗಳ ಸಂರಕ್ಷಣಾ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಹಿಂದಿನ ಸರ್ಕಾರದಲ್ಲಿ ಸಿಎಚ್‌ಒಗಳಿಗೆ ಶೇ 5ರಷ್ಟು ವೇತನ ಹೆಚ್ಚಿಸಿರಲಿಲ್ಲ. ಅದನ್ನೀಗ ಮಾಡುತ್ತೇವೆ. ಆರೋಗ್ಯ ವಿಮೆ ಒದಗಿಸಲಾಗುವುದು. ಜೀವ ವಿಮೆ ಯೋಜನೆಯನ್ನು ಈಗಾಗಲೇ ಜಾರಿಗೊಳಿಸಲಾಗಿದೆ' ಎಂದರು.

'ಗುತ್ತಿಗೆ ನೌಕರರು ಎಲ್ಲ ಇಲಾಖೆಗಳಲ್ಲೂ ಇದ್ದು, ಕಾಯಂಗೊಳಿಸುವಂತೆ ಅವರೆಲ್ಲರಿಂದಲೂ ಬೇಡಿಕೆ ಇದೆ. ಸಿಎಚ್‌ಒಗಳ ಬಗ್ಗೆ ಕಾಳಜಿಯಿಂದ ಚರ್ಚಿಸಲಾಗುವುದು. ಬೇಡಿಕೆಗಳನ್ನು ಮಂಡಿಸುವುದು ನಿಮ್ಮ ಹಕ್ಕು; ಪರಿಶೀಲಿಸುವುದು ನಮ್ಮ ಕರ್ತವ್ಯ. ಸರ್ಕಾರ ನಿಮ್ಮೊಂದಿಗಿದೆ' ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ನೌಕರರು ರಾಷ್ಟ್ರೀಯ ಆರೋಗ್ಯ ಮಿಷನ್ ಅಡಿ ಕಾರ್ಯನಿರ್ವಹಿಸುತ್ತಿರುವುದರಿಂದ ಕಾಯಂಗೊಳಿಸುವುದು ಕಷ್ಟಸಾಧ್ಯ. ಕೇಂದ್ರ ಸರ್ಕಾರದೊಂದಿಗೆ ಚರ್ಚಿಸಬೇಕಾಗುತ್ತದೆ. ಎನ್‌ಎಚ್‌ಎಂ ವ್ಯಾಪ್ತಿಯಲ್ಲಿರುವ ಎಲ್ಲರಿಗೂ ಅನ್ವಯಿಸಬೇಕಾಗುತ್ತದೆ. ಪ್ರಯತ್ನಿಸಲಾಗುವುದು. ಪ್ರೋತ್ಸಾಹಧನ ಹೆಚ್ಚಳಕ್ಕೆ ಸಿಎಂ ಜೊತೆ ಚರ್ಚಿಸುವೆ' ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಶಾಸಕ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಕೆ.ವಿವೇಕಾನಂದ ಸಂಘದ ಅಧ್ಯಕ್ಷ ಮಮಿತ ಗಾಯಕವಾಡ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು

- ಸಮುದಾಯ ಆರೋಗ್ಯ ಅಧಿಕಾರಿಗಳ ಶಕ್ತಿ ಪ್ರದರ್ಶನ
- ರಾಜ್ಯದಲ್ಲಿ 6,500 ಮಂದಿ ಸಿಎಚ್‌ಒಗಳು
- ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲಿ ಕಾರ್ಯ ನಿರ್ವಹಣೆ

ನಾನೂ ಹಿಂದೆ ಯೋಗ ಮಾಡುತ್ತಿದ್ದೆ. ಈಗ ಬಿಟ್ಟು ಬಿಟ್ಟಿದ್ದೀನಿ. ಅದರಿಂದಾಗಿ ಸ್ವಲ್ಪ ದಪ್ಪ ಆಗ್ಬಿಟ್ಟಿದ್ದೀನಿ
ಸಿದ್ದರಾಮಯ್ಯ, ಮುಖ್ಯಮಂತ್ರಿ

'ಗೃಹ ಆರೋಗ್ಯ' ಯೋಜನೆಯನ್ನು ಮಾರ್ಚ್‌ನಿಂದ ರಾಜ್ಯದಾದ್ಯಂತ ಜಾರಿಗೊಳಿಸಲಾಗುವುದು
ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

ಮೈಸೂರಿನ ಮಹಾರಾಜ ಮೈದಾನದಲ್ಲಿ ಶನಿವಾರ ಅಖಿಲ ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ (ಎನ್‌ಎಚ್‌ಎಂ) ಗುತ್ತಿಗೆ ನೌಕರರ ಸಂಘದಿಂದ ಆಯೋಜಿಸಿದ್ದ 'ರಾಜ್ಯಮಟ್ಟದ ಪ್ರಥಮ ಸಮುದಾಯ ಆರೋಗ್ಯ ಅಧಿಕಾರಿಗಳ ಸಂರಕ್ಷಣಾ ಸಮಾವೇಶ'ದಲ್ಲಿ ಪಾಲ್ಗೊಂಡಿದ್ದವರು – ಪ್ರಜಾವಾಣಿ ಚಿತ್ರ

ಸಿಎಚ್‌ಒಗಳ ಹಕ್ಕೊತ್ತಾಯಗಳು

- ಸಿಎಚ್‌ಒ ಹುದ್ದೆಗೆ ಹೊಸದಾಗಿ ವೃಂದ ಸೃಜಿಸಿ ಕಾಯಂಗೊಳಿಸಬೇಕು
- ಪ್ರೋತ್ಸಾಹಧನವನ್ನು ₹6ಸಾವಿರದಿಂದ ₹15ಸಾವಿರಕ್ಕೆ ಏರಿಸಬೇಕು
- ಎನ್‌ಎಚ್‌ಎಂ ಅಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರಿಗೆ ಶೇ 15ರಷ್ಟು ವೇತನ ಹೆಚ್ಚಿಸಲಾಗುತ್ತದೆ. ಅದರಲ್ಲಿ ಸಿಎಚ್‌ಒಗಳನ್ನೂ ಪರಿಗಣಿಸಬೇಕು.
- 3 ವರ್ಷ ಸೇವೆ ಪೂರ್ಯೆಸಿದವರಿಗೆ ಶೇ 10 ಹಾಗೂ 5 ವರ್ಷ ಸೇವೆ ಮಾಡಿದವರಿಗೆ ಶೇ 5ರಷ್ಟು ಬೋನಸ್ ಕೊಡಬೇಕು.
- ಸರ್ಕಾರಿ ನೌಕರರಂತೆ ಸಿಎಚ್‌ಒಗಳಿಗೂ ಆರೋಗ್ಯ ವಿಮೆ ಜಾರಿಗೊಳಿಸಬೇಕು.

ಸುದ್ದಿ 2 ನಿಮಿಷ

'ರಿಯಲ್ ಎಸ್ಟೇಟ್, ಬಡ್ಡಿ ವ್ಯವಹಾರ ಬಿಟ್ಟು ಪಾಠ ಮಾಡಿ'

ತುಮಕೂರು: ಕೆಲವು ಶಿಕ್ಷಕರು ಪಾಠ ಮಾಡದೆ ರಾಜಕಾರಣ ಮಾಡಿಕೊಂಡು ಬಡ್ಡಿ ವ್ಯವಹಾರ ನಡೆಸುತ್ತಾರೆ. ಇನ್ನೂ ಕೆಲವರು ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು ರಿಯಲ್ ಎಸ್ಟೇಟ್ ಉದ್ಯಮ ನೋಡಿಕೊಳ್ಳುತ್ತಾರೆ. ಅಂಥವರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ ಎಸ್. ಮಧು ಬಂಗಾರಪ್ಪ ಎಚ್ಚರಿಸಿದರು.

ನಗರದ ಜಿಲ್ಲಾ ಪಂಚಾಯಿತಿಯಲ್ಲಿ ಶನಿವಾರ ನಡೆದ ಶಾಲಾ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, ಶಿಕ್ಷಕರು ಇಲಾಖೆಯ ಕೆಲಸ ಮಾತ್ರ ಮಾಡಬೇಕು ಎಂದು ಸೂಚಿಸಿದರು.

ಈ ಬಾರಿಯ ಬಜೆಟ್‌ನಲ್ಲಿ ಕನಿಷ್ಠ 10 ಸಾವಿರ ಶಿಕ್ಷಕರ ನೇಮಕಕ್ಕೆ ಅನುಮತಿ ನೀಡುವಂತೆ ಮುಖ್ಯಮಂತ್ರಿಗೆ ಮನವಿ ಮಾಡಲಾಗುವುದು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ ಶೇ 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಅಗತ್ಯ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ದರೋಡೆ: ಮತ್ತೊಬ್ಬ ಆರೋಪಿಗೆ ಗುಂಡೇಟು

ಉಳ್ಳಾಲ (ದಕ್ಷಿಣ ಕನ್ನಡ): ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆ ದರೋಡೆ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಮುರುಗಂಡಿ ಥೇವರ್ ಮೇಲೆ ಪೊಲೀಸರು ಗುಂಡು ಹಾರಿಸಿದ್ದಾರೆ.

ಮುರುಗಂಡಿ ಥೇವರ್ ಮತ್ತು ಯೋಶುವಾ ರಾಜೇಂದ್ರನ್ ಅವರನ್ನು ತಮಿಳುನಾಡಿನ ತಿರುನಲ್ವೇಲಿಯಲ್ಲಿ ಬಂಧಿಸಿ ಮಂಗಳೂರಿಗೆ ಕರೆತರಲಾಗಿತ್ತು. ಹೆಚ್ಚಿನ ತನಿಖೆಗಾಗಿ ಅವರನ್ನು ಫೆ.3ರ ವರೆಗೆ ನ್ಯಾಯಾಲಯ ಪೊಲೀಸ್ ವಶಕ್ಕೆ ಒಪ್ಪಿಸಿತ್ತು.

ಕರ್ನಾಟಕ- ಕೇರಳ ಗಡಿಭಾಗದ ಅಜ್ಜಿನಡ್ಕ ಸಮೀಪದಲ್ಲಿ ಸ್ಥಳ ಮಹಜರು ನಡೆಸಲು ಶನಿವಾರ ಮಧ್ಯಾಹ್ನ ಕರೆದೊಯ್ಯಲಾಗಿತ್ತು. ಪೊಲೀಸರ ಮೇಲೆ ದಾಳಿ ನಡೆಸಿ ತಪ್ಪಿಸಿಕೊಳ್ಳಲು ಯತ್ನಿಸಿದ್ದ ಮುರುಗಂಡಿ ಥೇವರ್ ಮೇಲೆ, ಉಳ್ಳಾಲ ಠಾಣೆಯ ಇನ್‌ಸ್ಪೆಕ್ಟರ್ ಬಾಲಕೃಷ್ಣ ಗುಂಡು ಹಾರಿಸಿದ್ದು, ಕಾಲಿಗೆ ಗುಂಡೇಟು ತಗುಲಿದೆ. ಆತನನ್ನು ದೇರಳಕಟ್ಟೆಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸ್ ಸಿಬ್ಬಂದಿ ಮಂಜುನಾಥ್‌ಗೆ ಗಾಯವಾಗಿದೆ ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ವಾಮಾಚಾರ: ಸ್ನೇಹಮಯಿ ಕೃಷ್ಣ ಆರೋಪ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ (ಹಾಸನ): 'ಮುಡಾ ಹಗರಣದ ಆರೋಪಿಗಳಿಗೆ ಶಿಕ್ಷೆಯಾಗಬೇಕೆಂದು ಹೋರಾಡುತ್ತಿರುವುದರಿಂದಲೇ ನನ್ನ ವಿರುದ್ಧ ಮಂಗಳೂರಿನಲ್ಲಿ ವಾಮಾಚಾರ ಮಾಡಲಾಗಿದೆ' ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, '2004-05ರಲ್ಲಿ ಸಿದ್ದರಾಮಯ್ಯ ಉಪ ಮುಖ್ಯಮಂತ್ರಿಯಾಗಿದ್ದಾಗ ಪ್ರಸಾದ್ ಅತ್ತಾವರ ಅನುಕೂಲ ಪಡೆದಿದ್ದಾರೆ. ಮುಡಾ ಹಗರಣದಲ್ಲಿ ನಾನು ಮುಖ್ಯಮಂತ್ರಿ ವಿರುದ್ಧ ಹೋರಾಡುತ್ತಿದ್ದೇನೆ. ನನಗೆ ಭೀತಿ ಇಲ್ಲ. ವಾಮಾಚಾರಕ್ಕೆ ಹೆದರುವುದಿಲ್ಲ. ನನ್ನ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ' ಎಂದರು.

'ಹಗರಣ ಮುಚ್ಚಿ ಹಾಕಲು ಆಮಿಷ ಒಡ್ಡುವ ಪ್ರಯತ್ನ ನಡೆಯುತ್ತಿದೆ. ನಾನು ಜಗ್ಗುವುದಿಲ್ಲ. ನನ್ನ ಬಳಿ ಎಲ್ಲ ದಾಖಲೆಗಳಿವೆ ಎಂದರು.

ಕೇಂದ್ರ ಸರ್ಕಾರದ ಬಜೆಟ್ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕೆ

ದೇಶದ ಮೇಲೆ ₹205 ಲಕ್ಷ ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಮೈಸೂರು: 'ಈ ವರ್ಷದ ಬಜೆಟ್ ಗಾತ್ರ ₹50.65 ಲಕ್ಷ ಕೋಟಿ ಆಗಿದ್ದು, ಸಾಲದ ಮೊತ್ತ ₹15.68 ಲಕ್ಷ ಕೋಟಿ ಹಾಗೂ ಬಡ್ಡಿ ಪಾವತಿಗೆ ₹12.70 ಲಕ್ಷ ಕೋಟಿ ನೀಡುತ್ತಿದೆ. ಈ ದೇಶದ ಮೇಲೆ ಕೇಂದ್ರ ಸರ್ಕಾರ ₹202 ಲಕ್ಷದಿಂದ ₹205 ಲಕ್ಷ ಕೋಟಿ ಸಾಲ ಹೊರಿಸಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ನರೇಗಾಕ್ಕೆ ಕಳೆದ ಬಜೆಟ್‌ನಲ್ಲಿ ₹89,154 ಕೋಟಿ ನೀಡಿದ್ದರೆಈಗ ₹86 ಸಾವಿರ ಕೋಟಿಗೆ ಇಳಿಸಿದ್ದಾರೆ. ಕೃಷಿ ಸಿಂಚಾಯ್ ಯೋಜನೆ ಅನುದಾನ ₹8,250 ರಿಂದ ₹8260 ಕೋಟಿಗಷ್ಟೇ ಏರಿಕೆಯಾಗಿದೆ. ಎಸ್ ಸಿ/ ಎಸ್ ಟಿ ವಿದ್ಯಾರ್ಥಿವೇತನ ಏರಿಸಿಲ್ಲ. ಬೆಳೆ ವಿಮೆಗೆ ಕಳೆದ ವರ್ಷ ₹15,864 ಕೋಟಿ ಇದ್ದು, ಈಗ ₹12,242 ಕೋಟಿಗೆ ಇಳಿಸಿದ್ದಾರೆ' ಎಂದು ದೂರಿದರು.

'ಮೇಕ್ ಇನ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ, ಸಬ್ ಕಾ ಸಾಥ್ ಘೋಷಣೆ ಯಥೇಚ್ಛವಾಗಿ ಬಳಸಿದ್ದಾರೆ. ಆದರೆ ಮೇಕ್ ಇನ್ ಇಂಡಿಯಾಗೆ ಕೊಟ್ಟಿರುವುದು ಕೇವಲ ₹100 ಕೋಟಿ. ಕೃಷಿ ಕ್ಷೇತ್ರದ ಅನುದಾನ ಕಡಿಮೆಯಾಗಿದೆ. ಆಹಾರ ಖಾತ್ರಿಗೆ ಕಳೆದ ಬಜೆಟ್‌ನಲ್ಲಿ ₹2.06 ಲಕ್ಷ ಕೋಟಿ ಇದ್ದರೆ, ಈಗ ₹2.03 ಲಕ್ಷ ಕೋಟಿಗೆ ಇಳಿಸಲಾಗಿದೆ. ಯುವಜನರು, ಮಹಿಳೆಯರ ಬದಲಿಗೆ ಕಾರ್ಪೊರೇಟ್ ಕ್ಷೇತ್ರಕ್ಕೆ ಹೆಚ್ಚು ಅನುದಾನ ದೊರೆತಿದೆ. ಟೆಲಿಕಾಂ ಕ್ಷೇತ್ರದ ಮೂಲಸೌಕರ್ಯಕ್ಕೆ ₹28 ಸಾವಿರ ಕೋಟಿ ಕೊಡಲಾಗಿದೆ' ಎಂದರು.

'ಹಿಂದಿನ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಘೋಷಿಸಲಾಗಿತ್ತು. ಈವರೆಗೆ ಒಂದು ರೂಪಾಯಿ ಬಂದಿಲ್ಲ. ಬೊಮ್ಮಾಯಿ ರಾಜ್ಯ ಬಜೆಟ್ ಮಂಡಿಸುವಾಗ ಭದ್ರಾ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಮಾಡುತ್ತೇವೆ ಎಂದಿದ್ದರು. ಅದರ ಪ್ರಸ್ತಾವವಿಲ್ಲ. ಮೇಕೆದಾಟು, ಮಹದಾಯಿ, ಕೃಷ್ಣಾ, ಭದ್ರಾ ಯೋಜನೆಗೆ ಅನುದಾನ ನೀಡಿಲ್ಲ' ಎಂದರು.

'ರಾಯಚೂರಿನಲ್ಲಿ ಏಮ್ಸ್ ಘೋಷಣೆ ಮಾಡಬಹುದೆಂಬ ನಿರೀಕ್ಷೆ ಇತ್ತು. ಸಚಿವ ಜೆ.ಪಿ. ನಡ್ಡಾ ಭರವಸೆ ನೀಡಿದ್ದರು. ಅದರ ಪ್ರಸ್ತಾವವೂ ಇಲ್ಲ. ಕುಡಿಯುವ ನೀರು, ಹೆದ್ದಾರಿಗೆ, ಬೆಂಗಳೂರಿನಲ್ಲಿ ಮೂಲ ಸೌಕರ್ಯ, ರಾಜಕಾಲುವೆ ನಿರ್ವಹಣೆ, ಬಿಜಿನೆಸ್ ಕಾರಿಡಾರ್‌ಗೆ ಹಣ ಒದಗಿಸಬೇಕೆಂಬ ಮನವಿಯನ್ನು ತಿರಸ್ಕರಿಸಿದ್ದಾರೆ. ವಸತಿ ಯೋಜನೆಯ ಸಹಾಯಧನವನ್ನೂ ಹೆಚ್ಚಿಸಿಲ್ಲ. ಅಂಗನವಾಡಿ, ಆಶಾ ಕಾರ್ಯಕರ್ತರ ಗೌರವ ಧನ ಹೆಚ್ಚಿಸಿಲ್ಲ. ಐಸಿಡಿಎಸ್ ಯೋಜನೆ ಕೇಂದ್ರ ಸರ್ಕಾರದ್ದಲ್ಲವೇ' ಎಂದು ಪ್ರಶ್ನಿಸಿದರು.

'ಬಿಹಾರದಲ್ಲಿ ಚುನಾವಣೆ ಇರುವುದರಿಂದ ಬಜೆಟ್‌ನಲ್ಲಿ 3-4 ಬಾರಿ ಪ್ರಸ್ತಾಪವಾಗಿದೆ. ಮುಂದಿನ ದಿನಗಳಲ್ಲಿ ಅದಕ್ಕೂ ಚೆಂಬು ನಿಶ್ಚಿತ' ಎಂದು ಟೀಕಿಸಿದರು.

'ಬಿಜೆಪಿ ನಾಯಕರಿಗೆ ಧೈರ್ಯವಿಲ್ಲ'

'ತೆರಿಗೆ ಹಂಚಿಕೆಯಲ್ಲಿ ಆಗಿರುವ ಅನ್ಯಾಯವನ್ನು ರಾಜ್ಯದ ಬಿಜೆಪಿ ನಾಯಕರು ಪ್ರಶ್ನಿಸಿಲ್ಲ. ಅವರಿಂದಲೇ ಅನ್ಯಾಯವಾಗಿದೆ. ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಎಚ್.ಡಿ. ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಸೋಮಣ್ಣ ಅವರಿಗೆ ಮೋದಿ ಮುಂದೆ ಮಾತನಾಡುವ ಧೈರ್ಯವಿಲ್ಲ' ಎಂದು ಮುಖ್ಯಮಂತ್ರಿ ವಿಷಾದಿಸಿದರು.

'ರೈತರು ದೀರ್ಘಕಾಲ ಹೋರಾಡಿದ್ದರೂ ಎಂಎಸ್‌ಪಿಗೆ ಕಾನೂನು ತಂದಿಲ್ಲ. ಆದಾಯ ತೆರಿಗೆ ಮಿತಿ ಇಳಿಕೆಯಿಂದ ಬಡವರು, ಕಾರ್ಮಿಕರಿಗೆ ಉಪಯೋಗವಿವಿಲ್ಲ. ನನಗೆ ಕೇಂದ್ರ ಸರ್ಕಾರದ ಮೇಲೆ ನಿರೀಕ್ಷೆ, ವಿಶ್ವಾಸವಿಲ್ಲ. ಆದರೂ ಅನ್ಯಾಯವನ್ನು ಮೋದಿ, ನಿರ್ಮಲಾ ಹಾಗೂ 16ನೇ ಹಣಕಾಸು ಆಯೋಗದ ಮುಂದೆಯೂ ಪ್ರಶ್ನಿಸುತ್ತೇವೆ' ಎಂದರು.

'ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದಕ್ಕೆ ದ್ವೇಷ ತೀರಿಸಿಕೊಳ್ಳುತ್ತಿದ್ದಾರೆ. ಮನುಸ್ಮೃತಿ ವಿರುದ್ಧ ಮಾತನಾಡುವ ಎಲ್ಲ ರಾಜ್ಯಗಳಿಗೂ ಅನ್ಯಾಯವಾಗಿದೆ' ಎಂದರು.

ಅರ್ಚಕರ ಮೇಲೆ ಹಲ್ಲೆ: ಮೂವರ ಬಂಧನ

ಮಡಿಕೇರಿ: ತಾಲ್ಲೂಕಿನ ಕಟ್ಟೆಮಾಡು ಗ್ರಾಮದ ಮಹಾಮೃತ್ಯುಂಜಯ ದೇಗುಲದ ಅರ್ಚಕ ವಿಘ್ನೇಶ್‌ಭಟ್ ಮೇಲೆ ಹಲ್ಲೆ ನಡೆಸಿದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ತಾಲ್ಲೂಕಿನ ನಾಲ್ಕೇರಿ ಗ್ರಾಮದ ಎಂ.ಬಿ. ಅಯ್ಯಪ್ಪ ಅಲಿಯಾಸ್ ಅನಿಲ (46), ಎಂ.ಪಿ. ಕಾಳಪ್ಪ (51) ಹಾಗೂ ಟಿ.ಎಲ್. ಸುಬ್ಬಯ್ಯ ಅಲಿಯಾಸ್ ಸುನಿ (47) ಬಂಧಿತರು.

ಪರಾರಿಯಾಗಲು ಅವರಿಗೆ ಸಹಕರಿಸಿದ ಇಬ್ಬರು ಆರೋಪಿಗಳನ್ನು ಶುಕ್ರವಾರ ಪೊಲೀಸರು ಬಂಧಿಸಿದ್ದರು.

ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ 5ಕ್ಕೆ ಏರಿದೆ. ಈಚೆಗೆ ನಡೆದ ದೇಗುಲದ ವಾರ್ಷಿಕೋತ್ಸವದಲ್ಲಿ ಕೊಡವ ಸಾಂಪ್ರದಾಯಿಕ ಉಡುಪು ತೊಟ್ಟು ಬಂದ ಪುರುಷರನ್ನು ತಡೆದರು ಎಂಬ ಕಾರಣಕ್ಕೆ ವಿವಾದ ಸೃಷ್ಟಿಯಾಗಿತ್ತು.

ಕಲಾತಂಡಗಳ ಮೆರುಗು...

ಮಡಿವಾಳ ಮಾಚಿದೇವ ಜಯಂತಿ ಅಂಗವಾಗಿ ಮೈಸೂರಿನಲ್ಲಿ ಶನಿವಾರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅರಮನೆ ಕೋಟೆ ಆಂಜನೇಯ ದೇವಸ್ಥಾನದ ಆವರಣದಿಂದ ಸಾಗಿದ ಮೆರವಣಿಗೆಗೆ ಕಲಾತಂಡಗಳು ಮೆರುಗು ನೀಡಿದವು – ಪ್ರಜಾವಾಣಿ ಚಿತ್ರ: ಅನೂಪ್‌ರಾಘ ಟಿ.

ಸಿ.ಎಂ ಸಲಹೆಗಾರ ಹುದ್ದೆಗೆ ಪಾಟೀಲ ರಾಜೀನಾಮೆ

ಒಂದನೇ ಪುಟದಿಂದ...

ಜನವರಿ 30ರಂದು ಮುಖ್ಯಮಂತ್ರಿ ಕಚೇರಿಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿರುವ ಪಾಟೀಲ ಅವರು ತಕ್ಷಣದಿಂದಲೇ ಜಾರಿಗೆ ಬರುವಂತೆ ಎಲ್ಲ ಸೌಲಭ್ಯಗಳನ್ನು ಹಿಂದಕ್ಕೆ ಪಡೆಯುವಂತೆ ಕೋರಿದ್ದಾರೆ. ಮುಖ್ಯಮಂತ್ರಿ ಸಲಹೆಗಾರ ಹುದ್ದೆ ಸೃಜಿಸಿದ ಬಳಿಕ ಪಾಟೀಲ ಅವರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನವನ್ನು ನೀಡಲಾಗಿತ್ತು.

'ಸದನದಲ್ಲಿ ಮಂಡಿಸಲಿರುವ ಪ್ರಮುಖ ಮಸೂದೆಗಳ ಬಗ್ಗೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ನಡೆಸಬೇಕು. ಅದರ ಬಗ್ಗೆ ಶಾಸಕರ ಅಭಿಪ್ರಾಯವನ್ನು ಪಡೆಯಬೇಕಿತ್ತು. ಆದರೆ, ಶಾಸಕಾಂಗ ಸಭೆ ಯಾವಾಗಲೂ ಏಕಮುಖವಾಗಿರುತ್ತಿತ್ತು. ಮುಖ್ಯಮಂತ್ರಿ, ಸಚಿವರು ಮಾತನಾಡುತ್ತಾರೆಯೇ ಹೊರತು ಶಾಸಕರಿಗೆ ತಮ್ಮ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ಸಿಗುತ್ತಿರಲಿಲ್ಲ. ಮುಖ್ಯಮಂತ್ರಿ ಸಲಹೆಗಾರನಾಗಿದ್ದರೂ ನನಗೆ ಮಾತನಾಡಲು ಅವಕಾಶವಿರಲಿಲ್ಲ. ಇಷ್ಟೂ ಸ್ವಾತಂತ್ರ್ಯ ಇಲ್ಲದಿದ್ದರೆ ಈ ಹುದ್ದೆಯಾದರೂ ಏಕೆ ಬೇಕು' ಎಂದು ಪಾಟೀಲ ತಮ್ಮ ಆಪ್ತರ ಬಳಿ ನೋವು ತೋಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಅಧಿಕಾರಿಗಳ ವರ್ಗಾವಣೆಯಲ್ಲಿಯೂ ತಾವು ಕೊಟ್ಟ ಶಿಫಾರಸು ಪತ್ರಕ್ಕೆ ಮನ್ನಣೆ ಸಿಗುತ್ತಿರಲಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಅಧೀನದಲ್ಲಿ ಬರುವ ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್)ದ ಮೂಲಕವೂ ಅಭಿವೃದ್ಧಿ ಕೆಲಸಗಳು ಸಮರ್ಪಕವಾಗಿ ಆಗುತ್ತಿಲ್ಲ ಎಂದು ಬೇಸರ ಹಂಚಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಮುಖ್ಯಮಂತ್ರಿ ರಾಜಕೀಯ ಸಲಹೆಗಾರನಾಗಿದ್ದರೂ ನನ್ನ ಅಭಿಪ್ರಾಯಗಳಿಗೆ ಮನ್ನಣೆ ಸಿಗುತ್ತಿಲ್ಲ. ಹೀಗಾಗಿ, ಈ ಹುದ್ದೆಯಿಂದ ದೂರ ಉಳಿಯುವುದೇ ಉತ್ತಮ ಎಂದು ರಾಜೀನಾಮೆ ನೀಡಿದ್ದೇನೆ
ಬಿ.ಆರ್.ಪಾಟೀಲ, ಮುಖ್ಯಮಂತ್ರಿ ಸಲಹೆಗಾರ

ನೀತಿಗಳ ವಿರುದ್ಧ ಬಹಿರಂಗ ಟೀಕೆ

ಸ್ವಪಕ್ಷದ ಸರ್ಕಾರವೇ ಅಧಿಕಾರದಲ್ಲಿದ್ದರೂ ಬಿ.ಆರ್.ಪಾಟೀಲ ಅವರು ಸರ್ಕಾರದ ನೀತಿಗಳನ್ನು ಟೀಕಿಸಲು ಹಿಂಜರಿದಿಲ್ಲ. ರಾಜ್ಯದಾದ್ಯಂತ ಮದ್ಯದ ಮಳಿಗೆಗಳನ್ನು ಮನಬಂದಂತೆ ತೆರೆಯುತ್ತಿರುವ ನಡೆಯನ್ನು ಕಲಬುರಗಿಯಲ್ಲಿ ಮದ್ಯಪಾನ ವಿರೋಧಿ ಹೋರಾಟದಲ್ಲಿ ಖಂಡಿಸಿದ್ದರು.

ಚುನಾವಣೆಗೂ ಮುನ್ನ ಭರವಸೆ ನೀಡಿದಂತೆ ಎಪಿಎಂಸಿ ತಿದ್ದುಪಡಿ ಕಾಯ್ದೆ ಸೇರಿದಂತೆ ರೈತ ವಿರೋಧಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯಲು ಸಿದ್ದರಾಮಯ್ಯ ಅವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದೂ ಬೇಸರ ಹೊರಹಾಕಿದ್ದರು.

'ಪಾಟೀಲರ ಜೊತೆ ಮಾತನಾಡುವೆ'

ಮೈಸೂರು: 'ನನ್ನ ರಾಜಕೀಯ ಸಲಹೆಗಾರ ಬಿ.ಆರ್. ಪಾಟೀಲರ ರಾಜೀನಾಮೆ ಪತ್ರವನ್ನು ಓದಿಲ್ಲ. ಅವರೊಂದಿಗೆ ಮಾತನಾಡುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಬೆಂಗಳೂರು ಕಚೇರಿಗೆ ಪತ್ರ ಬಂದಿದೆ. ನಮ್ಮ ನಡುವೆ ಯಾವ ಅಸಮಾಧಾನವೂ ಇಲ್ಲ' ಎಂದರು.

ನಕ್ಸಲ್ ಕೋಟೆಹೊಂಡ ರವೀಂದ್ರ ಮುಖ್ಯವಾಹಿನಿಗೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಕ್ಸಲ್ ಚಳವಳಿಯಲ್ಲಿ ಸಕ್ರಿಯವಾಗಿದ್ದ ಕೋಟೆಹೊಂಡ ರವೀಂದ್ರ (44) ಶನಿವಾರ ಮುಖ್ಯವಾಹಿನಿಗೆ ಸೇರಿದರು.

ಶೃಂಗೇರಿ ತಾಲ್ಲೂಕಿನ ಕಿಗ್ಗಾ ಸಮೀಪದ ಹುಲಗಾರು ಬೈಲಿನ ಕೋಟೆಹೊಂಡದ ರವೀಂದ್ರ ಶುಕ್ರವಾರ ರಾತ್ರಿ ತಮ್ಮ ಊರಿಗೆ ಬಂದು ಶನಿವಾರ ಶರಣಾಗಿದ್ದಾರೆ. ಮೊದಲಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಅವರ ಎದುರು ಶರಣಾದರು.

ಎಸ್‌ಪಿ ಅವರು ಬಳಿಕ ರವೀಂದ್ರ ಅವರನ್ನು ಜಿಲ್ಲಾಧಿಕಾರಿ ಮೀನಾ ನಾಗರಾಜ್ ಅವರ ಬಳಿಗೆ ಕರೆತಂದು ಶರಣಾಗತಿ ಪ್ರಕ್ರಿಯೆ ಪೂರ್ಣಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೋಟೆಹೊಂಡ ರವೀಂದ್ರ, 'ನಮ್ಮೂರಿನಲ್ಲಿ ರಸ್ತೆ ಅಭಿವೃದ್ಧಿಯಾಗಬೇಕು, ಭೂಮಿ ಇಲ್ಲದವರಿಗೆ ಹಕ್ಕುಪತ್ರ ನೀಡಬೇಕು. ಕಾಡಿನ ಉತ್ಪನ್ನಗಳನ್ನು ತರಲು ಅಡ್ಡಿ ಇರಬಾರದು ಎಂಬ ಬೇಡಿಕೆಗಳನ್ನು ಸರ್ಕಾರಕ್ಕೆ ನೀಡಿದ್ದೇನೆ. ನಾನು ಯಾರದೇ ಬಲವಂತಕ್ಕೆ ಶರಣಾಗಿಲ್ಲ, ಸ್ವಇಚ್ಛೆಯಿಂದ ಶರಣಾಗಿದ್ದೇನೆ' ಎಂದರು.

ಜಿಲ್ಲಾಧಿಕಾರಿ ಮಾತನಾಡಿ, 'ಶರಣಾಗಿರುವ ರವೀಂದ್ರ ಅವರು 'ಎ' ಕೆಟಗರಿಯ ನಕ್ಸಲ್ ಆಗಿದ್ದಾರೆ. ಶರಣಾಗತಿ ಪ್ಯಾಕೇಜ್ ಅಡಿ ಅವರಿಗೆ ₹7.50 ಲಕ್ಷ ಸರ್ಕಾರದಿಂದ ಬರಲಿದೆ. ಸರ್ಕಾರದ ಅನುಮತಿ ಪಡೆದು ಮೊದಲ ಹಂತದಲ್ಲಿ ₹3 ಲಕ್ಷ ನೀಡಲಾಗುವುದು. ಬಾಕಿ ಮೊತ್ತ ಹಂತ-ಹಂತವಾಗಿ ಬಿಡುಗಡೆ ಮಾಡಲಾಗುವುದು. ಅವರು ಬಯಸಿದರೆ ಕೌಶಲ ತರಬೇತಿ ನೀಡಲಾಗುವುದು. ಇವರ ಮೇಲೆ ದಾಖಲಾಗಿರುವ ಮೊಕದ್ದಮೆಗಳ ಸಂಬಂಧ ಕಾನೂನು ಪ್ರಕ್ರಿಯೆ ನಡೆಯಲಿದೆ' ಎಂದು ಹೇಳಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ಎಸ್. ಕೀರ್ತನಾ, ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯ ಕೆ.ಪಿ.ಶ್ರೀಪಾಲ್, ಶಾಂತಿಗಾಗಿ ನಾಗರಿಕರ ವೇದಿಕೆಯ ಕೆ.ಎಲ್. ಅಶೋಕ್, ವಿ.ಎ. ಶ್ರೀಧರ್, ನಗರಗೆರೆ ರಮೇಶ್, ಗೌಸ್ ಮೊಹಿಯುದ್ದೀನ್ ಇದ್ದರು.

ಲತಾ ಮುಂಡಗಾರು, ವನಜಾಕ್ಷಿ ಬಾಳೆಹೊಳೆ, ಸುಂದರಿ ಕುತ್ಲೂರು, ಮಾರೆಪ್ಪ ಅರೋಲಿ, ಕೆ.ವಸಂತ (ತಮಿಳುನಾಡು), ಟಿ.ಎನ್. ಜಿಷಾ(ಕೇರಳ) ಒಳಗೊಂಡ ತಂಡ ಜ.8ರಂದು ಮುಖ್ಯವಾಹಿನಿಗೆ ಬಂದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲೇ ಎಲ್ಲರನ್ನು ಸ್ವಾಗತಿಸಲಾಗಿತ್ತು. ಬಳಿಕ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಈ ತಂಡದಿಂದ ಬೇರ್ಪಟ್ಟಿದ್ದ ಕೋಟೆಹೊಂಡ ರವೀಂದ್ರ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಅವರನ್ನು ಸಂಪರ್ಕಿಸುವ ಪ್ರಯತ್ನವನ್ನು ಶಾಂತಿಗಾಗಿ ನಾಗರಿಕ ವೇದಿಕೆ ಮತ್ತು ನಕ್ಸಲ್ ಶರಣಾಗತಿ ಸಮಿತಿಯವರು ಮಾಡಿದ್ದರು.

ರವೀಂದ್ರ ಅವರನ್ನು ಪೊಲೀಸರು ಶನಿವಾರ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ನ್ಯಾಯಾಲಯ ಅವರಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೋಟೆಹೊಂಡ ರವೀಂದ್ರ(ನಿಂತವರಲ್ಲಿ ನೀಲಿ ಬಣ್ಣದ ಶರ್ಟ್ ಧರಿಸಿದವರು) ಮುಖ್ಯವಾಹಿನಿಗೆ ಬಂದರು. ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯ ಕೆ.ಪಿ.ಶ್ರೀಪಾಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ, ಜಿಲ್ಲಾಧಿಕಾರಿ ಮೀನಾ ನಾಗರಾಜ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ಎಸ್.ಕೀರ್ತನಾ ಈ ಸಂದರ್ಭದಲ್ಲಿದ್ದರು

'ವ್ರತಕ್ಕೆ ಕರೆದವನು 18 ವರ್ಷಗಳ ನಂತರ ಬಂದ'

'18 ವರ್ಷಗಳ ಹಿಂದೆ ಸತ್ಯನಾರಾಯಣ ವ್ರತಕ್ಕೆ ಕರೆದಿದ್ದ ನನ್ನ ತಮ್ಮ ಈಗ ಬಂದಿದ್ದಾನೆ' ಎಂದು ಕೋಟೆಹೊಂಡ ರವೀಂದ್ರ ಅವರ ಅಣ್ಣ ಸುರೇಂದ್ರ ಹೇಳಿದರು.

'ಹುಲಗಾರು ಬೈಲಿನಲ್ಲಿ ನಾವೆಲ್ಲರೂ ವಾಸವಿದ್ದೇವೆ. ರವೀಂದ್ರ ಒಬ್ಬನೇ ಕೋಟೆಹೊಂಡದಲ್ಲಿ ನೆಲೆಸಿದ್ದ. ಅಲ್ಲಿ ಒಂದು ಎಕರೆ ಜಾಗದಲ್ಲಿ ಕೃಷಿ ಕೂಡ ಮಾಡುತ್ತಿದ್ದ. 2ನೇ ತರಗತಿಯಷ್ಟೇ ಓದಿದ್ದ ರವೀಂದ್ರ ಹೇಗೆ ನಕ್ಸಲ್ ಹೋರಾಟ ಸೇರಿಕೊಂಡ ಎಂಬುದೇ ಗೊತ್ತಿಲ್ಲ' ಎಂದರು.

'ವ್ರತಕ್ಕೆ ಕರೆದಿದ್ದರಿಂದ ನಾವೆಲ್ಲರೂ ಹೋಗಿದ್ದೆವು. ಆದರೆ, ಅವನೇ ಮನೆಯಲ್ಲಿ ಇರಲಿಲ್ಲ. ಪೊಲೀಸರಿಗೆ ವಿಷಯ ಮುಟ್ಟಿಸಿದೆವು. ಅವರು ಬಂದು ಹುಡುಕಿ ಸುಮ್ಮನಾದರು. ಮೂರ್ನಾಲ್ಕು ವರ್ಷಗಳ ಬಳಿಕ ನಿಮ್ಮ ತಮ್ಮ ನಕ್ಸಲ್ ಆಗಿದ್ದಾನೆ ಎಂದು ಪೊಲೀಸರೇ ತಿಳಿಸಿದರು' ಎಂದು ಸುರೇಂದ್ರ ವಿವರಿಸಿದರು.

'ಮತ್ತೆಂದೂ ತಮ್ಮನ ಮುಖ ನೋಡಲು ಆಗಿರಲೇ ಇಲ್ಲ. ಆದರೆ, ಪೊಲೀಸರು ಆಗಾಗ ಬಂದು ನಮ್ಮನ್ನು ಕೇಳುತ್ತಿದ್ದರು. ಕೊನೆಗೂ ಕಾಡಿನಿಂದ ಹೊರಗೆ ಬಂದಿದ್ದಾನೆ' ಎಂದು ಕಣ್ತುಂಬಿಕೊಂಡರು.

ನಕ್ಸಲ್ ರವೀಂದ್ರ ಪತ್ತೆಗಾಗಿ ಮಾರುವೇಷದ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬಾಳೆಹೊನ್ನೂರು (ಚಿಕ್ಕಮಗಳೂರು): ಕಾವಿ ಲುಂಗಿ ಧರಿಸಿ, ಗಡ್ಡ ಬಿಟ್ಟು ಹೆಗಲಿಗೊಂದು ಟವಲ್ ಹಾಕಿಕೊಂಡು ಸಾಮಾನ್ಯರಂತೆ ವಾರಗಟ್ಟಲೆ ಇಲ್ಲಿನ ಹಳ್ಳಿಗಳಲ್ಲಿ ತಿರುಗಾಡುವ ಮೂಲಕ ರಾಜ್ಯ ಗುಪ್ತಚರ ಇಲಾಖೆಯ ಮೈಸೂರಿನ ಸಿಬ್ಬಂದಿ ರಮೇಶ್ ರಾವ್ ನಕ್ಸಲ್ ಕೋಟೆಹೊಂಡ ರವೀಂದ್ರ ಅವರಿಗಾಗಿ ಹುಡುಕಾಡಿದ್ದರು.

ಶೃಂಗೇರಿ ಸಮೀಪದ ಕೋಟೆ ಹೊಂಡದ ರವೀಂದ್ರ ಅವರ ಪತ್ತೆಗೆ ನಕ್ಸಲ್ ನಿಗ್ರಹ ಪಡೆ (ಎಎನ್‌ಎಫ್), ರಾಜ್ಯ ಗುಪ್ತಚರ ಇಲಾಖೆ, ಶಾಂತಿಗಾಗಿ ನಾಗರಿಕರ ವೇದಿಕೆ ಸದಸ್ಯರು ಎರಡು ವಾರದಿಂದ ಕಾಡಂಚಿನ ಎಲ್ಲಾ ಮನೆ ಮನೆಗಳಿಗೂ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದರು.

ಚಿಕ್ಕಮಗಳೂರು, ಕಾರ್ಕಳ, ಉಡುಪಿ ಜಿಲ್ಲೆಯ ಎಎನ್‌ಎಫ್ ಸಿಬ್ಬಂದಿಯೂ ವೇಷ ಮರೆಸಿಕೊಂಡು ಹಳ್ಳಿಗಳ ಮನೆ ಮನೆಗೆ ತೆರಳಿ ರಹಸ್ಯವಾಗಿ ಶೋಧ ಕಾರ್ಯದಲ್ಲಿ ತೊಡಗಿದ್ದರು. ಇನ್‌ಸ್ಪೆಕ್ಟರ್ ಒಬ್ಬರು ಸ್ಥಳೀಯ ಮಹಿಳೆಯಂತೆ ನೈಟಿ ಧರಿಸಿಕೊಂಡು, ಹೆಗಲಲ್ಲಿ ಹಾರೆ ಹಿಡಿದು ಸುತ್ತಾಡಿದ್ದರು. ಆದರೂ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ.

ಶೃಂಗೇರಿ ಸಮೀಪದ ಹುಲುಗಾರು ಬೈಲು ಸಂಪಾನೆಯ ರಮೇಶ್ ಎಂಬುವವರ ಮನೆಗೆ ಶುಕ್ರವಾರ ರಾತ್ರಿ ಕೋಟೆ ಹೊಂಡ ರವೀಂದ್ರ ಬಂದಿದ್ದ ಮಾಹಿತಿ ತಿಳಿದು ಶರಣಾಗತಿ ಸಮಿತಿ ಸದಸ್ಯ ಶ್ರೀಪಾಲ್ ಅಲ್ಲಿಗೆ ತೆರಳಿ ಮಾತುಕತೆ ನಡೆಸಿ, ಅವರ ಮನವೊಲಿಸಿದರು.

ರಾತ್ರಿಯೇ ವಿಷಯ ತಿಳಿದ ರಾಜ್ಯ ಗುಪ್ತಚರ ಇಲಾಖೆಯ ಸಿಬ್ಬಂದಿ, ಮೈಸೂರಿನ ರಮೇಶ್ ರಾವ್ ಸೇರಿದಂತೆ ಹಲವರು ಅಲ್ಲಿಗೆ ತೆರಳಿ ಶನಿವಾರ ಚಿಕ್ಕಮಗಳೂರಿನ ಜಿಲ್ಲಾಡಳಿತದ ಮುಂದೆ ಕರೆದೊಯ್ಯಲು ಯೋಜನೆ ರೂಪಿಸಿದ್ದರು ಎಂದು ಮೂಲಗಳು ತಿಳಿಸಿವೆ.

ರವೀಂದ್ರ ವಿರುದ್ಧ 27 ಪ್ರಕರಣ

ಕೋಟೆಹೊಂಡ ರವೀಂದ್ರ ವಿರುದ್ಧ ವಿವಿಧ ಠಾಣೆಗಳಲ್ಲಿ 27 ಪ್ರಕರಣಗಳಿವೆ ಎಂದು ಎಸ್‌ಪಿ ತಿಳಿಸಿದರು.

2007ರಿಂದ ಭೂಗತರಾಗಿದ್ದು, ಕರ್ನಾಟಕ, ಕೇರಳ ಮತ್ತು ತಮಿಳುನಾಡಿ ನಲ್ಲಿ ನಕ್ಸಲ್ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದರು. ಜಿಲ್ಲೆಯಲ್ಲಿ 13 ಪ್ರಕರಣಗಳಿದ್ದು, ಎಲ್ಲವೂ ಯುಎಪಿಎ ಪ್ರಕರಣಗಳಾಗಿವೆ. ಬೇರೆ ಜಿಲ್ಲೆಯಲ್ಲಿ 4 ಮತ್ತು ಕೇರಳದಲ್ಲಿ 9 ಪ್ರಕರಣಗಳು ದಾಖಲಾಗಿವೆ ಎಂದು ಅವರು ವಿವರಿಸಿದರು.

'ಕರ್ನಾಟಕ ಈಗ ನಕ್ಸಲ್ ಮುಕ್ತ'

'ಕರ್ನಾಟಕ ಈಗ ನಕ್ಸಲ್ ಮುಕ್ತವಾಗಿದೆ. ನಮಗಿರುವ ಮಾಹಿತಿ ಪ್ರಕಾರ ಬೇರೆ ನಕ್ಸಲರು ಕಾಡಿನಲ್ಲಿ ಇಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಹೇಳಿದರು.

ಈವರೆಗೆ ಒಟ್ಟಾರೆ 21 ನಕ್ಸಲರು ಶರಣಾಗಿ ಮುಖ್ಯವಾಹಿನಿಗೆ ಬಂದಿದ್ದಾರೆ. ನಕ್ಸಲರನ್ನು ಮುಖ್ಯವಾಹಿನಿಗೆ ಕರೆ ತರಲು ನಕ್ಸಲ್ ಶರಣಾಗತಿ ಮತ್ತು ಪುನರ್ಸತಿ ಸಮಿತಿ ಸದಸ್ಯರು ಮತ್ತು ಶಾಂತಿಗಾಗಿ ನಾಗರಿಕರ ವೇದಿಕೆ ಸದಸ್ಯರು ಶ್ರಮಿಸಿದ್ದಾರೆ ಎಂದು ತಿಳಿಸಿದರು.

ತೊಂಬಟ್ಟು ಲಕ್ಷ್ಮಿ ಇಂದು ಶರಣಾಗತಿ

ಉಡುಪಿ: ನಕ್ಸಲ್ ಚಳವಳಿಯಲ್ಲಿ ಸಕ್ರಿಯವಾಗಿದ್ದ ಲಕ್ಷ್ಮಿ ಅಲಿಯಾಸ್ ತೊಂಬಟ್ಟು ಲಕ್ಷ್ಮಿ ಭಾನುವಾರ ಉಡುಪಿ ಜಿಲ್ಲಾಧಿಕಾರಿ ಮುಂದೆ ಶರಣಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕುಂದಾಪುರ ತಾಲ್ಲೂಕಿನ ಅಮಾಸೆಬೈಲು ಸಮೀಪದ ತೊಂಬಟ್ಟು ನಿವಾಸಿ ಲಕ್ಷ್ಮಿ ಭಾನುವಾರ ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಥವಾ ಜಿಲ್ಲಾಧಿಕಾರಿ ಮುಂದೆ ಶರಣಾಗುವರು' ಎಂದು ನಕ್ಸಲ್ ಶರಣಾಗತಿ ಮತ್ತು ಪುನರ್ವಸತಿ ಸಮಿತಿ ಸದಸ್ಯ ಕೆ.ಪಿ.ಶ್ರೀಪಾಲ್ ತಿಳಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಕನ್ನಡ ಲಿಪಿ ವಿನ್ಯಾಸ: ವೈವಿಧ್ಯ ಅಗತ್ಯ’

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜತೆಗೆ ಕೈಜೋಡಿಸಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ತಂತ್ರಾಂಶಗಳ ಲಿಪಿ ವಿನ್ಯಾಸದಲ್ಲಿ ವೈವಿಧ್ಯತೆ ಇಂದಿನ ಅಗತ್ಯವಾಗಿದೆ. ಆಧುನಿಕ ಶೈಲಿಗೆ ಹೊಂದಿಕೊಳ್ಳದಿದ್ದರೆ ಕನ್ನಡ ಅಪಾಯ ಕಟ್ಟಿಟ್ಟ ಬುತ್ತಿ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಕಳವಳ ವ್ಯಕ್ತಪಡಿಸಿದರು.

ಕನ್ನಡದಲ್ಲಿ ಹೊಸ ಲಿಪಿ ವಿನ್ಯಾಸ ಅಭಿವೃದ್ಧಿಪಡಿಸುವ ಕುರಿತು ಪ್ರಾಧಿಕಾರ ನಗರದಲ್ಲಿ ಶನಿವಾರ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

‘ಹಲವಾರು ತಾಂತ್ರಿಕ ಪರಿಣಿತರು ಯುನಿಕೋಡ್‌ನಲ್ಲಿ ವಿವಿಧ ಮಾದರಿಯ ಕನ್ನಡ ಲಿಪಿಗಳನ್ನು ಅಭಿವೃದ್ಧಿಪಡಿಸುತ್ತಿದ್ದಾರೆ. ಇವೆಲ್ಲವೂ ಸಾರ್ವಜನಿಕರಿಗೆ ಲಭ್ಯವಾದಲ್ಲಿ ಕನ್ನಡ ಲಿಪಿಗಳಿಗೆ ವೈವಿಧ್ಯತೆ ದೊರಕಲಿದ್ದು, ತಂತ್ರಾಂಶದಲ್ಲಿ ಕನ್ನಡದ ಬಳಕೆ ಹೆಚ್ಚುತ್ತದೆ. ಜನಸ್ನೇಹಿ ಲಿಪಿಗಳ ವಿನ್ಯಾಸದ ಅಭಿವೃದ್ಧಿ, ತಂತ್ರಾಂಶ ವ್ಯವಸ್ಥೆಯನ್ನು ಪೋಷಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಈ ಹೊಣೆಗಾರಿಕೆಯನ್ನು ನಿರ್ವಹಿಸಲಿದೆ. ಲಿಪಿ ವಿನ್ಯಾಸ ಅಭಿವೃದ್ಧಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಪರಿಣಿತರು ಪ್ರಾಧಿಕಾರದ ದೊಂದಿಗೆ ಕೈ ಜೋಡಿಸಬಹುದಾಗಿದೆ’ ಎಂದರು.

ಪುರುಷೋತ್ತಮ ಬಿಳಿಮಲೆ

‘ಮೊಬೈಲ್ ತಂತ್ರಾಂಶ, ಕ್ಲೌಡ್ ತಂತ್ರಾಂಶಗಳಲ್ಲಿಯೂ ಹೊಸ ವಿನ್ಯಾಸಗಳ ಕನ್ನಡ ಲಿಪಿ ಅಗತ್ಯವಿದೆ. ಕನ್ನಡದ ಕೀಲಿಮಣೆಯ ವಿನ್ಯಾಸದಲ್ಲಿಯೂ ಒಂದು ಸಮಾನತೆ ಬೇಕಿದ್ದು, ಸರ್ಕಾರ ಈ ನಿಟ್ಟಿನಲ್ಲಿ ಒಂದು ಸಂಹಿತೆಯನ್ನೇ ರೂಪಿಸಬೇಕಿದೆ. ಈ ಕುರಿತಂತೆ ಸಮಿತಿಯು ಸರ್ಕಾರಕ್ಕೆ ಶಿಫಾರಸ್ ಸಮಗ್ರ ವರದಿ ಸಲ್ಲಿಸಲಿದೆ’ ಎಂದು ಬಿಳಿಮಲೆ ಹೇಳಿದರು.

ತಾಂತ್ರಿಕ ಕ್ಷೇತ್ರದ ಪರಿಣತರಾದ ಜಿ.ಎನ್.ಮೋಹನ್, ಮಧು ವೈ.ಎನ್., ಮಂಜುನಾಥ ಆರ್.ಆರ್., ಎನ್. ರವಿಕುಮಾರ್ ಮತ್ತು ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ ಉಪಸ್ಥಿತರಿದ್ದರು.

ಮಹದೇವಪುರ: ವಿವಿಧ ಸೌಲಭ್ಯಗಳ ವಿತರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಜನ್ಮದಿನದ ಪ್ರಯುಕ್ತ ಮಹದೇವಪುರ ಕ್ಷೇತ್ರದ ಗ್ರಾಮಾಂತರ ಮತ್ತು ನಗರ ಮಂಡಲದ ಮುಖಂಡರು, ಬಿಜೆಪಿ ಕಾರ್ಯಕರ್ತರು 110 ಜನೋಪಯುಕ್ತ ಸೇವಾ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಜ್ಯೋತಿಪುರ ಗ್ರಾಮದ ಜ್ಯೋತಿರ್ಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ವಿದ್ಯಾರ್ಥಿಗಳು, ಪೌರಕಾರ್ಮಿಕರಿಗೆ, ಆಶಾ ಕಾರ್ಯಕರ್ತೆಯರಿಗೆ ಸವಲತ್ತು ವಿತರಿಸಿದರು.

ಸಿದ್ದಾಪುರ ಗ್ರಾಮದ ಮುಖಂಡರಾದ ಗಿರಿರಾಜ್ ಗೌಡ, ಗಗನ್ ಗೌಡ, ಇತರರು ಮಕ್ಕಳಿಗೆ ಸ್ಪೋರ್ಟ್ಸ್ ಕಿಟ್ ವಿತರಿಸಿದರು. ಬೆಳ್ಳಂದೂರು ವಾರ್ಡ್ ಬಿಜೆಪಿ ಮುಖಂಡ ಪ್ರದೀಪ್ ಕುಮಾರ್ ತಂಡದವರು ಬ್ಯಾಂಡ್ ನೌಕರರನ್ನು ಸನ್ಮಾನಿಸಿದರು.

ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ, ಕ್ಷೇತ್ರದ ಅಧ್ಯಕ್ಷ ಶ್ರೀಧರ್ ರೆಡ್ಡಿ, ಹೂಡಿ ಪಿಳ್ಳಪ್ಪ, ಮಾಜಿ ಅಧ್ಯಕ್ಷರಾದ ಮನೋಹರ ರೆಡ್ಡಿ, ನಟರಾಜ್, ಬಿಜೆಪಿ ರಾಜ್ಯ ಪರಿಷತ್ ಸದಸ್ಯ ಎಲ್. ರಾಜೇಶ್ ಭಾಗವಹಿಸಿದ್ದರು.

ಮಾಜಿ ಶಾಸಕ ಅರವಿಂದ ಲಿಂಬಾವಳಿ ಅವರು ರಾಸುಗಳಿಗೆ ಪೂಜೆ ಸಲ್ಲಿಸಿದರು

ಪ್ರಶಾಂತ್ ಸಂಬರಗಿ ವಿರುದ್ಧ ನಟ ಪ್ರಕಾಶ್ ರಾಜ್ ದೂರು

ಪ್ರಜಾವಾಣಿ ವಾರ್ತೆ

ಮೈಸೂರು: ‘ನನ್ನ ಖ್ಯಾತಿಗೆ ಕುತ್ತು ತರಲು ಪ್ರಶಾಂತ್ ಸಂಬರಗಿ ಉದ್ದೇಶಪೂರ್ವಕವಾಗಿ ಫೇಸ್‌ಬುಕ್‌ನಲ್ಲಿ ಕೃತಕ ಬುದ್ಧಿಮತ್ತೆಯ ಮೂಲಕ ಸೃಷ್ಟಿಸಿದ ನನ್ನ ಭಾವಚಿತ್ರಕ್ಕೆ ಸುಳ್ಳು ಶೀರ್ಷಿಕೆ ನೀಡಿದ್ದಾರೆ’ ಎಂದು ನಟ ಪ್ರಕಾಶ್ ರಾಜ್ ಅವರು ಲಕ್ಷ್ಮಿಪುರಂ ಠಾಣೆಯಲ್ಲಿ ಶನಿವಾರ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪ್ರಕಾಶ್ ರಾಜ್

ದೂರು ಕೊಟ್ಟ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರಶಾಂತ್ ಸಂಬರಗಿಯು ನಟನಾಗಿಯೂ ಸೇರಿದಂತೆ ಅನೇಕರಿಗೆ ತೊಂದರೆ ನೀಡಿದ್ದು, ಅತನಿಗೆ ಪಾಠ ಕಲಿಸಬೇಕು. ಸಾಮಾಜಿಕ ಜಾಲತಾಣದಲ್ಲಿ ನಕಲಿ ಸುದ್ದಿ ಹರಡುವವರಿಗೂ ಇದೊಂದು ಪಾಠವಾಗಬೇಕು ಎಂಬ ಕಾರಣಕ್ಕೆ ದೂರು ನೀಡಿದ್ದೇನೆ. ತಪ್ಪು ಪ್ರಚಾರ ಮಾಡುವುದು, ಅನುಮತಿ ಇಲ್ಲದೆ ಯಾರದೋ ಫೋಟೊಗಳನ್ನು ಬಳಸುವುದು ಅಪರಾಧ’ ಎಂದರು.

ಕುಂಭಮೇಳದಲ್ಲಿ ಪುಣ್ಯಸ್ನಾನದ ಬಗ್ಗೆ ಪ್ರಶ್ನಿಸಿದಾಗ ‘ಸ್ನಾನ ಮಾಡುವುದರಲ್ಲಿ ತಪ್ಪೇನಿದೆ. ಅದು ಅವರವರ ನಂಬಿಕೆ. ನನಗೆ ದೇವರಿಗಿಂತ ಮನುಷ್ಯರ ಮೇಲೆ ನಂಬಿಕೆ. ದೇವರಿಲ್ಲದೆ ಬದುಕಬಹುದು ಆದರೆ, ಮನುಷ್ಯರಿಲ್ಲದೆ ಬದುಕಲು ಸಾಧ್ಯವಿಲ್ಲ. ಹಾಗೆಂದು ಅವರ ನಂಬಿಕೆಯನ್ನು ಪ್ರಶ್ನಿಸುವುದಿಲ್ಲ. ಆದರೆ ಅದನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ತಪ್ಪು’ ಎಂದರು.

ಕುಂಭಮೇಳದ ಬಗ್ಗೆ ಕಾಂಗ್ರೆಸ್ ಟೀಕೆಯ ಕುರಿತು ಪ್ರತಿಕ್ರಿಯಿಸಿ, ‘ಅವರವರ ಭಾವಕ್ಕೆ ಬಿಟ್ಟಿದ್ದು ಎಂದು ಹೇಳುತ್ತಾ ಹೋಗಲಿ. ನಾನು ಯಾವ ನಂಬಿಕೆಯ ಬಗ್ಗೆಯೂ ಟೀಕಿಸಲಾರೆ. ಮೂಢನಂಬಿಕೆಯನ್ನಷ್ಟೇ ಪ್ರಶ್ನಿಸುತ್ತೇನೆ. ಹಿಂದೆ ಕ್ರಿಶ್ಚಿಯನ್‌ಗಿಂತ ದೊಡ್ಡ ಮಾಫಿಯಾ ಇನ್ನೊಂದಿಲ್ಲ. ಮುಸ್ಲಿಮರಲ್ಲೂ ದೊಡ್ಡ ಟೆರರಿಸ್ಟ್ ಇದ್ದಾರೆ ಎಂದಿದ್ದೆ, ಅದರ, ಅಪ್ಪ ಹೈಲೈಟ್ ಆಗಿಲ್ಲ, ನಾನು ಎಂದಿಗೂ ಧರ್ಮಗಳನ್ನು ಎತ್ತಿ ಕಟ್ಟಿಲ್ಲ. ಆದರೆ, ಅದನ್ನು ಮಾಡುವವರನ್ನ ನನ್ನನ್ನು ದೂಷಿಸುತ್ತಾರೆ’ ಎಂದು ಹೇಳಿದರು.

‘ಪ್ರಶಾಂತ್ ಸಂಬರಗಿ ಅವರಿಗೆ ನೋಟಿಸ್ ಕಳುಹಿಸಿದ್ದು, ತನಿಖೆ ಮುಂದುವರೆದಿದೆ’ ಎಂದು ಪೊಲೀಸರು ತಿಳಿಸಿದರು.

ಸುಧಾ ಓದಿರಿ

ರಾಗದ ಗುಂಗು; ಆಪ್ತಲೋಕದ ಬೆರಗು

• ವಿಕ್ರಂ ಕಾಂತಿಕೆರೆ

ಜೈಪುರ: ವೈವಿಧ್ಯಮಯ ಆಲಾಪ ಮತ್ತು ‘ಲಲಿತ’ನ ಸೊಬಗಿನಲ್ಲಿ ದ್ರುಪದ್ ಶೈಲಿಯ ಬಂದಿಶ್‌ಗಳನ್ನು ಅರಳಿಸಿದ ಮನಸ್ಸುಗಳು ದಿನವಿಡೀ ಮುಂಜಾನೆ ರಾಗದ ಗುಂಗಿನಲ್ಲಿರುವಂತೆ ಮಾಡಿದ್ದರು ನಿಲಯ್ ಎಸ್ಸಾನ್. ಗೋಷ್ಠಿಗಳಲ್ಲಿ ಅನಾವರಣಗೊಂಡ ಸಂಬಂಧಗಳ ಮಾಧುರ್ಯ ಈ ಗುಂಗಿಗೆ ರಂಗು ತುಂಬಿತು, ಬೆರಗು ಮೂಡಿಸಿತು.

ಜೈಪುರ ಸಾಹಿತ್ಯ ಉತ್ಸವದ ಮೂರನೇ ದಿನವಾದ ಶನಿವಾರ ಬೆಳಿಗ್ಗೆ ಸಂಗೀತ ಕಾರ್ಯಕ್ರಮದಲ್ಲಿ ಅಧ್ಯಾತ್ಮ ಸ್ವರದ ಗಾಯನದ ಮೂಲಕ ನಿಲಯ್ ಅವರು ತೆರೆದ ಅಂಗಣದ ತಣ್ಣನೆಯ ವಾತಾವರಣದಲ್ಲಿ ಸಂಗೀತ ಪ್ರಿಯರ ಹೃದಯದಲ್ಲಿ ಬಿಸುಪು ತುಂಬಿದರು.

ಇದರ ಬೆನ್ನಲ್ಲೇ ನಡೆದದ್ದು ಇನ್ಫೊಸಿಸ್ ಫೌಂಡೇಷನ್ ಸಹಸ್ಥಾಪಕಿ ಸುಧಾಮೂರ್ತಿ ಮತ್ತು ಮಗಳು ಅಕ್ಷತಾ ಅವರ ಸಂವಾದ. ಶಿಕ್ಷಣ, ಸೇವೆ, ಜೀವನ ವಿಧಾನ ಇತ್ಯಾದಿ ವಿಷಯಗಳ ಇದ್ದ ಮಾತುಕತೆ ಹಲವರಿಗೆ ಬದುಕಿನ ಪಾಠವಾಯಿತು.

ಸಂಘರ್ಷ, ಪ್ರವಾಸಗಳ ನಡುವೆ ತಮ್ಮನ್ನು ತಾವು ಕಳೆದುಕೊಂಡ ದುರಂತವನ್ನು ಪ್ರಿಯಾಂಕಾ ಮಟ್ಟು ಮತ್ತು ಪೀಟರ್ ಗಾಡ್ವಿನ್ ಅವರು ‘ಕುಟುಂಬದ ನೆನಪು, ಕಳೆದುಹೋದ ಬದುಕು’ ಎಂಬ ಗೋಷ್ಠಿಯಲ್ಲಿ ತೆರೆದಿಟ್ಟರು.

ಕಾಶ್ಮೀರದಿಂದ ಲಾಸ್ ಏಂಜಲೀಸ್ ವರೆಗೆ ಮಹಿಳೆಯರ ಬದುಕನ್ನು ಹುಡುಕಿದ್ದ ಪ್ರಿಯಾಂಕಾ ತಾಯ್ನಾಡಿನ ನೆನಪುಗಳನ್ನು ವರ್ಣಿಸಿದರು. ಬಿಳಿಯನಾಗಿ ಆಫ್ರಿಕಾದಲ್ಲಿ ಜನಿಸಿದ ಗಾಡ್ವಿನ್, ‘ಇಂಗ್ಲೆಂಡ್’ಗೆ ವಾಪಸಾದಾಗ ಎದುರಿಸಿದ ಸಾಂಸ್ಕೃತಿಕ ಸಂಘರ್ಷ ವಿವರಿಸಿದರು.

ಕಲಿಕೆ ನಿಂತರೆ ಬದುಕು ಮುಗಿದಂತೆ: ‘ಅಮ್ಮ, ನೀನು ನನ್ನಲ್ಲಿ ಓದುವ ಹವ್ಯಾಸ ಬೆಳೆಸಿದೆ. ಕಲಿಕೆ ನಿಂತರೆ ಬದುಕೇ ಮುಗಿದಂತೆ ಎಂದೆ’ ಎಂದು ಅಕ್ಷತಾ ಪ್ರಸ್ತಾಪಿಸಿದಾಗ ‘ನನ್ನ ಅಜ್ಜಿಗೆ ಅಕ್ಷರ ಮಾಲೆ ಕಲಿಸಿದ್ದು ನಾನು. ಕಲಿಕೆ ಪೂರ್ಣಗೊಂಡಾಗ ಆಕೆ ನನ್ನ ಕಾಲಿಗೆ ಎರಗಿದ್ದಳು. ಇದರಿಂದ ಅರಿವೇ ಎಲ್ಲ ಎಂದು ನನಗೆ ತಿಳಿಯಿತು. ಅದನ್ನೇ ನಿನಗೆ ಹೇಳಿದೆ’ ಎಂದು ಸುಧಾಮೂರ್ತಿ ಉತ್ತರಿಸಿದರು.

‘ನನ್ನಲ್ಲಿ ಸೇವಾಮನೋಭಾವ ಮೂಡಿಸಿದವಳು ನೀನು. ಅದ್ದರಿಂದ ಒಂದರ್ಥದಲ್ಲಿ ನೀನು ನನ್ನ ಗುರು. ಹಿರಿಯರಿಗೆ ಕಿರಿಯರು ಗುರುಗಳಾಗುವ ಸಂಸ್ಕೃತಿ ನಮ್ಮ ಕುಟುಂಬದಲ್ಲಿ ತನ್ನಷ್ಟಕ್ಕೇ ಬೆಳೆದುಬಂದಿದೆ’ ಎಂದು ಸುಧಾಮೂರ್ತಿ ಹೇಳಿದರು.

‘ಸೇವೆ ನಮ್ಮ ಕುಟುಂಬದಲ್ಲಿ ರಕ್ತಗತವಾಗಿದೆ. ಹಳ್ಳಿಯಲ್ಲಿ ಹೆರಿಗೆಗಳನ್ನು ಮಾಡಿಸುತ್ತಿದ್ದ ಅಜ್ಜಿಗೆ ಫಲಾಪೇಕ್ಷೆ ಇರಲಿಲ್ಲ. ಅದನ್ನು ಕಂಡು ಅಪ್ಪನೂ, ಸಹೋದರಿಯೂ ಸೇವಾ ಕ್ಷೇತ್ರಕ್ಕೆ ಇಳಿದರು’ ಎಂದು ಸುಧಾಮೂರ್ತಿ ನೆನಪಿಸಿಕೊಂಡರು.

ಸಂವಾದಕ್ಕೂ ಮೊದಲು ಅಕ್ಷತಾಗೆ ಸುಧಾಮೂರ್ತಿ ಸ್ನೇಹದ ಬಿಸುಪು

‘ಆಯುಷ್ಯ ವರ್ಧಿನಿ’

ಕ್ರಿಯಾಶೀಲರಾಗಿರುವುದು, ಬದುಕಿಗೊಂದು ಉದ್ದೇಶ ಇರಿಸಿಕೊಂಡು ಮುಂದೆ ಸಾಗುವುದು ಆಯುಷ್ಯ ಹೆಚ್ಚಿಸಲು ನೆರವಾಗಲಿದೆ ಎಂದು ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ವೆಂಕಿ ರಾಮಕೃಷ್ಣನ್ ಹೇಳಿದರು.

‘ನಾವೇಕೆ ಸಾಯುತ್ತೇವೆ’ ಎಂಬ ವಿಷಯದ ಕುರಿತು ರೋಜರ್ ಹೈಫೀಲ್ಡ್ ಜೊತೆ ನಡೆಸಿದ ಸಂವಾದದಲ್ಲಿ ಬದುಕಿ ಉಳಿಯುವ ತಾಕತ್ತು, ಪ್ರಕೃತಿ ನಿಯಮ ಇತ್ಯಾದಿ ವಿಷಯಗಳು ಜೀವಿಗಳ ಆಯುಷ್ಯದ ಮೇಲೆ ಪರಿಣಾಮ ಬೀರುವ ಬಗ್ಗೆ. ಅದರೂ ಆರೋಗ್ಯಕರ ಜೀವನಶೈಲಿ ಸಾವನ್ನು ಸ್ವಲ್ಪಮಟ್ಟಿಗೆ ಮುಂದೂಡಲು ನೆರವಾಗಬಲ್ಲದು ಎಂದರು.

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO-9001:2015 & 14001:2015 Company

ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂ.5531, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560 055.
ದೂರವಾಣಿ: 080–22164879, 22164886, ಜಾಲತಾಣ: www.mysoresandal.org ಇ–ಮೇಲ್: ksdl.dgmmtls@gmail.com

ದಿನಾಂಕ: 01.02.2025

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆ/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಖರೀದಿಗಳ ಪೋರ್ಟಲ್ ಜಾಲತಾಣ (https://kppp.karnataka.gov.in)ದ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2024-25/IND0708	ಎಂ ಎಸ್ ಎ (ಪಿ) ರೆಕ್ವಾ 9 ಇಂಚ್‌ಗಾಗಿ ಕಾರೋಗೇಟೆಡ್ ಬಾಕ್ಸ್‌ನ ಖರೀದಿ	5959 ಸಂ.	28-01-2025	12-02-2025
2	KSDL/2024-25/IND0710	ರೋಸ್/ಜಾಸ್ಮಿನ್ ರೆಗ್ಯುಲರ್ (12 ಸ್ಟಿಕ್ಸ್ X 20 ಡಜನ್) 8 ಇಂಚು ಕಾರೋಗೇಟೆಡ್ ಬಾಕ್ಸ್ ಗಳ ಖರೀದಿ	13000 ಸಂ.	28-01-2025	12-02-2025
3	KSDL/2024-25/IND0711	ಸರ್ ಎಂ.ವಿ. 100 (90 ಗ್ರಾಂ X 10 ಡಜನ್) 8 ಇಂಚ್‌ಗಾಗಿ ಕಾರೋಗೇಟೆಡ್ ಬಾಕ್ಸ್‌ನ ಖರೀದಿ	32500 ಸಂ.	28-01-2025	12-02-2025
4	KSDL/2024-25/IND0712	ಜಾಸ್ಮಿನ್ 150 ಗ್ರಾಂ 8 ಇಂಚಿನ ಅಗರಬತ್ತಿಗಾಗಿ ಇನ್ನರ್ ಮತ್ತು ಔಟರ್ ಕಾರೋಗೇಟೆಡ್ ಬಾಕ್ಸ್ ಗಳ ಖರೀದಿ	ಸರಕು	28-01-2025	12-02-2025
5	KSDL/2024-25/IND0713	ಎಂ ಎಸ್ ಎ(ಪಿ) ಹೆಕ್ಸಾ (20 ಸ್ಟಿಕ್ಸ್ X 20 ಡಜನ್) 8 ಇಂಚುಗಾಗಿ ಕಾರೋಗೇಟೆಡ್ ಬಾಕ್ಸ್ ಗಳ ಖರೀದಿ	3250 ಸಂ.	28-01-2025	12-02-2025
6	KSDL/2024-25/IND0714	ಸರ್ ಎಂ.ವಿ. 200/ಸ್ಯಾಂಡಲ್ (135 ಗ್ರಾಂ X 96 ಪೌಚಸ್) 9 ಇಂಚಿನ ಅಗರಬತ್ತಿಗಾಗಿ ಇನ್ನರ್ ಮತ್ತು ಔಟರ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	ಸರಕು	28-01-2025	12-02-2025
7	KSDL/2024-25/IND0715	ಎಂ ಎಸ್ ಎ(ಪಿ) ರೆಕ್ಟಾಂಗಲ್ 9 ಇಂಚಿನ ಅಗರಬತ್ತಿಗಾಗಿ ಕಾರ್ಟನ್‌ಗಳ ಖರೀದಿ	1430000 ಸಂ.	28-01-2025	12-02-2025
8	KSDL/2024-25/IND0716	ಜಾಸ್ಮಿನ್ ರೋಲ್ಸ್ 60 ಗ್ರಾಂ 8 ಇಂಚಿನ ಅಗರಬತ್ತಿಗಾಗಿ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	10833 ಸಂ.	28-01-2025	12-02-2025
9	KSDL/2024-25/IND0717	ಎಂ ಎಸ್ ಎ(ಪಿ) ಹೆಕ್ಸಾ (20 ಸ್ಟಿಕ್ಸ್ X 20 ಡಜನ್) 8 ಇಂಚುಗಾಗಿ ಕಾರ್ಟನ್‌ಗಳ ಖರೀದಿ	780000 ಸಂ.	28-01-2025	12-02-2025
10	KSDL/2024-25/IND0718	ಎಂ ಎಸ್ ಎ(ಪಿ) ರೆಕ್ವಾ 8 ಇಂಚು 125 ಗ್ರಾಂಗಾಗಿ ಕಾರ್ಟನ್‌ಗಳ ಖರೀದಿ	1040000 ಸಂ.	28-01-2025	12-02-2025
11	KSDL/2024-25/IND0719	ಜಾಸ್ಮಿನ್ ರೆಗ್ಯುಲರ್ (12 ಸ್ಟಿಕ್ಸ್ X 20 ಡಜನ್) 8 ಇಂಚು ಅಗರಬತ್ತಿಗಾಗಿ ಕಾರ್ಟನ್‌ಗಳ ಖರೀದಿ	1560000 ಸಂ.	28-01-2025	12-02-2025
12	KSDL/2024-25/IND0720	ರೋಸ್ ರೆಗ್ಯುಲರ್ (12 ಸ್ಟಿಕ್ಸ್ X 20 ಡಜನ್) 8 ಇಂಚಿನ ಅಗರಬತ್ತಿಗಾಗಿ ಕಾರ್ಟನ್‌ಗಳ ಖರೀದಿ	1560000 ಸಂ.	28-01-2025	12-02-2025
13	KSDL/2024-25/IND0721	ಸರ್ ಎಂ.ವಿ. 100 (90 ಗ್ರಾಂ X 10 ಡಜನ್) 8 ಇಂಚ್ ಅಗರಬತ್ತಿಗಾಗಿ ಕಾರ್ಟನ್‌ಗಳ ಖರೀದಿ	3900000 ಸಂ.	28-01-2025	12-02-2025
14	KSDL/2024-25/IND0722	ಮೈಸೂರ್ ಸ್ಯಾಂಡಲ್ ಸೋಪ್ SBT150g (S) ರಫ್ತು ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	27000 ಸಂ.	29-01-2025	17-02-2025
15	KSDL/2024-25/IND0723	ಮೈಸೂರ್ ಸ್ಯಾಂಡಲ್ ಕ್ಲೀನಾಲ್ 1 ಲೀ ಸ್ಟಿಕ್ಕರ್(ಫ್ರಂಟ್ & ಬ್ಯಾಕ್)ಗಳ ಖರೀದಿ Stickers (Front & Back)	1700000 ಸಂ.	29-01-2025	17-02-2025
16	KSDL/2024-25/IND0724	ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಮೈಸೂರ್ ಸ್ಯಾಂಡಲ್ ಕ್ಲೀನಾಲ್ 1000 ಎಂಎಲ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	142000 ಸಂ.	29-01-2025	17-02-2025
17	KSDL/2024-25/IND0725	ಕ್ಲೀನಾಲ್ 1000 ಎಂಎಲ್ ಮತ್ತು ಫ್ರೆಸ್ನಾಲ್ 1000ಎಂಎಲ್ PET ಬಾಟಲಿಗಳಿಗಾಗಿ 28 ಎಂಎಂ PP ಫ್ಲಿಪ್ ಟಾಪ್ ಕ್ಯಾಪ್ ಮತ್ತು 28 ಎಂಎಂ HDPE ಇನ್ನರ್ ಪ್ಲಗ್‌ನ ಖರೀದಿ	4062000 ಸಂ.	29-01-2025	17-02-2025
18	KSDL/2024-25/IND0726	ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಫ್ರೆಶ್ನಾಲ್ 1000 ಎಂಎಲ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	198000 ಸಂ.	29-01-2025	17-02-2025
19	KSDL/2024-25/IND0727	ಮೈಸೂರ್ ಸ್ಯಾಂಡಲ್ ಟಾಲ್ಕ್ 300 ಗ್ರಾಂ ಗಾಗಿ ಶ್ರಿಂಕ್ ಸ್ಲೀವ್ಸ್‌ಗಳ ಖರೀದಿ	530000 ಸಂ.	29-01-2025	17-02-2025
20	KSDL/2024-25/IND0728	ಮೈಸೂರ್ ಸ್ಯಾಂಡಲ್ ಹ್ಯಾಂಡ್ ವಾಶ್ 250 ಎಂಎಲ್ ಗಾಗಿ ಕ್ಯಾಪ್ ರಹಿತ PET ಬಾಟಲ್‌ಗಳ ಖರೀದಿ	598000 ಸಂ.	29-01-2025	17-02-2025
21	KSDL/2024-25/IND0729	ಮೈಸೂರ್ ಸ್ಯಾಂಡಲ್ ಸೋಪ್ 75 ಗ್ರಾಂ ರಫ್ತು ಕಾರ್ಟನ್‌ಗಳ ಖರೀದಿ	3000000 ಸಂ.	29-01-2025	18-02-2025
22	KSDL/2024-25/IND0730	ಎಥಿಲೀನ್ ವಿನೈಲ್ ಅಸಿಟೇಟ್ (EVA) ಹಾಟ್ ಮೆಲ್ಟ್ ಅಡೆಸಿವ್‌ನ ಖರೀದಿ	6000 ಕೆ.ಜಿ.	29-01-2025	18-02-2025
23	KSDL/2024-25/IND0731	ಕ್ಯಾಪ್‌ನೊಂದಿಗೆ ಮೈಸೂರ್ ಸ್ಯಾಂಡಲ್ ಟಾಲ್ಕ್ 50 ಗ್ರಾಂ ಕಂಟೈನರ್ ಖರೀದಿ	4875000 ಸಂ.	29-01-2025	03-03-2025
24	KSDL/2024-25/IND0732	ಮೈಸೂರ್ ಸ್ಯಾಂಡಲ್ ಟಾಲ್ಕ್ 50 ಗ್ರಾಂಗಾಗಿ ಇನ್ನರ್ ಮತ್ತು ಔಟರ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	48750 ಸಂ.	29-01-2025	18-02-2025
25	KSDL/2024-25/IND0733	ಕ್ಯಾಪ್‌ನೊಂದಿಗೆ ಮೈಸೂರ್ ಸ್ಯಾಂಡಲ್ ಟಾಲ್ಕ್ 100 ಗ್ರಾಂ ಕಂಟೈನರ್ ಖರೀದಿ	1560000 ಸಂ.	29-01-2025	18-02-2025
26	KSDL/2024-25/IND0734	ಮೈಸೂರ್ ಸ್ಯಾಂಡಲ್ ಟಾಲ್ಕ್ 100 ಗ್ರಾಂ ಗಾಗಿ ಹನಿ ಕೂಂಬ್ ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	43000 ಸಂ.	29-01-2025	18-02-2025
27	KSDL/2024-25/IND0735	ಕ್ಯಾಪ್‌ನೊಂದಿಗೆ ಮೈಸೂರ್ ಸ್ಯಾಂಡಲ್ ಟಾಲ್ಕ್ 300 ಗ್ರಾಂ ಕಂಟೈನರ್ ಖರೀದಿ	520000 ಸಂ.	29-01-2025	18-02-2025
28	KSDL/2024-25/IND0736	ಮೈಸೂರ್ ಸ್ಯಾಂಡಲ್ ಟಾಲ್ಕ್ 300 ಗ್ರಾಂ ಗಾಗಿ ಹನಿ ಕೂಂಬ್ ಪಾರ್ಟಿಷನ್ ಮತ್ತು ಟಾಪ್ ಪ್ಲೇಟ್‌ನೊಂದಿಗೆ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	21500 ಸಂ.	29-01-2025	18-02-2025
29	KSDL/2024-25/IND0737	ಟರ್ಷಿಯರಿ ಬ್ಯುಟೈಲ್ ಹೈಡ್ರಾಕ್ಸಿ ಕ್ವಿನೋನ್(Tertiary Butyl Hydroxy Quinone (TBHQ)) ಖರೀದಿ	165 ಕೆ.ಜಿ.	30-01-2025	17-02-2025
30	KSDL/2024-25/IND0738	ಆಲಿವೆಮ್–400 (Olivem-400) ನ ಖರೀದಿ	214 ಕೆ.ಜಿ.	30-01-2025	17-02-2025
31	KSDL/2024-25/IND0739	ಕಾಸ್ಮೆಟಿಕ್ ಗ್ರೇಡ್ ಟಾಲ್ಕ್ 300 (Cosmetic Grade Talc 300 mesh)ನ ಖರೀದಿ	651 ಮೆ.ಟ.	30-01-2025	17-02-2025
32	KSDL/2024-25/IND0740	ಕಾಸ್ಟಿಕ್ ಸೋಡಾ ಲೈ (100 ಪ್ರತಿಶತ ಆಧಾರದ ಮೇಲೆ) (Caustic Soda Lye (On 100 Percent Basis)ನ ಖರೀದಿ	48 ಮೆ.ಟ.	30-01-2025	17-02-2025
33	KSDL/2024-25/IND0741	ಸೋಡಾ ಸ್ಪೆಕಲ್ಸ್ ನೀಲಿ ಮತ್ತು ಕೆಂಪು (Soda Speckles Blue & Red)ನ ಖರೀದಿ	5 ಮೆ.ಟ.	30-01-2025	17-02-2025
34	KSDL/2024-25/IND0742	ಸೋಡಿಯಂ ಮೆಟಾ ಸಿಲಿಕೇಟ್ (Sodium Meta Silicate) ಖರೀದಿ	15 ಮೆ.ಟ.	30-01-2025	17-02-2025
35	KSDL/2024-25/IND0743	ಕಾರ್ಬೋಫೋಲ್ ಆಕ್ವಾ SF-1 (Carbopol Aqua SF-1) ನ ಖರೀದಿ	1733 ಕೆ.ಜಿ.	30-01-2025	17-02-2025
36	KSDL/2024-25/IND0744	ಕೊಕೊ ಡೈಥೆನೊಲಮೈಡ್ (Coco Diethanolamide) ನ ಖರೀದಿ	1586 ಕೆ.ಜಿ.	30-01-2025	17-02-2025
37	KSDL/2024-25/IND0745	ವಾಕರ್ ಬೆಲ್ಸಿಲ್ 551 HP2 (ಸಿಲಿಕೋನ್) (Wacker Belsil 551 HP2 (Silicone)) ನ ಖರೀದಿ	433 ಕೆ.ಜಿ.	30-01-2025	17-02-2025
38	KSDL/2024-25/IND0746	135 ಗ್ರಾಂ 9 ಇಂಚಿನ ಅಗರಬತ್ತಿ, 150 ಗ್ರಾಂ 8 ಇಂಚಿನ ಅಗರಬತ್ತಿ ಮತ್ತು ಸರ್ ಎಂವಿ 200 ಗ್ರಾಂ 9 ಇಂಚಿನ ಅಗರಬತ್ತಿಗಾಗಿ ಪ್ರಿಂಟೆಡ್ ಝಿಪ್ಪರ್ ಮತ್ತು ಸ್ಟ್ಯಾಂಡ್–ಅಪ್ ಪೌಚ್‌ಗಳ ಖರೀದಿ	650000 ಸಂ.	30-01-2025	17-02-2025
39	KSDL/2024-25/IND0747	ಇನ್ನರ್ ಲೈನರ್ ಕ್ರಾಫ್ಟ್ ಪೇಪರ್ ಟ್ಯೂಬ್‌ಗಳ ಖರೀದಿ	780000 ಸಂ.	30-01-2025	17-02-2025
40	KSDL/2024-25/IND0748	ಅಗರಬತ್ತಿ ಪ್ಯಾಕಿಂಗ್‌ಗಾಗಿ ವಿವಿಧ ಗಾತ್ರದ ಮುದ್ರಿತ PP ಪೌಚ್‌ಗಳ ಖರೀದಿ	15974 ಕೆ.ಜಿ.	30-01-2025	17-02-2025
41	KSDL/2024-25/IND0751	ಮೈಸೂರ್ ಸ್ಯಾಂಡಲ್ ಧೂಪ್ ಕಾರೋಗೇಟೆಡ್ ಬಾಕ್ಸ್‌ಗಳ ಖರೀದಿ	33042 ಸಂ.	30-01-2025	17-02-2025
42	KSDL/2024-25/IND0752	ಮೈಸೂರ್ ಸ್ಯಾಂಡಲ್ ಧೂಪ್ ಕಾರ್ಟನ್‌ಗಳ ಖರೀದಿ	4687800 ಸಂ.	30-01-2025	17-02-2025
43	KSDL/2024-25/IND0753	ಮೈಸೂರ್ ಸ್ಯಾಂಡಲ್ ಧೂಪ್‌ಗಾಗಿ ಮುದ್ರಿತ ಜಿಪ್ ಲಾಕ್ ಕವರ್ ಖರೀದಿ	4758000 ಸಂ.	30-01-2025	17-02-2025
44	KSDL/2024-25/IND0754	ಮೈಸೂರ್ ಸ್ಯಾಂಡಲ್ ಧೂಪ್‌ಗಾಗಿ ಮೆಟಲ್ ಪ್ಲೇಟ್‌ಗಳ ಖರೀದಿ	6608 ಕೆ.ಜಿ.	30-01-2025	17-02-2025
45	KSDL/2024-25/IND0755	9 ಇಂಚಿನ ಯಂತ್ರ ನಿರ್ಮಿತ ಕಚ್ಚಾ ಅಗರಬತ್ತಿ ಕಡ್ಡಿಗಳ ಖರೀದಿ (ದೇಶೀಯ ಮೂಲ)	67 ಮೆ.ಟ.	30-01-2025	14-02-2025

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.

ಸಹಿ/–ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ದೂರವಾಣಿ ಸಂ: 08338/ 273859 ಇ–ಮೇಲ್: eepwdckd@gmail.com

ಕ್ರಸಂ. ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2024–25/5166 ದಿನಾಂಕ:31/01/2025

ಅವಧಿ ವಿಸ್ತರಣೆ ಇ–ಅಲ್ಪಾವಧಿ ಟೆಂಡರ್ ಪ್ರಕಟಣೆ–1

ಈ ಕಚೇರಿ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ–1/ಟೆಂಡರ್/2023–24/4995 ದಿನಾಂಕ:22/01/2025 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ಮಾರ್ಪಡಿಸಿದ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:12–02–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:13–02–025 (ಸಾಯಂಕಾಲ 5.30 ಗಂಟೆಯವರೆಗೆ) 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 15–02–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):17–02–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): “ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ”

ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1570/KSMCA/2024-25

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋಕೋಪಯೋಗಿ ಇಲಾಖೆ ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 Email ID: eepwdbngdn@yahoo.com
E-Portal : https://kppp.karnataka.gov.in/#/portal/portal-home

ಟೆಂಡರ್ ಪ್ರಕಟಣೆ ಸಂಖ್ಯೆ: 34/2024–25 ದಿನಾಂಕ: 01.02.2025

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ದಕ್ಷಿಣ ಉಪವಿಭಾಗಕ್ಕೆ ಸಂಬಂಧಿಸಿದಂತೆ 03 ಸಂಖ್ಯೆಯ (ರೂ. 50.00 ರಿಂದ ರೂ.498.00 ಲಕ್ಷಗಳ) ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

ಕಾಮಗಾರಿಯ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ: 10.02.2025 ಸಂಜೆ 4.00 ಗಂಟೆ ಯವರೆಗೆ.
2. ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ತೆರೆಯುವ ದಿನಾಂಕ 11.02.2025 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–
ಕಾರ್ಯಪಾಲಕ ಅಭಿಯಂತರರು
ಲೋ.ಇ. ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/4733/Zen/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

ಟೆಂಡರ್ ಪ್ರಕಟಣೆ
(ONLY THROUGH “e-Procurement” SYSTEM)

ಉಲ್ಲೇಖ: 1) ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1560/2024–25 ದಿನಾಂಕ: 30.01.2025

ಸಿಂಗಟಾಲೂರು ಏತ ನೀರಾವರಿ ಯೋಜನೆ ವ್ಯಾಪ್ತಿಯಲ್ಲಿ ಬರುವ ಎಡಭಾಗದ 1ನೇ ಲಿಫ್ಟ್‌ನ ವಾರ್ಷಿಕ ನಿರ್ವಹಣೆ ಲೆಕ್ಕಶೀರ್ಷಿಕೆ 2701ರಡಿ ಕೈಗೊಳ್ಳುವ ಕಾಮಗಾರಿಗೆ ಉಲ್ಲೇಖ(1)ರ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, Super Grade Electrical Contractor with valid License issued by CEIG ಹೊಂದಿರುವ ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು ಕ್ರಮವಾಗಿ ರೂ. 113.31 ಲಕ್ಷಗಳು ಇದ್ದು, ಇ.ಎಂ.ಡಿ. ರೂ.1.70 ಲಕ್ಷಗಳು ಇರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಗಳಿಗೆ ಸಂಬಂಧಿಸಿದ ಷರತ್ತು/ ನಿಯಮಾವಳಿಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 01.02.2025ರ ನಂತರ “https://kppp.karnataka.gov.in”, ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟಗಳನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 18.02.2025 ಎಂದು ಮತ್ತು ಟೆಂಡರ್‌ಗಳ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 20.02.2025 ಎಂದು ನಿಗದಿಪಡಿಸಲಾಗಿದೆ. ಅದರಂತೆ, ಸದರಿ ಟೆಂಡರ್ ಕುರಿತು Pre-bid ಸಭೆಯನ್ನು ದಿನಾಂಕ: 07.02.2025 ರಂದು ವಿಭಾಗ–1 ಕಛೇರಿ ಮುಂಡರಗಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು e-procurement Helpdesk Phone Numbers: +91-80-46010000, +91-80-68948777 ನಲ್ಲಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ,
ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ,
ಮುಂಡರಗಿ, ಗದಗ ಜಿಲ್ಲೆ.

ವಾ.ಸಾ.ಇ/ಗದಗ/584/ದೇಶಪಾಂಡೆಪಬ್ಲಿಸಿಟಿ/2024–25

ಯೋಜನಾ ನಿರ್ದೇಶಕರ ಕಚೇರಿ
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ದೂರವಾಣಿ ಸಂ: 08352–259855,
ಇ–ಮೇಲ್:itstaff_dudc_bijapur@yahoo.co.in
dudc_bjp@yahoo.co.in, ka.vijayapura.dudc@gmail.com
ವೆಬ್‌ಸೈಟ್: www.vijayapuradudc.mrc.gov.in

ಕ್ರ.ಸಂ:ಜಿನಕೋ–3/ಮಾನವ ಸಂಪನ್ಮೂಲ/ಟೆಂಡರ್/2024–25 ದಿನಾಂಕ:01.02.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

ವಿಜಯಪುರ ಜಿಲ್ಲೆಯ ಜಿಲ್ಲಾ ನಗರಾಭಿವೃದ್ಧಿ ಕೋಶ ವಿಜಯಪುರ ಕಾರ್ಯಾಲಯಕ್ಕೆ 02 ಜನ ನುರಿತ ಡಾಟಾ ಎಂಟ್ರಿ ಆಪರೇಟರಗಳನ್ನು ಒದಗಿಸುವ ಕುರಿತು ಆಹ್ವಾನಿಸಿದ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಮತ್ತು ನೊಂದಾಯಿತ ಏಜೆನ್ಸಿದಾರರು ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ www.kppp.karnataka.gov.in ಮೂಲಕ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ವೇಳಾಪಟ್ಟಿ ಮತ್ತು ಇತರೆ ಮಾಹಿತಿಯು ಈ ಕೆಳಗಿನಂತಿರುತ್ತದೆ. Indent No: DMA/2023-24/SE4546

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.02.2025 ರಂದು ಸಾಯಂಕಾಲ 5.00 ಘಂಟೆಯವರೆಗೆ.
2) ಟೆಂಡರ್ ತೆರೆಯುವ ದಿನಾಂಕ: 12.02.2025 ರಂದು ಸಾಯಂಕಾಲ 5.15 ಘಂಟೆಗೆ.

ಅವಧಿ ವಿಸ್ತರಣೆ ಮತ್ತು ತಿದ್ದುಪಡಿ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ವಿಜಯಪುರ

ವಾಸಾಸಂಇ/ವಿಜಯಪುರ/655/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ:ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/5054–ಅಪೆಂಡಿಕ್ಸ್–ಇ/2024–25/3598 ದಿನಾಂಕ:29.01.2025

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–2,3 ರಲ್ಲಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಒಟ್ಟು 14 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ. 100.00 ಲಕ್ಷಗಳು & 50.00 ಲಕ್ಷಗಳು & ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ 1,00,000/– & 50,000.00 ರೂಗಳು. ಸರ್ಕಾರದ ಪತ್ರ ಸಂಖ್ಯೆ. ಎಫ್.ಡಿ:876:ಇಎಕ್ಸಪಿ–12/2017 ಬೆಂಗಳೂರು ದಿನಾಂಕ:–10–10–2017 ರನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ ಇ.ಎಂ.ಡಿ ರಿಯಾಯಿತಿ ಒದಗಿಸಲಾಗಿದೆ. ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. ಗುತ್ತಿಗೆ ಪೂರ್ವ ಭಾವಿ ಸಭೆ ದಿನಾಂಕ: 10.02.2025ರ ಮುಂಜಾನೆ 11.00 ಗಂಟೆಗೆ, ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–15.02.2025 ರ ಸಂಜೆ 4.30 ಗಂಟೆಯವರೆಗೆ, ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 17.02.2025 ರ ಮುಂಜಾನೆ 11.00 ಘಂಟೆಯ ನಂತರ ಮತ್ತು ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ: 18.02.2025 ರ ಮುಂಜಾನೆ 4.31 ಘಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/591/ಕೆಎಸ್‌ಎಂಸಿಎ/2024–25

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937

ಸಂ:28/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/AE-1&2&3&4/5910/2024–25 ದಿನಾಂಕ: 30.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 28/2024–25
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2024–25 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಶಿರಾ, ತುಮಕೂರು ಕೊರಟಗೆರೆ, ಮಧುಗಿರಿ, ತುರುವೇಕೆರೆ ಮತ್ತು ಕುಣಿಗಲ್ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in/) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.5.04 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.12,600/– ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.79.80 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,59,600/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 12–02–2025 ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ ದಿನಾಂಕ: 07-02-2025 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13–02–2025 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 15–02–2025 ಸಂಜೆ 05.30 ಘಂಟೆಯ ನಂತರ.

ಸಹಿ/–(ಕೆ.ಎಂ.ಕುಮಾರಸ್ವಾಮಿ)
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/602/KSMCA/2024-25

ಕೆಪಿಎಸ್‌ಸಿ ಆಡಳಿತಕ್ಕೆ 'ಸರ್ಜರಿ'

ಒಂದನೇ ಪುಟದಿಂದ...

ಈ ಸಮಿತಿಯ ಕೆಲವು ಶಿಫಾರಸುಗಳು ಈಗಾಗಲೇ ಜಾರಿಯಾಗಿವೆ.

ಕೆಪಿಎಸ್‌ಸಿ ಕಾರ್ಯವೈಖರಿಯಲ್ಲಿ ಸುಧಾರಣೆ ತರಬೇಕಾದರೆ, 'ಕಾರ್ಯ-ದರ್ಶಿಯನ್ನು ಬಿಟ್ಟು ಇತರ ಸುಮಾರು 288 ಸಿಬ್ಬಂದಿಯ ಪೈಕಿ ಕನಿಷ್ಠ ಶೇ 50ರಷ್ಟು ಮಂದಿಯನ್ನು ನಿಯೋಜನೆ ಮೇರೆಗೆ ಕಳುಹಿಸಿ, ಇತರ ಇಲಾಖೆಗಳ ಸಿಬ್ಬಂದಿಯನ್ನು ನೇಮಿಸಬೇಕು. ಸೂಕ್ಷ್ಮ, ರಹಸ್ಯ ಮಾಹಿತಿಯನ್ನು ನಿರ್ವಹಿಸುತ್ತಿ-ರುವ ಗಣಕ ಶಾಖೆಯಲ್ಲಿ ಈ ವ್ಯವಸ್ಥೆಯನ್ನು ತ್ವರಿತವಾಗಿ ಮಾಡಬೇಕು' ಎಂದೂ ಹೋಟಾ ಸಮಿತಿ ಶಿಫಾರಸು ಮಾಡಿತ್ತು.

ಕೆಪಿಎಸ್‌ಸಿಗೆ ಅಧಿಕಾರಿ, ಸಿಬ್ಬಂದಿಯ ನೇಮಕಾತಿ ವಿಧಾನಗಳಿಗೆ ಸಂಬಂಧಿಸಿದ 'ಕರ್ನಾಟಕ ಲೋಕ ಸೇವಾ ಆಯೋಗ (ಸೇವಾ ಷರತ್ತುಗಳು) ನಿಯಮಗಳು–1957'ಕ್ಕೆ ಕೆಲವು ತಿದ್ದುಪಡಿ ಮಾಡಿರುವುದನ್ನು ಬಿಟ್ಟರೆ, ಈವರೆಗೆ ಸಮಗ್ರ ತಿದ್ದುಪಡಿ ಆಗಿಲ್ಲ. ಹೋಟಾ ಸಮಿತಿಯ ಶಿಫಾರಸಿಗೆ ಪೂರಕವಾಗಿ ನೇಮಕಾತಿ ನಿಯಮಗಳಿಗೆ ಸಮಗ್ರ ತಿದ್ದುಪಡಿ ಮಾಡುವಂತೆ ಸರ್ಕಾರಕ್ಕೆ ಕೆಪಿಎಸ್‌ಸಿ ಪ್ರಸ್ತಾವ ಸಲ್ಲಿಸಿತ್ತು.

12 ವರ್ಷಗಳಿಂದ ನನೆಗುದಿಗೆ: 2013ರಲ್ಲಿಯೇ ಹೋಟಾ ಸಮಿತಿ ಶಿಫಾರಸು ಮಾಡಿದ್ದರೂ 2022ರ ಆಗಸ್ಟ್ 5ರಂದು ಅಂದಿನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ವೃಂದ ಪರಿಶೀಲನಾ ಸಮಿತಿ ಸಭೆಯಲ್ಲಿ ಈ ವಿಷಯ ಮೊದಲ ಬಾರಿಗೆ ಚರ್ಚೆಗೆ ಬಂದಿತ್ತು. ಅಲ್ಲದೆ, ಸಚಿವ ಸಂಪುಟದ ಅನುಮೋದನೆಗೆ ಪ್ರಸ್ತಾವ ಮಂಡಿಸಲು ಕೂಡಾ ತೀರ್ಮಾನಿಸಲಾಗಿತ್ತು. ಆದರೆ, ನಾನಾ ಕಾರಣಗಳಿಂದ ನಿಯಮ ರೂಪಿಸುವ ಪ್ರಕ್ರಿಯೆ ಡಿಪಿಎಆರ್‌ನಲ್ಲೇ ಇತ್ತು. ಈಗ ನಿಯಮಾವಳಿಗೆ ಅಂತಿಮ ರೂಪ ನೀಡಿ, ಆರ್ಥಿಕ ಇಲಾಖೆ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗಳಿಂದ ಅಭಿಪ್ರಾಯ ಪಡೆದು ಸಚಿವ ಸಂಪುಟ ಸಭೆಗೆ ಡಿಪಿಎಆರ್ ಪ್ರಸ್ತಾವ ಮಂಡಿಸಿದೆ.

ರಾಜ್ಯಪಾಲರ ಅನುಮೋದನೆ ಅಗತ್ಯ



ಥಾವರ್‌ಚಂದ್ ಗೆಹಲೋತ್

ಸಂವಿಧಾನದ ಅನುಚ್ಛೇದ 318ರ ಅನ್ವಯ ಕೆಪಿಎಸ್‌ಸಿ ಸದಸ್ಯರ ಮತ್ತು ಸಿಬ್ಬಂದಿಯ ಸಂಖ್ಯೆ ಹಾಗೂ ಸೇವಾ ಷರತ್ತುಗಳ ನಿಯಮಗಳನ್ನು ರಚಿಸುವ ಅಧಿಕಾರ ರಾಜ್ಯಪಾಲರದ್ದು. ಶೇ 50ರಷ್ಟು ಸಿಬ್ಬಂದಿಯನ್ನು ನಿಯೋಜನೆ ಮೇಲೆ ಹೊರಗೆ ಕಳುಹಿಸುವ 'ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) (ತಿದ್ದುಪಡಿ) ನಿಯಮಗಳು– 2025'ರ ಕರಡುವಿಗೆ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದ್ದು, ರಾಜ್ಯಪಾಲರ ಅಂಕಿತ ಪಡೆದು ಗೆಜೆಟ್ ಹೊರಡಿಸಿ ಆಕ್ಷೇಪಣೆ–ಸಲಹೆಗಳನ್ನು ಆಹ್ವಾನಿಸಲಾಗುವುದು. ಕರಡು ನಿಯಮಗಳಲ್ಲಿ ಯಾವುದೇ ಪ್ರಮುಖ ತಿದ್ದುಪಡಿಯ ಅವಶ್ಯಕತೆ ಇಲ್ಲದೇ ಇದ್ದರೆ ಮತ್ತೊಮ್ಮೆ ಸಚಿವ ಸಂಪುಟ ಸಭೆಗೆ ಮಂಡಿಸದೆ ನಿಯಮ ಅಂತಿಮಗೊಳಿಸಲಾಗುವುದು ಎಂದು ಡಿಪಿಎಆರ್ ಮೂಲಗಳು ತಿಳಿಸಿವೆ.

ಮುದ್ದೇಬಿಹಾಳ ತಾಲ್ಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷರ ಆಯ್ಕೆಗೆ ಅರ್ಜಿ

ಸಾಹಿತ್ಯ ಪರಿಷತ್ತಿನ ನಡೆಗೆ ಆಕ್ಷೇಪ

• ಬಸವರಾಜ್ ಸಂಪಳ್ಳಿ

ವಿಜಯಪುರ: ಮುದ್ದೇಬಿಹಾಳದಲ್ಲಿ ಫೆಬ್ರುವರಿ 15ರಂದು ನಡೆಯುವ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರ ಆಯ್ಕೆ ಸಂಬಂಧ ಅರ್ಜಿ ಆಹ್ವಾನಿಸಿರುವ ಸಾಹಿತ್ಯ ಪರಿಷತ್ತಿನ ನಡೆಗೆ ಆಕ್ಷೇಪ ವ್ಯಕ್ತವಾಗಿದೆ.

'ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗುವವರು ತಮ್ಮ ಸ್ವವಿವರ, ಆಧಾರ್ ಕಾರ್ಡ್ ಸಹಿತ ಅರ್ಜಿ ಸಲ್ಲಿಸಬೇಕು' ಎಂದು ಕನ್ನಡ ಪರಿಷತ್ತಿನ ಮುದ್ದೇಬಿಹಾಳ ತಾಲ್ಲೂಕು ಘಟಕದ ಅಧ್ಯಕ್ಷ ಕಾಮರಾಜ ಬಿರಾದಾರ ಅವರ ಪತ್ರಿಕಾ ಪ್ರಕಟಣೆಯು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಟೀಕೆಗೆ ಗುರಿಯಾಗಿದೆ.

'ಸಾಹಿತ್ಯ ಸೇವೆಯ ಘನ ಉದ್ದೇಶದಿಂದ ಹುಟ್ಟಿದ ಈ ಸಂಸ್ಥೆ ಈವರೆಗೆ ನಡೆದುಬಂದ ಅರ್ಥವತ್ತಾದ ಪರಂಪರೆ ಮುಂದುವರೆಸಬೇಕು. ತಾಲ್ಲೂಕಿನ ಅಧ್ಯಕ್ಷರಾದಿಯಾಗಿ ಎಲ್ಲ ಪದಾಧಿಕಾರಿಗಳು ಜವಾಬ್ದಾರಿ ಹೊರಬೇಕು. ಅದರ ಬದಲು ಅಧ್ಯಕ್ಷರಾಗಲು ಅರ್ಜಿ ಸಲ್ಲಿಸಲು ಹೇಳಿದರೆ, ಸಾಹಿತಿಗಳು ಸ್ಪಂದಿಸಲಾರರು' ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

'ಮುದ್ದೇಬಿಹಾಳ ಕನ್ನಡ ಸಾಹಿತ್ಯ ಪರಿಷತ್ತಿಗೆ ಎರಡು ಜಿಲ್ಲಾ ಸಾಹಿತ್ಯ ಸಮ್ಮೇಳನ, ನಾಲ್ಕು ತಾಲ್ಲೂಕು ಸಮ್ಮೇಳನ ನಡೆಸಿದ ಒಳ್ಳೆಯ ಹೆಸರಿದೆ. ಆಗ ಯಾರಿಂದಲೂ ಅರ್ಜಿ ಕರೆದಿರಲಿಲ್ಲ. ಆದರೆ, ಈ ಬಾರಿ ಪರಿಷತ್ತಿನ ನಡೆ ಅಚ್ಚರಿ ಮೂಡಿಸಿದೆ. ಇದು ಎಲ್ಲರೂ ಒಪ್ಪುವಂತಹ ನಡೆಯಲ್ಲ' ಎಂಬ ಚರ್ಚೆ ಸಾಹಿತ್ಯ ವಲಯದಲ್ಲಿ ನಡೆದಿದೆ.

'ಪರಿಷತ್ತಿಗೆ ಅರ್ಜಿ ಹಾಕಿ ಸಮ್ಮೇಳನ ಸರ್ವಾಧ್ಯಕ್ಷರಾಗಲು ಒಂದಿಷ್ಟು ವಂತಿಗೆ ಕೊಡಬೇಕು. ಅದಕ್ಕೆ ಅರ್ಜಿ ಕರೆದಿರಬಹುದು. ಸಾಹಿತಿಯಾದವನು ಯಾವತ್ತೂ ಅರ್ಜಿ ಹಾಕಲಾರ' ಎಂದು ಸಾಹಿತಿ ಅಬ್ದುಲ್ ರೆಹಮಾನ್ ಬಿದರಕುಂದಿ ತಿಳಿಸಿದರು.

'ಅರ್ಹರಿಗೆ ಅವಕಾಶ ಸಿಗಲಿ ಎಂಬ ಒಳ್ಳೆಯ ಉದ್ದೇಶದಿಂದ ಅರ್ಜಿ ಆಹ್ವಾನಿಸಿದ್ದೇವೆ. ಈ ಕುರಿತ ಟೀಕೆಗಳಿಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಪರಿಷತ್ತಿನ ಮುದ್ದೇಬಿಹಾಳ ತಾಲ್ಲೂಕು ಘಟಕದ ಅಧ್ಯಕ್ಷ ಕಾಮರಾಜ ಬಿರಾದಾರ 'ಪ್ರಜಾವಾಣಿ'ಗೆ ತಿಳಿಸಿದರು.

ಪಾರದರ್ಶಕ ಆಯ್ಕೆಗೆ ಅರ್ಜಿ: ಹಾಸಿಂಪೀರ

ಹಾಸಿಂಪೀರ ವಾಲಿಕಾರ

'ಅರ್ಹರನ್ನು ಸಮ್ಮೇಳನ ಅಧ್ಯಕ್ಷ ಸ್ಥಾನಕ್ಕೆ ಪಾರದರ್ಶಕವಾಗಿ ಆಯ್ಕೆ ಮಾಡಬೇಕು. ಸಾರ್ವತ್ರಿಕವಾಗಿ ಜನರ ಮಧ್ಯೆ ಆಯ್ಕೆ ಆಗಲಿಯೆಂದು ಅರ್ಜಿ ಆಹ್ವಾನಿಸಲಾಗಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂಪೀರ ವಾಲಿಕಾರ ತಿಳಿಸಿದರು.

'ದೇವರ ಹಿಪ್ಪರಗಿ, ತಾಳಿಕೋಟೆ, ಬಸವನ ಬಾಗೇವಾಡಿ, ಆಲಮೇಲದಲ್ಲಿ ಈಗಾಗಲೇ ನಡೆದ ತಾಲ್ಲೂಕು ಸಮ್ಮೇಳನಗಳಿಗೂ ಅರ್ಜಿ ಆಹ್ವಾನಿಸಿ, ಹಿರಿಯ ಸಾಹಿತಿಗಳು ಮತ್ತು ಜಿಲ್ಲಾ ಕಾರ್ಯಕಾರಣಿ ಸಮಿತಿ ಪದಾಧಿಕಾರಿಗಳು ಚರ್ಚಿಸಿ, ಅರ್ಹರನ್ನೇ ಆಯ್ಕೆ ಮಾಡಲಾಗಿತ್ತು' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಹಿಂದೆ ಅರ್ಜಿ ಆಹ್ವಾನಿಸದೇ ಪರಿಷತ್ತಿನ ಪದಾಧಿಕಾರಿಗಳು ಸೇರಿ ಅವಿರೋಧ ಆಯ್ಕೆ ಮಾಡಿದಾಗಲೂ ಟೀಕೆ ವ್ಯಕ್ತವಾಗಿತ್ತು. ಅರ್ಜಿಗಳು ಬಾರದೇ ಇದ್ದರೇ ಅಥವಾ ಅರ್ಜಿ ಹಾಕಿದವರಲ್ಲಿ ಸೂಕ್ತ ಸಾಹಿತಿಗಳು ಸಿಗದಿದ್ದರೆ, ನಾವೇ ಅರ್ಹರಾದವರನ್ನು ಆಯ್ಕೆ ಮಾಡುತ್ತೇವೆ' ಎಂದರು.

ಸಮ್ಮೇಳನ ಅಧ್ಯಕ್ಷರ ಆಯ್ಕೆಗೆ ಅರ್ಜಿ ಆಹ್ವಾನಿಸಿರುವುದು ಸರಿಯಲ್ಲ. ಅದರಲ್ಲೂ ಆಧಾರ್ ಕಾರ್ಡ್ ಲಗತ್ತಿಸುವುದೆಂದರೆ ಏನು?
ಸಿದ್ದರಾಮ ಉಪ್ಪಿನ, ಸಾಹಿತಿ

ಅಧ್ಯಕ್ಷರ ಆಯ್ಕೆಗೆ ಅರ್ಜಿ ಆಹ್ವಾನಿಸುವುದು ಪರಿಷತ್ತಿನ ಬೈಲಾದಲ್ಲಿ ಇಲ್ಲ. ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರು ಇಂಥ ಅನಿಷ್ಟ ನಡೆ ಕೂಡಲೇ ತಡೆಯಬೇಕು
ಪ್ರಕಾಶ ಖಾಡೆ, ಸಾಹಿತಿ

ಸುದ್ದಿ 2 ನಿಮಿಷ

ಪಕ್ಷದ ನೇತೃತ್ವದಲ್ಲಿಯೇ ಸಮಾವೇಶ ಮಾಡುತ್ತೇವೆ: ಸಚಿವ ರಾಜಣ್ಣ

ಬೆಂಗಳೂರು: 'ಪರಿಶಿಷ್ಟರು, ಹಿಂದುಳಿದವರು, ಮುಂದುವರಿದವರು ಹೀಗೆ ಎಲ್ಲ ಸಮುದಾಯಗಳನ್ನು ಸೇರಿಸಿಕೊಂಡು ಪಕ್ಷದ ನೇತೃತ್ವದಲ್ಲಿಯೇ ಸಮಾವೇಶ ಮಾಡುತ್ತೇವೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸಮಾವೇಶದ ರೂಪುರೇಷೆ ಏನೂ ಆಗಿಲ್ಲ. ಆದರೆ, ಮುಂದೆ ಚುನಾವಣೆಗಳು ಬರುತ್ತವೆ. ಅದಕ್ಕೆ ನಾವು ಸಿದ್ಧರಾಗಬೇಕಲ್ಲವೇ' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಇದು ಸತೀಶ ಜಾರಕಿಹೊಳಿ ಸಮಾವೇಶ ಎಂದೇನೂ ಅಲ್ಲ. ಎಸ್‌ಸಿ, ಎಸ್‌ಟಿ ಎಲ್ಲರೂ ಇರುತ್ತಾರೆ. ಸಮಾವೇಶ ಎಂದ ಮೇಲೆ ಪಕ್ಷ, ಸರ್ಕಾರವೂ ಜೊತೆಗೆ ಇರಲಿದೆ. ಹಾಸನದಲ್ಲಿ ಆಯೋಜಿಸಿದ್ದ ಮಾದರಿಯಲ್ಲಿಯೇ ಸಮಾವೇಶ ಹಮ್ಮಿಕೊಳ್ಳುವ ಚಿಂತನೆಯಿದೆ' ಎಂದರು.

'ವಿಧಾನ ಪರಿಷತ್‌ನ ನಾಲ್ಕು ಸ್ಥಾನಗಳಿಗೆ ಸೂಕ್ತ ವ್ಯಕ್ತಿಗಳನ್ನು ಅಭ್ಯರ್ಥಿಗಳಾಗಿ ಆಯ್ಕೆ ಮಾಡಬೇಕಿದೆ. ಮೇಲ್ಮನೆಗೆ ಹೋಗುವವರು ಬುದ್ಧಿವಂತರಾಗಿ ಇರಬೇಕು. ಈ ವಿಚಾರದ ಬಗ್ಗೆ ವರಿಷ್ಠರ ಜೊತೆ ಚರ್ಚಿಸಲು ಫೆ. 10ರ ಒಳಗೆ ದೆಹಲಿಗೆ ಹೋಗುತ್ತೇವೆ' ಎಂದೂ ಹೇಳಿದರು. 'ಕೆಪಿಸಿಸಿಗೆ ಹೊಸ ಅಧ್ಯಕ್ಷರ ಆಯ್ಕೆ ಸೇರಿದಂತೆ ಎಲ್ಲ ವಿಚಾರಗಳನ್ನು ಹೈಕಮಾಂಡ್ ನೋಡಿಕೊಳ್ಳಲಿದೆ' ಎಂದೂ ರಾಜಣ್ಣ ಹೇಳಿದರು.

ಬಾಣಂತಿ ಸಾವು: ವೈದ್ಯರ ನಿರ್ಲಕ್ಷ್ಯ ಆರೋಪ

ಬಳ್ಳಾರಿ: ಇಲ್ಲಿನ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಕೇಂದ್ರದಲ್ಲಿ (ವಿಮ್ಸ್) ಬಾಣಂತಿಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ.

ಮಹಾದೇವಿ(21) ಮೃತರು. 'ಜನವರಿ 25ರಂದು ಸಿಸೇರಿಯನ್ ಹೆರಿಗೆ ಮೂಲಕ ಹೆಣ್ಣುಮಗುವಿಗೆ ಜನ್ಮ ನೀಡಿದ್ದರು. ಮೂರು ದಿನಗಳ ಹಿಂದೆ ಅಸ್ವಸ್ಥಗೊಂಡರು. ಶುಕ್ರವಾರ ರಾತ್ರಿ ಆರೋಗ್ಯದಲ್ಲಿ ಏರುಪೇರಾಗಿ, ಶನಿವಾರ ಬೆಳಿಗ್ಗೆ ಮೃತಪಟ್ಟರು. ಸೋಂಕಿನಿಂದ ಮೃತಪಟ್ಟಿದ್ದಾಗಿ ವೈದ್ಯರು ಹೇಳಿದ್ದಾರೆ. ಆದರೆ, ಆಕೆಗೆ ಸೂಕ್ತ ಚಿಕಿತ್ಸೆಯೇ ಸಿಕ್ಕಿಲ್ಲ' ಎಂದು ಮೃತಳ ಪತಿ, ಕುರುಗೋಡು ತಾಲ್ಲೂಕಿನ ಕೋಳೂರು ಗ್ರಾಮದ ನಂದೀಶ್ ಆರೋಪಿಸಿದರು.

'ಹೆರಿಗೆಗೆ ಮುನ್ನ ಮಹಾದೇವಿ ಆರೋಗ್ಯವಾಗಿದ್ದರು. ಸೋಂಕಿನ ಮೂಲ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ಕೊಠಡಿಯೇ ಆಗಿರಬಹುದು ಎಂಬ ಶಂಕೆಯಿದೆ' ಎಂದು ವಿಮ್ಸ್ ಸಿಬ್ಬಂದಿಯೂ ಆದ ಮಹಾದೇವಿ ಸಹೋದರ ರಾಜು ತಿಳಿಸಿದರು.

'ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಯಿಂದ ಬಾಣಂತಿ ಮೃತಪಟ್ಟಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುವುದು. ನಿರ್ಲಕ್ಷ್ಯ ಕಂಡು ಬಂದಲ್ಲಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದು' ಎಂದು ವಿಮ್ಸ್ ನಿರ್ದೇಶಕ ಡಾ. ಗಂಗಾಧರಗೌಡ ತಿಳಿಸಿದರು.

ಮೈಕ್ರೊಫೈನಾನ್ಸ್: ತಾಯಿ ಆತ್ಮಹತ್ಯೆಯಿಂದ ನೊಂದು ಮಗ ಸಾವು

ಹಲಗೂರು: ತಾಯಿ ವಿಷ ಸೇವಿಸಿ ಮೃತಪಟ್ಟ ಸುದ್ದಿ ತಿಳಿದುಬ ಕೊನ್ನಾಪುರದ ಕೆ.ಎ.ರಂಜಿತ್ (30) ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಶನಿವಾರ ಮೃತದೇಹ ಪತ್ತೆಯಾಗಿದೆ.

ಕೆ.ಎ.ರಂಜಿತ್

ಸಾಲದ ಕಂತುಗಳನ್ನು ಪಾವತಿಸಿಲ್ಲ ಎಂದು ಖಾಸಗಿ ಮೈಕ್ರೊಫೈನಾನ್ಸ್ ಕಂಪನಿಯವರು ಇತ್ತೀಚೆಗೆ ಅವರ ಮನೆಯನ್ನು ಜಪ್ತಿ ಮಾಡಿದ್ದರು. ಅದೇ ಕಾರಣಕ್ಕೆ ತಾಯಿ ಪ್ರೇಮಾ ಜ.27 ರಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ವಿಚಾರ ತಿಳಿದ ರಂಜಿತ್ ಅಂದಿನಿಂದಲೂ ನಾಪತ್ತೆ-ಯಾಗಿದ್ದರು. ಸಂಬಂಧಿಕರ ಮನೆಗಳಲ್ಲೂ ಹುಡುಕಾಟ ಮಾಡಿದ ಕುಟುಂಬದ ಸದಸ್ಯರು, ಪ್ರೇಮಾ ಅವರ ಅಂತ್ಯಕ್ರಿಯೆ ನಡೆಸಿದ್ದರು. ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪೊಲೀಸ್ ಇನ್‌ಸ್ಪೆಕ್ಟರ್‌ಗೆ ₹2 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರುದಾರರ ಸಂಬಂಧಿಯನ್ನು ಠಾಣೆಯಲ್ಲಿ ಅಕ್ರಮವಾಗಿ ಇರಿಸಿಕೊಂಡಿದ್ದ ಪ್ರಕರಣದ ಸಂಬಂಧ ಸಿಐಡಿ ಇನ್‌ಸ್ಪೆಕ್ಟರ್ ಎ.ಡಿ.ನಾಗರಾಜ್ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶಿಸಿ ₹2 ಲಕ್ಷ ದಂಡ ವಸೂಲಿ ಮಾಡುವಂತೆ ರಾಜ್ಯ ಮಾನವ ಹಕ್ಕುಗಳ ಆಯೋಗ ಶಿಫಾರಸು ಮಾಡಿದೆ.

'ಸಿಐಡಿಯಲ್ಲಿ (ಸಿಸಿಎನ್ ಆ್ಯಂಡ್ ಐ ವಿಭಾಗ) ನಾಗರಾಜ್ ಅವರು ಕೆಲಸ ಮಾಡುತ್ತಿದ್ದ ವೇಳೆ ದೂರುದಾರರ ಸಂಬಂಧಿ ಚಂದ್ರಶೇಖರ್ ಅವರ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿದ್ದು ಕಂಡುಬಂದಿದೆ. ಇನ್‌ಸ್ಪೆಕ್ಟರ್ ತಮ್ಮ ಕಾರ್ಯ ವ್ಯಾಪ್ತಿಯನ್ನು ಮೀರಿ ಅಧಿಕಾರ ದುರುಪಯೋಗಪಡಿ-ಸಿಕೊಂಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ನೊಂದ ವ್ಯಕ್ತಿ ಹಾಗೂ ಅವರ ಬಳಿಯಿದ್ದ 'ಡಿಜಿಟ್ ಟ್ರ್ಯಾಕ್ ಮಿಷನ್' ಅನ್ನು ಬಲವಂತದಿಂದ ಜೀಪಿನಲ್ಲಿ ತೆಗೆದುಕೊಂಡು ಹೋಗಿ ಮಾನವ ಹಕ್ಕುಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂಬುದು ಆಯೋಗದ ವಿಚಾರಣೆಯಲ್ಲಿ ಸಾಬೀತಾಗಿದೆ' ಎಂದು ಆಯೋಗದ ವರದಿ ಹೇಳಿದೆ.

ಚಂದ್ರಶೇಖರ್ ಹಾಗೂ ದೂರುದಾರ ರಾಜು ಅವರಿಗೆ ತಲಾ ₹1 ಲಕ್ಷವನ್ನು ಪರಿಹಾರದ ರೂಪದಲ್ಲಿ ಸರ್ಕಾರ ನೀಡಬೇಕು. ಇಲಾಖಾ ವಿಚಾರಣೆ ನಡೆದ ಬಳಿಕ ಪರಿಹಾರವಾಗಿ ನೀಡಲಾದ ₹2 ಲಕ್ಷವನ್ನು ಇನ್‌ಸ್ಪೆಕ್ಟರ್ ವೇತನದಿಂದ ವಸೂಲಿ ಮಾಡಿಕೊಳ್ಳಬೇಕು ಎಂದು ಆಯೋಗವು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಶಿಫಾರಸು ಮಾಡಿದೆ.

ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993 ಕಲಂ 18(ಇ) ಪ್ರಕಾರ ಶಿಫಾರಸು ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ರಾಜ್ಯ ಪೊಲೀಸ್ ಇಲಾಖೆ ಮಹಾನಿರ್ದೇಶಕರು ಅನುಪಾಲನಾ ವರದಿ ಸಲ್ಲಿಸಬೇಕು ಎಂದು ಆಯೋಗದ ಸದಸ್ಯ ಎಸ್.ಕೆ.ವಂಟಿಗೋಡಿ ನಿರ್ದೇಶನ ನೀಡಿದ್ದಾರೆ.

ಅಪಘಾತ: ಮೂವರ ಸಾವು

ಜಮಖಂಡಿ (ಬಾಗಲಕೋಟೆ ಜಿಲ್ಲೆ): ತಾಲ್ಲೂಕಿನ ಆಲಗೂರು ಗ್ರಾಮದ ಬಳಿ ಶನಿವಾರ ಬೆಳಿಗ್ಗೆ ಸರಕುಸಾಗಣೆ ವಾಹನ, ಕಾರು, ಬೈಕ್ ನಡುವೆ ಅಪಘಾತ ಸಂಭವಿಸಿ,ಮೂರೂ ವಾಹನಗಳ ಚಾಲಕರು ಮೃತಪಟ್ಟಿದ್ದಾರೆ.

ಕಾರು ಚಾಲಕ ಜಮಖಂಡಿ ತಾಲ್ಲೂಕಿನ ಜಂಬಗಿ ಬಿ.ಕೆ ಗ್ರಾಮದ ನಿವಾಸಿ ಆನಂದ ಬಾಡಗಿ (22), ಸರಕುಸಾಗಣೆ ವಾಹನ ಚಾಲಕ ಬೆಳಗಾವಿ ಜಿಲ್ಲೆ ಅರಭಾವಿ ನಿವಾಸಿ ಭೀಮಪ್ಪ ಗಂಟೆಣ್ಣವರ (42), ಬೈಕ್ ಸವಾರ ವಿಜಯಪುರ ಜಿಲ್ಲೆ ಬೆನಕನಹಳ್ಳಿಯ ಮಹಾಂತೇಶ ಹೊನ್ನಾಕಟ್ಟೆ (33) ಸಾವನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನಾ ಸ್ಥಳದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಘೋಷಣೆ

'ನೋಟಿಸ್‌ಗೂ ಹೆದರಲ್ಲ; ಪ್ರತಿಭಟನೆ ಬಿಡಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತಕ್ಷಣವೇ ಕೆಲಸಕ್ಕೆ ಹಾಜರಾಗುವಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ನೋಟಿಸ್ ಜಾರಿ ಮಾಡಿದ್ದು, ಆ ನೋಟಿಸ್‌ಗಳಿಗೆ ಹೆದರುವುದಿಲ್ಲ. ಬೇಡಿಕೆ ಈಡೇರುವ ತನಕ ಪ್ರತಿಭಟನಾ ಸ್ಥಳವನ್ನು ಬಿಟ್ಟು ಕದಲುವುದಿಲ್ಲ' ಎಂದು ಅಂಗನವಾಡಿ ಕಾರ್ಯಕರ್ತೆಯರು ಶನಿವಾರ ಘೋಷಿಸಿದರು.

ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ನೇತೃತ್ವದಲ್ಲಿ ಕನಿಷ್ಠ ವೇತನ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯದ ವಿವಿಧ ಭಾಗದಿಂದ ಬಂದಿರುವ ಅಂಗನವಾಡಿ ಕಾರ್ಯಕರ್ತೆಯರು ನಡೆಸುತ್ತಿರುವ ಪ್ರತಿಭಟನೆಯು ಐದು ದಿನ ಪೂರೈಸಿದೆ. ನೋಟಿಸ್ ಜಾರಿ ಬೆನ್ನಲ್ಲೇ ಅಂಗನವಾಡಿ ಕಾರ್ಯಕರ್ತೆಯರು ಪ್ರತಿಭಟನೆ ತೀವ್ರಗೊಳಿಸಿದ್ದು, ಶನಿವಾರ ಸಹ ಕೆಲವು ಜಿಲ್ಲೆಗಳ ಕಾರ್ಯಕರ್ತೆಯರು ಪ್ರತಿಭಟನಾ ಸ್ಥಳಕ್ಕೆ ಬಂದರು.

'ಫೆಬ್ರುವರಿ 1ರಿಂದ ಕೆಲಸಕ್ಕೆ ಹಾಜರಾಗಬೇಕು. ಇಲ್ಲದಿದ್ದರೆ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ಶಿವಮೊಗ್ಗದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಏಳು ಮಂದಿಗೆ ನೋಟಿಸ್ ಜಾರಿ ಮಾಡಿದ್ದಾರೆ. 'ಯಾರು ಎಷ್ಟೇ ನೋಟಿಸ್ ಜಾರಿ ಮಾಡಲಿ. ನೋಟಿಸ್‌ಗೆ ಹೆದರಿ ಪ್ರತಿಭಟನೆ ಮೊಟಕುಗೊಳಿಸುವ ಪ್ರಶ್ನೆಯೇ ಇಲ್ಲ' ಎಂದು ಪ್ರತಿಭಟನೆನಿರತ ಮಹಿಳೆಯರು ಎಚ್ಚರಿಸಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರಿಗೆ ಬೆಂಬಲ ಸೂಚಿಸಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಧರಣಿಯಲ್ಲಿ ಪಾಲ್ಗೊಂಡರು – ಪ್ರಜಾವಾಣಿ ಚಿತ್ರ

ಶುಕ್ರವಾರ ಮಧ್ಯಾಹ್ನ ಒಂದು ಭಾಗದ ಟೆಂಟ್ ಅನ್ನು ತೆರವು ಮಾಡಲಾಗಿತ್ತು. ಪ್ರತಿಭಟನಕಾರರೇ ಟೆಂಟ್ ಹಾಕಿಸಿಕೊಂಡು ಅದೇ ಸ್ಥಳದಲ್ಲಿ ಶನಿವಾರ ಪ್ರತಿಭಟನೆ ಮುಂದುವರೆಸಿದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹಾಗೂ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಚರ್ಚಿಸಿದರು. ಬಳಿಕ ಮಾತನಾಡಿದ ಆರ್.ಅಶೋಕ, 'ಕಾಂಗ್ರೆಸ್ ಮುಖಂಡರು, ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂತೆಯೇ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ಹೆಚ್ಚಳ ಮಾಡಬೇಕು' ಎಂದು ಆಗ್ರಹಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಯಾವುದೇ ಇಲಾಖೆಯಲ್ಲೂ ಹುದ್ದೆಗಳನ್ನು ಭರ್ತಿ ಮಾಡಿಲ್ಲ. ಆದರೆ, ಅವರ ಜೇಬು ಮಾತ್ರ ಭರ್ತಿ ಆಗುತ್ತಿದೆ
– ಆರ್.ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

'ಅಂಗನವಾಡಿ ಕಾರ್ಯಕರ್ತೆಯರ ಮೇಲೆ ಪೊಲೀಸರು ದೌರ್ಜನ್ಯ ಎಸಗಿದ್ದಾರೆ. ಗಂಟು–ಮೂಟೆ ಕಟ್ಟಿಕೊಂಡು ಮನೆಗೆ ಹೋಗಿ ಎಂದು ಬೆದರಿಸಿದ್ದಾರೆ. ಪ್ರತಿಭಟನೆಗೆ ಅವಕಾಶ ನೀಡುತ್ತಿಲ್ಲ. ಕುಡಿಯುವ ನೀರು, ಶೌಚಾಲಯ, ಟೆಂಟ್ ಸೌಲಭ್ಯ ನೀಡುತ್ತಿಲ್ಲ' ಎಂದು ಆಪಾದಿಸಿದರು.

'ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆಗೆ ಬಿಜೆಪಿ ಬೆಂಬಲ ನೀಡುತ್ತಿದೆ. ಅವರನ್ನು ಕರೆಸಿ, ಚರ್ಚಿಸಿ, ಭರವಸೆ ನೀಡಬೇಕು. ಇಲ್ಲದಿದ್ದರೆ ಸರ್ಕಾರದ ವಿರುದ್ಧ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

ಬಸವಣ್ಣ ದೇಶದ್ರೋಹಿಯೇ? ಪ್ರಿಯಾಂಕ್ ಖರ್ಗೆ

ಹುಬ್ಬಳ್ಳಿ: 'ಬೌದ್ಧ, ಜೈನ, ಸಿಖ್ ಮತ್ತು ಲಿಂಗಾಯತ ಈ ಧರ್ಮಗಳು ಯಾವ ಧರ್ಮ ಮತ್ತು ಆಚರಣೆ ವಿರುದ್ಧ ಹುಟ್ಟಿಕೊಂಡಿವೆ? ಹಾಗಾದರೆ ಬಸವಣ್ಣ ದೇಶದ್ರೋಹಿಯೇ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಇಲ್ಲಿ ಪ್ರಶ್ನಿಸಿದರು.

ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಯಾವ ಧರ್ಮದಲ್ಲಿ ಸಮಾನತೆ, ಸ್ವಾಭಿಮಾನ ಇಲ್ಲವಾಗಿತ್ತೋ, ಅದರ ವಿರುದ್ಧ ದೇಶದಲ್ಲಿ ನಾಲ್ಕು ಪ್ರಮುಖ ಧರ್ಮಗಳು ಹುಟ್ಟಿಕೊಂಡವು. ಸಾಮಾನ್ಯಜ್ಞಾನ ಇಲ್ಲದ ಬಿಜೆಪಿಯವರು, ತಮ್ಮ ಹುಳುಕು ಮುಚ್ಚಿಟ್ಟುಕೊಳ್ಳಲು ಅಸಂಬದ್ಧ ವಿಷಯಗಳನ್ನು ಚರ್ಚೆಗೆ ತರುತ್ತಾರೆ' ಎಂದರು.

'ಯಾವುದೇ ಪವಿತ್ರ ನದಿಗೆ ಹೋಗಿ ಸ್ನಾನ ಮಾಡಿದರೂ ಪಾಪ ಪರಿಹಾರ ಆಗುವುದಿಲ್ಲ. ಬಡತನ ನಿರ್ಮೂಲನೆಗೆ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಿ' ಎಂದರು.

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯುರಿಟೀಸ್)
ವಿಧಾನ ಸೌಧ, ಬೆಂಗಳೂರು.
No: FD 01 BMB 2024 Dated: 31.01.2025
ಪ್ರಕಟಣೆ
1. ಒಟ್ಟು ಮೊತ್ತ: ರೂ 1000 ಕೋಟಿ (ರೂ 1000 ಕೋಟಿ – 10 ವರ್ಷದ ಮತ್ತು 6 ತಿಂಗಳು ಅವಧಿ)
2. ಹಂಚಿಕೆ ವಿಧಾನ: ಹರಾಜು ಮೂಲಕ, ಪಿಡಿಒ, ಆರ್‌ಬಿಐ, ಮುಂಬೈ (ಫೋರ್ಟ್) ಮುಖಾಂತರ.
3. ಹರಾಜಿನ ದಿನಾಂಕ : ಫೆಬ್ರವರಿ 04, 2025.
ಕರ್ನಾಟಕ ಸರ್ಕಾರವು ಮೇಲಿನ ಸೆಕ್ಯೂರಿಟಿಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ ಶೇ 10ರ ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.
ಸಹಿ/– (ಡಾ.ಪಿ.ಸಿ. ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ
DIPR/CP/4725/Zen/2024-25

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518
ಅಧಿಸೂಚನೆ ಸಂಖ್ಯೆ: ಡಿಪಿಎಸ್/ಪಿಯುಆರ್‌ಎ/ಟಿಡಿಆರ್‌ಸಿ/12/2024–ಪಿಯುಆರ್/Call-2 ದಿನಾಂಕ: 31–01–2025
ಸಂಕ್ಷಿಪ್ತ ಟೆಂಡರ್ ಅಧಿಸೂಚನೆ
ಅಲ್ಪಾವಧಿ ಟೆಂಡರ್
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಪ್ಲೇಟ್ಸ್ ಮತ್ತು ಕೆಮಿಕಲ್ಸ್‌ಗಳ ಸಂಗ್ರಹಣೆಗಾಗಿ ಆನ್‌ಲೈನ್ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.113.27 ಲಕ್ಷಗಳು ಹಾಗೂ ಇ.ಎಂ.ಡಿ.ಯು ರೂ. 5.70 ಲಕ್ಷಗಳಾಗಿರುತ್ತದೆ. ಟೆಂಡರ್‌ನ ಪೂರ್ವಭಾವಿ ಸಭೆ ದಿನಾಂಕ : 05–02–2025ರ ಬೆಳಿಗ್ಗೆ 11.30 ಗಂಟೆಗೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 10–02–2025, 17.30 ಗಂಟೆಯಾಗಿರುತ್ತದೆ. ಟೆಂಡರ್‌ನ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ನಿರ್ದೇಶಕರು (ಪ್ರ)
ವಾ.ಸಾ.ಸಂ.ಇ/ವಾಪ್ರ/4741/ಆಕಾರ್/2024–25

ನಗರಸಭಾ ಕಾರ್ಯಾಲಯ, ನಂಜನಗೂಡು
ನಂಜನಗೂಡು–571301, ಮೈಸೂರು ಜಿಲ್ಲೆ, ದೂರವಾಣಿ: 08221–226236
ವೆಬ್‌ಸೈಟ್: www.nanjanaguducity.mrc.gov.in
ಇಮೇಲ್: itstaff_ulb_nanjangud@yahoo.co.in
ಸಂಖ್ಯೆ:ನ.ಸ.ನಂ/ತಾಶಾ/ನಸಾನಿ&ಕುನೀಸ/ಟೆಂ/2024–25 ದಿನಾಂಕ: 21.01.2025
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್ ಪದ್ಧತಿಯಲ್ಲಿ)
ನಂಜನಗೂಡು ನಗರಸಭೆಯ 2024–25ನೇ ಸಾಲಿನ ನಗರಸಭಾ ಸಾಮಾನ್ಯ ನಿಧಿ ಹಾಗೂ 2024–25ನೇ ಸಾಲಿನಲ್ಲಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬಿಡುಗಡೆಯಾಗಿರುವ ಅನುದಾನದಡಿ ಕೈಗೊಳ್ಳಲು ಉದ್ದೇಶಿಸಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಚಾಲ್ತಿ ಸಾಲಿಗೆ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ KW-1 ಹಾಗೂ KW-2ರ ನಿಯಮಗಳ ಅನ್ವಯ ಹಾಗೂ 1999 ಹಾಗೂ 2000 ರ ಪಾರದರ್ಶಕ ಕಾಯ್ದೆಗೆ ಒಳಪಟ್ಟು ಪ್ರತ್ಯೇಕವಾಗಿ ಇ–ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಗುತ್ತಿಗೆದಾರರು https://kppp.karnataka.gov.in/ ನಿಂದ ಟೆಂಡರ್ ಷರತ್ತು, ಇಎಂಡಿ ಹಾಗೂ ದಸ್ತಾವೇಜನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ.

ಕ್ರಸಂ	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಮೀಸಲಾತಿ
1	DMA/2024-25/EL/WORK_INDENT33738	8.65	ಸಾಮಾನ್ಯ
2	DMA/2024-25/RD/WORK_INDENT33734	10.00	ಪರಿಶಿಷ್ಟ ಜಾತಿ
3	DMA/2024-25/RD/WORK_INDENT33743	10.00	ಪ್ರವರ್ಗ–1
4	DMA/2024-25/RD/WORK_INDENT33736	10.00	ಸಾಮಾನ್ಯ
5	DMA/2024-25/BD/WORK_INDENT33744	20.00	ಸಾಮಾನ್ಯ
6	DMA/2024-25/BD/WORK_INDENT33745	17.75	ಪ್ರವರ್ಗ–2A
7	DMA/2024-25/WS/WORK_INDENT35124	2.36	ಪರಿಶಿಷ್ಟ ಪಂಗಡ
8	DMA/2024-25/OW/WORK_INDENT35007	14.25	ಸಾಮಾನ್ಯ
9	DMA/2024-25/RD/WORK_INDENT35006	11.30	ಸಾಮಾನ್ಯ
10	DMA/2024-25/RD/WORK_INDENT35018	10.00	ಸಾಮಾನ್ಯ
11	DMA/2024-25/BD/WORK_INDENT35025	40.00	ಪರಿಶಿಷ್ಟ ಜಾತಿ
12	DMA/2024-25/RD/WORK_INDENT35009	10.00	ಸಾಮಾನ್ಯ
13	DMA/2024-25/WS/WORK_INDENT35024	1.95	ಸಾಮಾನ್ಯ
14	DMA/2024-25/WS/WORK_INDENT35020	2.89	ಸಾಮಾನ್ಯ
15	DMA/2024-25/OW/WORK_INDENT35092	50.00	ಪ್ರವರ್ಗ–2A
16	DMA/2024-25/EL/WORK_INDENT35308	19.20	ಸಾಮಾನ್ಯ
17	DMA/2024-25/EL/WORK_INDENT35304	12.59	ಪರಿಶಿಷ್ಟ ಜಾತಿ
18	DMA/2024-25/OW/WORK_INDENT35095	20.00	ಪರಿಶಿಷ್ಟ ಪಂಗಡ
19	DMA/2024-25/EL/WORK_INDENT35305	50.00	ಸಾಮಾನ್ಯ

1. ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕಡೆಯ **ದಿನಾಂಕ : 06/02/2025 ಸಂಜೆ 5:00 ಗಂಟೆಯವರೆಗೆ** 2. ಟೆಂಡರ್ ತೆರೆಯುವ ದಿನಾಂಕ : **08/02/2025 ಬೆಳಿಗ್ಗೆ 11.00 ಗಂಟೆಗೆ**
ಸೂಚನೆ: 1. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು https://kppp.karnataka.gov.in/ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು. 2. ಜಿ.ಎಸ್.ಟಿ ತೆರಿಗೆಯನ್ನು ಪ್ರತ್ಯೇಕವಾಗಿ ಕಾಮಗಾರಿ ಬಿಲ್ಲಿನಲ್ಲಿ ಸೇರಿಸಲಾಗುವುದು.
ಸಹಿ/– ಅಧ್ಯಕ್ಷರು ನಗರಸಭೆ, ನಂಜನಗೂಡು | ಸಹಿ/– ಉಪಾಧ್ಯಕ್ಷರು ನಗರಸಭೆ, ನಂಜನಗೂಡು | ಸಹಿ/– ಪೌರಾಯುಕ್ತರು ನಗರಸಭೆ ನಂಜನಗೂಡು
DIPR/MYS/KAVITA/1225/2024-25

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ, (ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಸಂ.ಕ್ರಾ.ಸಾ.ಆ.ಸ/Ab-Ark/Drugs/06/2024–25
ದಿನಾಂಕ: 30/01/2025
ಇ–ಪ್ರೊಕ್ಯೂರ್‌ಮೆಂಟ್ ಮರು ಅಲ್ಪಾವಧಿ ಟೆಂಡರ್ ಪ್ರಕಟಣೆ
2024–25ನೇ ಸಾಲಿಗೆ ಔಷಧಿಗಳ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ/ ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ಮೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರಿನ ವಾರ್ಷಿಕ ಅಂದಾಜು ಮೊತ್ತ 15,00,000/– ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರೊಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 37500/–ಗಳ ಇ.ಎಂ.ಡಿ ಯನ್ನು ಇ– ಪಾವತಿ ಮೂಲಕ ಸಕಾಲದಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ದಿ॥ 8/02/2025 ರ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.
ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
ವಾಸಾಸಂಇ/ಹಿಸನಿ/ಹಾಸನ/900/ಕೆಎಸ್‌ಎಂಸಿಎ/2024–25

ಸಾರ್ವಜನಿಕ ಆಸ್ಪತ್ರೆ ಜಯನಗರ
ವೈದ್ಯಕೀಯ ಅಧೀಕ್ಷಕರವರ ಕಛೇರಿ, ಬೆಂಗಳೂರು – 560041.
ಸಂ: ಸಾಆಜ/ಲೇಖನ ಸಾಮಗ್ರಿಗಳು/ಇ–ಟೆಂಡರ್/01/2025–26 ದಿ: 01.02.2025
ಇ–ಟೆಂಡರ್ ಪ್ರಕಟಣೆ
ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು, ಈ ಆಸ್ಪತ್ರೆಯ 2025–26 ನೇ ಸಾಲಿನ ಒಂದು ವರ್ಷದ ಅವಧಿಗೆ ಲೇಖನ ಸಾಮಗ್ರಿಗಳ ಇ–ಟೆಂಡರ್ ಪ್ರಕಟಣೆ.
ಟೆಂಡರ್ ಅನುಸೂಚಿಗಳು

ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭದ ದಿನಾಂಕ	04.02.2025 ಸಂಜೆ 4.00 ಗಂಟೆ
ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ	18.02.2025 ಸಂಜೆ 4.00 ಗಂಟೆಯವರೆಗೆ
ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	19.02.2025 ಸಂಜೆ 4.00 ಗಂಟೆಯವರೆಗೆ
ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ	24.02.2025 ಸಂಜೆ 4.00 ಗಂಟೆಯವರೆಗೆ
Total Value of the Tender	ರೂ. 20,00,000/–

ಟೆಂಡರುಗಳ ನಿಯಮ ಮತ್ತು ನಿಬಂಧನೆಗಳನ್ನು ಟೆಂಡರ್ ನಮೂನೆಯಲ್ಲಿ ಲಗತ್ತಿಸಲಾಗಿರುತ್ತದೆ. E-Tender upload through this website: https://kppp.karnataka.gov.in
ಸಹಿ/–
ವೈದ್ಯಕೀಯ ಅಧೀಕ್ಷಕರು
ಸಾರ್ವಜನಿಕ ಆಸ್ಪತ್ರೆ ಜಯನಗರ, ಬೆಂಗಳೂರು
ವಾಸಾಸಂಇ/ಸಿಪಿ/ಎಎಎ/4738/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ ಹಾಸನ ವಿಭಾಗ, ಹಾಸನ.
ಸಂಖ್ಯೆ: 26: ಕಾಇಂ:ಲೋಇ:ಹಾವಿ:ಕ.ಇಂ–2:2024–25
ದಿನಾಂಕ: 31.01.2025.
ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–3 ಹಾಗೂ ಕೆ.ಡಬ್ಲ್ಯೂ–4 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ ದರ್ಜೆ ಗುತ್ತಿಗೆದಾರರಿಂದ ಹಾಸನ ವಿಭಾಗದ ಅರಸೀಕೆರೆ ಉಪವಿಭಾಗ ವ್ಯಾಪ್ತಿಯ ಒಟ್ಟು 2 ಸಂಖ್ಯೆ ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನಲ್ಲಿನ ಗರಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ.200.00ಲಕ್ಷ ಹಾಗೂ ಕನಿಷ್ಠ ಕಾಮಗಾರಿ ಅಂದಾಜು ಮೊತ್ತ ರೂ.100.00ಲಕ್ಷ, ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದ ಮೊತ್ತವು ಮಂಜೂರಾದ ಅಂದಾಜು ಮೊತ್ತವಾಗಿದ್ದು, ಜಿ.ಎಸ್.ಟಿ ಹಾಗೂ ಇತರೆಗಳನ್ನು ಹೊರತುಪಡಿಸಿ ಇ–ಪ್ರೊಕ್‌ನಡಿಯಲ್ಲಿ ಬರುವ ಟೆಂಡರ್‌ಗಿಟ್ಟ ಮೊತ್ತವನ್ನು ಪರಿಗಣಿಸಿ ಅದಕ್ಕನುಗುಣವಾಗಿ ಇ.ಎಂ.ಡಿ ಮತ್ತು ಗುತ್ತಿಗೆದಾರರ ದರ್ಜೆಯನ್ನು ಪರಿಗಣಿಸುವುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕಾಮಗಾರಿಗಳಿಗೆ ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 11.02.2025, ಸಂಜೆ 4.00 ಗಂಟೆ ವರೆಗೆ. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ನೋಡುವುದು ಅಥವಾ ಈ ಕಛೇರಿಯ ಸಹಾಯಕ ದೂರವಾಣಿ ಸಂಖ್ಯೆ: 08172–268437 ರಿಂದ ಕಛೇರಿಯ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಇ ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/890/ಕೆಎಸ್‌ಎಂಸಿಎ/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ:ಮುಇಂವಿ/ಟಿಮತ್ತುಪಿ/ಅಇಂ(ವಿ)–2/ಕಾನಿಇಂ–ಟಿ7/ಸಕಾನಿಇಂ–ಪಿ–1/2024–25/8431–36 ದಿನಾಂಕ:01.02.2025
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಮೂಲಕ ಕೆಳಕಂಡ ಕಾಮಗಾರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ ಹಾಗೂ ವಿವರ
	ಕೆಪಿಟಿಸಿಎಲ್/2024–25/ಎಸ್‌ಎಸ್/ವರ್ಕ್_ಇಂಡೆಂಟ್1945
1.	ಕವಿಪ್ರನಿನಿಗಾಗಿ 01 ಸಂಖ್ಯೆಯ 66/11ಕೆವಿ 1x20ಎಂವಿಎ ಸಾಮರ್ಥ್ಯದ ಜಿಐಎಸ್ ಸ್ವಿಚ್‌ಗೇರ್ ಮೊಬೈಲ್ ಕಾಂಪ್ಯಾಕ್ಟ್ ಸಬ್ ಸ್ಟೇಷನ್ (MCS)-Unit-2 ನ ವಿನ್ಯಾಸ, ತಯಾರಿಕೆ, ಪರೀಕ್ಷೆ, ಪೂರೈಕೆ ಮತ್ತು ಸ್ಥಾಪನೆ/ಪ್ರದರ್ಶನಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ https://kptcl.karnataka.gov.in ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್ಮೆಂಟ್ ಕವಿಪ್ರನಿನಿ" ಅಥವಾ https://kppp.karnataka.gov.in ನಲ್ಲಿ ಲಾಗಿನ್ ಆಗಿ ದಿನಾಂಕ **04.02.2025 ರಂದು 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **20.02.2025 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು**. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/– ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ & ಪ್ರೊಕ್ಯೂರ್‌ಮೆಂಟ್
ಕವಿಪ್ರನಿನಿ, ಕಾವೇರಿ ಭವನ, 3ನೇ ಮಹಡಿ, ಬೆಂಗಳೂರು–560 009.

ಬಜೆಟ್‌ನಲ್ಲಿ ಕೇವಲ ₹574.80 ಕೋಟಿ ಹಂಚಿಕೆ • 2020ರಲ್ಲೇ ನಡೆಯಬೇಕಿದ್ದ ಜನಗಣತಿ

ಈ ವರ್ಷ ಜನಗಣತಿ ಸಾಧ್ಯತೆ ಕ್ಷೀಣ

ಮುಖ್ಯಾಂಶಗಳು

- ಕೋವಿಡ್‌–19 ಕಾರಣಕ್ಕೆ ಯೋಜನೆ ಮುಂದೂಡಿಕೆ
- ಹಣ ಹಂಚಿಕೆ ಮೊತ್ತದಲ್ಲಿ ಗಣನೀಯ ಇಳಿಕೆ
- ಕನಿಷ್ಠ ₹12 ಸಾವಿರ ಕೋಟಿ ಅಗತ್ಯ

ನವದೆಹಲಿ (ಪಿಟಿಐ): ಈ ಸಾಲಿನ ಬಜೆಟ್‌ನಲ್ಲಿ ಜನಗಣತಿ ಉದ್ದೇಶಕ್ಕೆ ಕೇವಲ ₹574.80 ಕೋಟಿ ಹಣ ಹಂಚಿಕೆ ಮಾಡಲಾಗಿದೆ. ಈ ಪ್ರಸ್ತಾವದ ಆಧಾರದಲ್ಲಿ ಹೇಳುವುದಾದರೆ ಈ ವರ್ಷ ದೇಶದಾದ್ಯಂತ ಜನಗಣತಿ ಮತ್ತು ರಾಷ್ಟ್ರೀಯ ಜನಸಂಖ್ಯೆ ನೋಂದಣಿ (ಎನ್‌ಪಿಆರ್‌) ಪರಿಷ್ಕರಣೆ ನಡೆಯುವ ಸಾಧ್ಯತೆ ಕಡಿಮೆ.

2019ರ ಡಿಸೆಂಬರ್ 24ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 2021ರಲ್ಲಿ ₹8,754.23 ಕೋಟಿ ವೆಚ್ಚದಲ್ಲಿ ಜನಗಣತಿ ಮತ್ತು ₹3,941.35 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಜನಸಂಖ್ಯೆ ನೋಂದಣಿಯ ಪರಿಷ್ಕರಣೆನಡೆಸಲು ಒಪ್ಪಿಗೆ ಸೂಚಿಸಿತ್ತು.

ದೇಶದಾದ್ಯಂತ 2020ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ನಡುವೆ ಮನೆ ಮನೆಗೆ ತೆರಳಿ ಜನಗಣತಿ ಮತ್ತು ಎನ್‌ಪಿಆರ್ ಪರಿಷ್ಕರಿಸುವ ಕಾರ್ಯ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ, ಕೋವಿಡ್‌–19 ಸಾಂಕ್ರಾಮಿಕದ ಕಾರಣದಿಂದ ಅದನ್ನು ಮುಂದೂಡಲಾಗಿತ್ತು.

ಕೋವಿಡ್ ಹಾವಳಿ ಮುಗಿದ ನಂತರವೂ ಜನಗಣತಿಯನ್ನು ತಡೆ ಹಿಡಿಯಲಾಗಿದ್ದು, ಸರ್ಕಾರ ಹೊಸ ವೇಳಾಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಮಂಡಿಸಿರುವ 2025–26ನೇ ಸಾಲಿನ ಬಜೆಟ್‌ನಲ್ಲಿ, ಜನಗಣತಿ, ಸಮೀಕ್ಷೆಗಳು ಮತ್ತು ಸಾಂಖ್ಯಿಕ/ಭಾರತೀಯ ರಿಜಿಸ್ಟ್ರಾರ್ ಜನರಲ್‌ಗೆ ₹575.80 ಕೋಟಿ ಹಂಚಿಕೆ ಮಾಡುವ ಘೋಷಣೆ ಮಾಡಲಾಗಿದೆ. 2021–22ರ ಬಜೆಟ್‌ಗೆ ಹೋಲಿಸಿದರೆ ಮೀಸಲಿಟ್ಟ ಅನುದಾನದಲ್ಲಿ ಗಣನೀಯ ಪ್ರಮಾಣದಲ್ಲಿ ಕಡಿತ ಮಾಡಲಾಗಿದೆ. ಆ ವರ್ಷ ₹3,768 ಕೋಟಿ ಹಂಚಿಕೆ ಮಾಡಲಾಗಿತ್ತು. ಕಳೆದ ವರ್ಷ (2024–25) ₹572 ಕೋಟಿ ಮೀಸಲಿಡಲಾಗಿತ್ತು.

ಅಧಿಕಾರಿಗಳ ಪ್ರಕಾರ, ಜನಗಣತಿ ಮತ್ತು ಎನ್‌ಪಿಆರ್ ಪ್ರಕ್ರಿಯೆಗೆ ₹12 ಸಾವಿರ ಕೋಟಿಗೂ ಹೆಚ್ಚು ವೆಚ್ಚವಾಗಲಿದೆ.

ಡಿಜಿಟಲ್ ಜನಗಣತಿ

ಜನಗಣತಿ ಯಾವಾಗ ನಡೆದರೂ, ಈ ಬಾರಿಯದ್ದು ಮೊದಲ ಡಿಜಿಟಲ್ ಜನಗಣತಿಯಾಗಿರಲಿದೆ. ದೇಶದ ಪ್ರಜೆಗಳಿಗೆ ವಿವರಗಳನ್ನು ಸ್ವತಃ ನಮೂದಿಸಲು ಇದು ಅವಕಾಶ ನೀಡಲಿದೆ.

ಸರ್ಕಾರದ ಗಣತಿಗಾರರ ಬದಲಿಗೆ ತಾವೇ ಗಣತಿಯ ಅರ್ಜಿ ನಮೂನೆಯನ್ನು ಭರ್ತಿ ಮಾಡಲು ಬಯಸಿದ ನಾಗರಿಕರು ರಾಷ್ಟ್ರೀಯ ಜನಸಂಖ್ಯೆ ನೋಂದಣಿ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ ಸ್ವಯಂ–ಗಣತಿ ಪೋರ್ಟಲ್ ಅನ್ನು ರೂಪಿಸಿದೆ. ಆದರೆ, ಅದಿನ್ನೂ ಉದ್ಘಾಟನೆಯಾಗಿಲ್ಲ. ಸ್ವಯಂ–ಗಣತಿ ವೇಳೆ ಆಧಾರ್ ಸಂಖ್ಯೆ ಅಥವಾ ಮೊಬೈಲ್ ನಂಬರ್ ವಿವರವನ್ನು ಕಡ್ಡಾಯವಾಗಿ ಸಂಗ್ರಹಿಸಲಾಗುತ್ತದೆ.

ಕನಸು ನನಸಾಯಿತು: ದುಲಾರಿ ದೇವಿ

ಮಧುಬನಿ ಪೇಂಟಿಂಗ್ ಸೀರೆ ಧರಿಸಿದ ಸಚಿವೆ ನಿರ್ಮಲಾ

ಹಣಕಾಸು ಬಜೆಟ್ ಮಂಡಿಸಲು ಶನಿವಾರ ನವದೆಹಲಿಯ ಸಂಸತ್ ಭವನಕ್ಕೆ ಆಗಮಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಧುಬನಿ ಸೀರೆ ಧರಿಸಿ ಗಮನಸೆಳೆದರು ಪಿಟಿಐ ಚಿತ್ರ

ಪಟ್ನಾ (ಪಿಟಿಐ): ಮಧುಬನಿ ಪೇಂಟಿಂಗ್‌ನಿಂದ ರಚಿಸಿದ ಸೀರೆಯನ್ನು ಉಟ್ಟು ಬಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶನಿವಾರ ಬಜೆಟ್ ಮಂಡಿಸಿದರು. ಸಚಿವರಿಗೆ ಇದನ್ನು ಉಡುಗೊರೆಯಾಗಿ ನೀಡಿದ ಪದ್ಮಶ್ರೀ ಪುರಸ್ಕೃತೆ ದುಲಾರಿ ದೇವಿ ಅವರು, ‘ಕೊನೆಗೂ ಕನಸು ನನಸಾಗಿದೆ’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ನಿರ್ಮಲಾ ಅವರು ಮೀನಿನ ರಚನೆಯ ಎಂಬ್ರಾಯಿಡರಿ, ಚಿನ್ನದ ಅಂಚು ಹೊಂದಿದ ಕೆನೆಬಣ್ಣದ ಸೀರೆ, ಕೆಂಪುಬಣ್ಣದ ರವಿಕೆ ಧರಿಸಿ ಬಂದಿದ್ದರು.

'ನಾನು ಅವರಿಗೆ ಉಡುಗೊರೆಯಾಗಿ ನೀಡಿದ ಸೀರೆಯನ್ನು ಧರಿಸುವ ಮೂಲಕ ಸಚಿವರು ಮಧುಬನಿ ಕಲೆಗೆ ಗೌರವ ಸಲ್ಲಿಸಿದ್ದಾರೆ. ಎರಡು ತಿಂಗಳ ಹಿಂದೆ ಮಧುಬನಿಯ ಮಿಥಿಲಾ ಆರ್ಟ್ ಇನ್‌ಸ್ಟಿಟ್ಯೂಟ್‌ಗೆ ಅವರು ಭೇಟಿ ನೀಡಿದ್ದ ವೇಳೆ ಸೀರೆ ನೀಡಿದ್ದೆ. ಬಜೆಟ್ ದಿನದಂದು ಅದನ್ನು ಧರಿಸುವಂತೆ ಮನವಿ ಮಾಡಿದ್ದಕ್ಕೆ ಒಪ್ಪಿಗೆ ನೀಡಿದ್ದರು. ನನ್ನ ಪಾಲಿನ ಕನಸು ನನಸಾಗಿದೆ’ ಎಂದು ಅವರು ತಿಳಿಸಿದರು.

‘ಕುಂಭದ ವೈಭವಕ್ಕೆ ಧಕ್ಕೆ ತರಲು ಯತ್ನ’

ರಾಜಕೀಯ ವಿರೋಧಿಗಳ ವಿರುದ್ಧ ಸಿ.ಎಂ ಆದಿತ್ಯನಾಥ್ ಕಿಡಿ

ಮಹಾಕುಂಭ ಮೇಳದಲ್ಲಿ ಭಾಗವಹಿಸಿದ್ದ ವಿದೇಶಿ ಭಕ್ತರು ಪಿಟಿಐ ಚಿತ್ರ

ಪ್ರಯಾಗ್‌ರಾಜ್ (ಪಿಟಿಐ): ಮೌನಿ ಅಮಾವಾಸ್ಯೆಯಂದು ನಡೆದ ಕಾಲ್ತುಳಿತದ ದುರಂತದ ವಿಷಯವನ್ನು ಬಳಸಿಕೊಂಡು ಮಹಾಕುಂಭ ಮೇಳದ ವೈಭವಕ್ಕೆ ಧಕ್ಕೆ ತರಲು ರಾಜಕೀಯ ವಿರೋಧಿಗಳು ಯತ್ನಿಸುತ್ತಿದ್ದಾರೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ದೂರಿದರು.

ಕಾಲ್ತುಳಿತ ಸಂಭವಿಸಿದ ನಂತರ ಮೊದಲ ಬಾರಿಗೆ ಮಹಾಕುಂಭಮೇಳ ನಗರಕ್ಕೆ ಭೇಟಿ ನೀಡಿದ ಬಳಿಕ ಸಂತರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಸನಾತನ ಧರ್ಮದ ವಿರೋಧಿಗಳು ಸಂತರ ತಾಳ್ಮೆಯನ್ನು ಪರೀಕ್ಷಿಸುತ್ತಿದ್ದಾರೆ. ಈ ಮೂಲಕ ಕಾಲ್ತುಳಿತದ ಘಟನೆಯು ಜಾಗತಿಕವಾಗಿಯೂ ಮುಜುಗರವಾಗಬೇಕು ಎಂದು ಬಯಸುತ್ತಿದ್ದಾರೆ’ ಎಂದು ಕಿಡಿಕಾರಿದರು.

'ಕಾಲ್ತುಳಿತದ ದುರಂತ ಸಂಭವಿಸಿದಾಗ ಸಂತರು ಸಂಯಮದಿಂದ ವರ್ತಿಸಿದರು. ಕಳೆದ 19 ದಿನಗಳಲ್ಲಿ ಸುಮಾರು 32 ಕೋಟಿ ಮಂದಿ ಮಹಾಕುಂಭಕ್ಕೆ ಭೇಟಿ ನೀಡಿ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ’ ಎಂದು ಹೇಳಿದರು.

ಫೆ. 3ರಂದು ವಸಂತ ಪಂಚಮಿ. ಅಂದೂ ಅಸಂಖ್ಯಾತ ಭಕ್ತರು ಪವಿತ್ರಸ್ನಾನಕ್ಕಾಗಿ ತ್ರಿವೇಣಿ ಸಂಗಮಕ್ಕೆ ಬರಲಿದ್ದಾರೆ.

‘ನಾಗಾ ಸಾಧು ಕಾಲ್ತುಳಿತದಿಂದ ಸತ್ತಿಲ್ಲ’

ಚಿತ್ರದುರ್ಗ: ‘ಇಲ್ಲಿನ ಬಂಜಾರ ಗುರುಪೀಠದಲ್ಲಿದ್ದ ನಾಗಾ ಸಾಧು ನಾಗನಾಥ್ ಮಹರಾಜ್ ಅವರು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಕಾಲ್ತುಳಿತಕ್ಕೆ ಸಿಲುಕಿ ಮೃತಪಟ್ಟಿಲ್ಲ. ಪ್ರಯಾಗ್‌ರಾಜ್‌ನಿಂದ 500 ಕಿ.ಮೀ ದೂರದಲ್ಲಿರುವ ಝೂನ್ಸಿ ರೈಲು ನಿಲ್ದಾಣದಲ್ಲಿ ಅಪರಿಚಿತ ಶವವಾಗಿ ಪತ್ತೆಯಾಗಿದ್ದಾರೆ’ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸ್ಪಷ್ಟಪಡಿಸಿದ್ದಾರೆ.

‘ಝೂನ್ಸಿ ರೈಲು ನಿಲ್ದಾಣದ ನೋಟಿಸ್ ಬೋರ್ಡ್‌ನಲ್ಲಿ ನಾಗನಾಥ್ ಮಹರಾಜ್ ಅವರ ವಿವರ ಪ್ರಕಟಿಸಲಾಗಿದೆ. ಬಂಜಾರ ಗುರುಪೀಠದ ವಿಳಾಸ ಸಿಕ್ಕಿರುವುದರಿಂದ ಅವರು ಚಿತ್ರದುರ್ಗದವರು ಎಂಬುದು ಗೊತ್ತಾಗಿದೆ. ಕುಂಭಮೇಳದಲ್ಲಿ ನಡೆದ ಕಾಲ್ತುಳಿತಕ್ಕೂ ನಾಗಾ ಸಾಧು ಸಾವಿಗೂ ಯಾವುದೇ ಸಂಬಂಧವಿಲ್ಲ. ಮೃತದೇಹವನ್ನು ಝೂನ್ಸಿಯಲ್ಲಿನ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ’ ಎಂದು ಶನಿವಾರ ತಿಳಿಸಿದ್ದಾರೆ.

ಬಜೆಟ್ ಘೋಷಣೆಯಿಂದ ದೆಹಲಿ ಚುನಾವಣೆಯಲ್ಲಿ ಅನುಕೂಲ: ಮುಖಂಡರ ವಿಶ್ವಾಸ

ತೆರಿಗೆ ವಿನಾಯಿತಿ: ಬಿಜೆಪಿಗೆ ವರದಾನವೇ?

ನವದೆಹಲಿ (ಪಿಟಿಐ): ಇದೇ 5ರಂದು ವಿಧಾನಸಭಾ ಚುನಾವಣೆ ನಡೆಯಲಿರುವ ದೆಹಲಿಗೆ ಸಂಬಂಧಿಸಿದಂತೆ ಬಜೆಟ್‌ನಲ್ಲಿ ನಿರ್ದಿಷ್ಟ ಘೋಷಣೆಗಳನ್ನು ಮಾಡುವುದಕ್ಕೆ ಚುನಾವಣಾ ಆಯೋಗ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ನಿರ್ಬಂಧ ವಿಧಿಸಿದ್ದರೂ, ವಾರ್ಷಿಕ ₹12 ಲಕ್ಷ ಆದಾಯದವರೆಗೆ ತೆರಿಗೆ ವಿನಾಯಿತಿ ಘೋಷಿಸಿರುವುದು ಚುನಾವಣೆಯಲ್ಲಿ ಬಿಜೆಪಿಗೆ ವರದಾನವಾಗಲಿದೆಯೇ ಎಂಬ ಚರ್ಚೆ ಆರಂಭವಾಗಿದೆ.

ಈ ನಿರ್ಧಾರದಿಂದ ಪಕ್ಷಕ್ಕೆ ಅನುಕೂಲ ಆಗಲಿದೆ ಎಂದು ಬಿಜೆಪಿಯ ಹಲವು ಮುಖಂಡರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ 40 ಲಕ್ಷದಷ್ಟು ಆದಾಯ ತೆರಿಗೆ ಪಾವತಿದಾರರಿದ್ದಾರೆ. ಇವರಲ್ಲಿ ಹೆಚ್ಚಿನವರು ಮಧ್ಯಮವರ್ಗದವರು. ಚುನಾವಣೆಯಲ್ಲಿ ಅವರ ಮತಗಳೂ ನಿರ್ಣಾಯಕವಾಗಿದೆ. ₹12 ಲಕ್ಷ ಆದಾಯದವರೆಗೆ ತೆರಿಗೆ ವಿನಾಯಿತಿ ನೀಡಿರುವುದರಿಂದ ಮಧ್ಯಮ ವರ್ಗದವರಿಗೆ ಅನುಕೂಲವಾಗಲಿದ್ದು, ಚುನಾವಣೆಯಲ್ಲಿ ಬಿಜೆಪಿಯು ಈ ವರ್ಗದ ಮತಗಳನ್ನು ಸೆಳೆಯಲು ಯತ್ನಿಸಲಿದೆ ಎಂದು ಹೇಳಲಾಗುತ್ತಿದೆ.

ಇದೊಂದು ಅತ್ಯಂತ ಪ್ರಮುಖ ಘೋಷಣೆಯಾಗಿದ್ದು, ಇದರಿಂದಾಗಿ ಬಿಜೆಪಿ ಮೇಲೆ ಮಧ್ಯಮ ವರ್ಗದವರ ವಿಶ್ವಾಸ ಇನ್ನಷ್ಟು ಹೆಚ್ಚಲಿದೆ ಎಂದು ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಹೇಳಿದ್ದಾರೆ.

‘ನಾವು ಮಧ್ಯಮ ವರ್ಗದವರಿಗಾಗಿ ಈಗಾಗಲೇ ಬಜೆಟ್‌ನಲ್ಲಿ ಹಲವು ಘೋಷಣೆಗಳನ್ನು ಮಾಡಿದ್ದೇವೆ. ಭವಿಷ್ಯದಲ್ಲೂ ಇದನ್ನು ಮುಂದುವರಿಸಲಿದ್ದೇವೆ. ತೆರಿಗೆ ವಿನಾಯಿತಿ ಘೋಷಣೆಯು ಮುಂಬರುವ ಚುನಾವಣೆಯಲ್ಲಿ ಗಣನೀಯ ಪರಿಣಾಮ ಬೀರಲಿದೆ. ದೆಹಲಿಯಲ್ಲಿ ತೆರಿಗೆ ಪಾವತಿಸುವವರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಈ ವಿನಾಯಿತಿಯು ಮಧ್ಯಮ ವರ್ಗದವರಿಗೆ ಬಜೆಟ್ ಉಡುಗೊರೆಯಾಗಿದೆ’ ಎಂದು ಸಚ್‌ದೇವ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಈ ನಿರ್ಧಾರದಿಂದ ದೊಡ್ಡ ಸಂಖ್ಯೆ ತೆರಿಗೆ ಪಾವತಿದಾರರು ನೇರವಾಗಿ ಪ್ರಯೋಜನ ಪಡೆಯಲಿದ್ದಾರೆ. ಇದರಿಂದ ಅವರ ಖರೀದಿ ಸಾಮರ್ಥ್ಯ ಹೆಚ್ಚಾಗಲಿದೆ. ಇದು ಮಾರುಕಟ್ಟೆ ಪ್ರಗತಿಗೂ ಕಾರಣವಾಗಲಿದೆ. ಮಧ್ಯಮ ವರ್ಗದವರ ಅವಶ್ಯಕತೆಯ ಬಗ್ಗೆ ಬಿಜೆಪಿ ಎಷ್ಟು ಕಾಳಜಿ ವಹಿಸುತ್ತದೆ ಎಂಬುದನ್ನು ಇದು ತೋರಿಸುತ್ತದೆ. ಚುನಾವಣೆಯಲ್ಲಿ ಇದು ದೊಡ್ಡ ಮಟ್ಟದಲ್ಲಿ ಪಕ್ಷಕ್ಕೆ ನೆರವಾಗಲಿದೆ’ ಎಂದು ಬಿಜೆಪಿ ಮತ್ತೊಬ್ಬ ಮುಖಂಡ ಮತ್ತು ರೋಹಿಣಿ ಕ್ಷೇತ್ರದ ಅಭ್ಯರ್ಥಿ ವಿಜೇಂದರ್ ಗುಪ್ತಾ ಹೇಳಿದ್ದಾರೆ.

ಜನವರಿ 22ರಂದು ಮಧ್ಯಮ ವರ್ಗದವರಿಗಾಗಿ ಏಳು ಅಂಶಗಳ ಪ್ರಣಾಳಿಕೆ ಬಿಡುಗಡೆ ಮಾಡಿದ್ದ ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್, ‘ಎಲ್ಲ ಸರ್ಕಾರಗಳು ಮಧ್ಯಮ ವರ್ಗವನ್ನು ಕಡೆಗಣಿಸಿವೆ. ಅವರು ತೆರಿಗೆ ಭಯೋತ್ಪಾದನೆಯ ಸಂತ್ರಸ್ತರಾಗಿದ್ದಾರೆ’ ಎಂದು ಹೇಳಿದ್ದರು.

‘ದೆಹಲಿಯ ಜನತೆ ವಾರ್ಷಿಕವಾಗಿ ₹1.78 ಲಕ್ಷ ಕೋಟಿ ಆದಾಯ ತೆರಿಗೆ ಪಾವತಿಸುತ್ತಾರೆ. ಆದರೆ, ಕೇಂದ್ರದ ತೆರಿಗೆ ಪಾಲಿನಲ್ಲಿ ಅವರು ಹೆಚ್ಚು ಪಡೆಯುತ್ತಿಲ್ಲ’ ಎಂದೂ ಕೇಜ್ರಿವಾಲ್ ಈ ಹಿಂದೆ ಹೇಳಿದ್ದರು.

ಪ್ರಜಾ ಮತ ಜನತಂತ್ರದ ಹಬ್ಬ

ಎಎಪಿ ತೊರೆದ 8 ಶಾಸಕರು ಬಿಜೆಪಿಗೆ ಸೇರ್ಪಡೆ

ದೆಹಲಿ ವಿಧಾನಸಭೆ ಚುನಾವಣೆಗೆ ಇನ್ನು ಕೇವಲ ನಾಲ್ಕು ದಿನಗಳು ಬಾಕಿ ಇರುವಾಗ, ಎಎಪಿ ತೊರೆದಿರುವ ಎಂಟು ಶಾಸಕರು ಶನಿವಾರ ಇಲ್ಲಿ ಬಿಜೆಪಿ ಸೇರಿದರು.

ವಂದನಾ ಗೌರ್ (ಪಾಲಂ), ರೋಹಿತ್ ಮೆಹ್ರಾಲಿಯಾ (ತ್ರಿಲೋಕಪುರಿ), ಗಿರೀಶ್ ಸೋನಿ (ಮದೀಪುರ), ಮದನ್ ಲಾಲ್ (ಕಸ್ತೂರಬಾ ನಗರ), ರಾಜೇಶ್ ರಿಷಿ (ಉತ್ತಮ ನಗರ), ಬಿ.ಎಸ್. ಜೂನ್ (ಬಿಜ್ವಾಸನ್), ನರೇಶ್ ಯಾದವ್ (ಮೆಹ್ರಾಲಿ) ಮತ್ತು ಪವನ್ ಶರ್ಮಾ (ಆದರ್ಶ ನಗರ) ಬಿಜೆಪಿ ಸೇರಿದ ಎಎಪಿ ಶಾಸಕರು.

ಎಎಪಿಗೆ ರಾಜೀನಾಮೆ ನೀಡಿದ ನಂತರ, ‘ಸದನದ ಸದಸ್ಯತ್ವವನ್ನು ತ್ಯಜಿಸಿ ವಿಧಾನಸಭೆ ಸ್ಪೀಕರ್‌ಗೆ ರಾಜೀನಾಮೆ ಪತ್ರಗಳನ್ನು ಕಳುಹಿಸಿದ್ದೇವೆ’ ಎಂದು ಈ ಶಾಸಕರು ಹೇಳಿದ್ದಾರೆ.

ಬಿಜೆಪಿ ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ದೆಹಲಿ ಉಸ್ತುವಾರಿ ಬೈಜಯಂತ್ ಪಾಂಡಾ ಮತ್ತು ಪಕ್ಷದ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರ ಸಮ್ಮುಖದಲ್ಲಿ ಶಾಸಕರ ಸೇರ್ಪಡೆ ನಡೆಯಿತು. ಇದೇ ವೇಳೆ, ಎಎಪಿ ಮಾಜಿ ಶಾಸಕ ವಿಜೇಂದರ್ ಗಾರ್ಗ್ ಮತ್ತು ಎಎಪಿಯ ಹಲವು ನಾಯಕರು ಬಿಜೆಪಿ ಸೇರಿದರು.

ಭ್ರಷ್ಟಾಚಾರ ಆರೋಪ ಮತ್ತು ಅರವಿಂದ ಕೇಜ್ರಿವಾಲ್ ನೇತೃತ್ವದಲ್ಲಿ ಪಕ್ಷವು ಅದರ ಮೂಲ ಸಿದ್ಧಾಂತಕ್ಕೆ ವಿಮುಖವಾಗಿರುವ ಕಾರಣಗಳನ್ನು ಉಲ್ಲೇಖಿಸಿ ಈ ಎಂಟು ಶಾಸಕರು ಶುಕ್ರವಾರ ಎಎಪಿಯ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದರು. ಈ ಎಲ್ಲ ಶಾಸಕರಿಗೆ ಈ ಬಾರಿಯ ಚುನಾವಣೆಗೆ ಸ್ಪರ್ಧಿಸಲು ಪಕ್ಷವು ಟಿಕೆಟ್ ನಿರಾಕರಿಸಿತ್ತು.

ಶಾಸಕರು ಮತ್ತು ಮುಖಂಡರನ್ನು ಬಿಜೆಪಿಗೆ ಸ್ವಾಗತಿಸಿದ ಪಾಂಡಾ, ಇದು ‘ಐತಿಹಾಸಿಕ ದಿನ. ಆಪ್ದಾ(ವಿಪತ್ತು)ದಿಂದ ಮುಕ್ತಗೊಂಡಿದ್ದಾರೆ. ಚುನಾವಣೆಯ ನಂತರ ದೆಹಲಿ ಕೂಡ ವಿಪತ್ತು ಮುಕ್ತವಾಗಲಿದೆ’ ಎಂದು ಹೇಳಿದ್ದಾರೆ.

ದೆಹಲಿಯಲ್ಲಿ ಎಎಪಿ ವಿರೋಧಿ ಅಲೆ: ಶಾ



ಎಎಪಿಯು ಭ್ರಷ್ಟಾಚಾರದಲ್ಲಿ ಮುಳುಗಿದೆ ಮತ್ತು ಅಕ್ರಮ ವಲಸಿಗರಿಗೆ ಆಶ್ರಯ ನೀಡುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಆರೋಪಿಸಿದರು.

ದೆಹಲಿಯಲ್ಲಿ ಹಗರಣ, ವಂಚನೆ ಮತ್ತು ಅಕ್ರಮ ವಲಸಿಗರಿಗೆ ಆಶ್ರಯ ನೀಡುತ್ತಿರುವ ಎಎಪಿ ನೇತೃತ್ವದ ಸರ್ಕಾರದ ವಿರುದ್ಧದ ಅಲೆ ಎದ್ದಿದೆ ಎಂದು ಹೇಳಿದರು.

ಮುಸ್ತಫಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, ಪಕ್ಷದ ವಿರುದ್ಧದ ಅಲೆ ಬಗ್ಗೆ ಪಕ್ಷದ ನಾಯಕರಿಗೆ ಅರಿವಿದೆ ಎಂದರು.

ಹಗರಣ, ವಿಪತ್ತು, ಮಾಫಿಯಾವನ್ನು ಬುಡಸಮೇತ ಕಿತ್ತು ಹಾಕುವ ಸಮಯ ಬಂದಿದೆ. ದೆಹಲಿ ಅಭಿವೃದ್ಧಿಗಾಗಿ ಬಿಜೆಪಿಗೆ ಮತ ಚಲಾಯಿಸಿ ಎಂದು ಅವರು ಮನವಿ ಮಾಡಿದರು.

ರಾಜ್ಯದ ರೈಲ್ವೆ ಯೋಜನೆಗೆ ₹7,564 ಕೋಟಿ

ಒಂದನೇ ಪುಟದಿಂದ...

ಗದಗ-ವಾಡಿ, ತುಮಕೂರು-ಚಿತ್ರದುರ್ಗ- ದಾವಣಗೆರೆ ಸೇರಿದಂತೆ ಹಲವು ಪ್ರಮುಖ ರೈಲ್ವೆ ಯೋಜನೆಗಳಿಗೆ ಹಣ ಮೀಸಲಿಡಲಾಗಿದೆ ಎಂದರು.

ಗದಗ- ವಾಡಿ ಮಾರ್ಗದ ಯೋಜನೆಗೆ ₹549.45 ಕೋಟಿ, ತುಮಕೂರು- ಚಿತ್ರದುರ್ಗ- ದಾವಣಗೆರೆ ಮಾರ್ಗಕ್ಕೆ ₹549.45 ಕೋಟಿ, ಬಾಗಲಕೋಟೆ-ಕುಡಚಿ ಮಾರ್ಗಕ್ಕೆ ₹428 ಕೋಟಿ, ಹೊಸಪೇಟೆ- ಹುಬ್ಬಳ್ಳಿ-ಲೋಂಡಾ -ತಿನೈಘಾಟ್-ವಾಸ್ಕೋ ಡಿ ಗಾಮಾ ಮಾರ್ಗಕ್ಕೆ ₹413 ಕೋಟಿ, ಹೊಟಗಿ-ಗದಗ ಮಾರ್ಗದ ಯೋಜನೆಗೆ ₹401 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಬೈಯಪ್ಪನಹಳ್ಳಿಯಿಂದ ಹೊಸೂರು ಮಾರ್ಗಕ್ಕೆ ₹223.5 ಕೋಟಿ, ಮುನಿರಾಬಾದ್- ಮಹಬೂಬ್ ನಗರ ಮಾರ್ಗದ ಯೋಜನೆಗೆ ₹214 ಕೋಟಿ, ಯಶವಂತಪುರ– ಚನ್ನಸಂದ್ರ ಮಾರ್ಗಕ್ಕೆ ₹178 ಕೋಟಿ, ತೋರಣಗಲ್ಲು- ರಂಜಿತ್ ಪುರ ಮಾರ್ಗಕ್ಕೆ ₹104.47 ಕೋಟಿ, ದೌಂಡ್-ಕಲಬುರಗಿ ಜೋಡಿ ಹಳಿ ಮತ್ತು ಪುಣೆ- ಗುಂತಕಲ್ ವಿದ್ಯುದೀಕರಣಕ್ಕೆ ₹84.39 ಕೋಟಿ ಮೀಸಲಿಡಲಾಗಿದೆ. ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಸಲವೂ ₹350 ಕೋಟಿ ನೀಡಲಾಗಿದೆ ಎಂದರು.

‘ರಾಜ್ಯಕ್ಕೆ ಕೊಡುವುದೆಲ್ಲ ಕೊಟ್ಟಾಗಿದೆ’

‘ಕೇಂದ್ರ ಬಜೆಟ್ ಯಾವುದೇ ಒಂದು ರಾಜ್ಯಕ್ಕೆ ಸೀಮಿತವಾಗಿ ಇರುವುದಿಲ್ಲ. ಒಟ್ಟಾರೆ ಎಲ್ಲ ರಾಜ್ಯಗಳನ್ನೂ ಒಳಗೊಂಡಿರುತ್ತದೆ. ಕರ್ನಾಟಕಕ್ಕೆ ಏನೇನು ಕೊಡಬೇಕೋ ಅದೆಲ್ಲವನ್ನೂ ಕೊಡಲಾಗಿದೆ’ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ಪ್ರತಿಕ್ರಿಯಿಸಿದರು.

ಹೊಸ ಐಐಟಿ, ಜಿಲ್ಲಾಸ್ಪತ್ರೆಗಳಲ್ಲಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ, ಕಿಸಾನ್ ಕ್ರೆಡಿಟ್ ಸಾಲ ಹೆಚ್ಚಳ, ಸ್ಟಾರ್ಟ್ ಅಪ್, ಧನ ಧಾನ್ಯ ಯೋಜನೆ, ₹12 ಲಕ್ಷದ ವರೆಗೆ ತೆರಿಗೆ ವಿನಾಯಿತಿ, ನವಜಾತ ಶಿಶು ಮತ್ತು ತಾಯಂದಿರಿಗೆ ಪೌಷ್ಟಿಕ ಆಹಾರ, ಮೆಡಿಕಲ್ ಸೀಟು ಹೆಚ್ಚಳ ಇವೆಲ್ಲಾ ಕೊಡುಗೆಗಳು ಕರ್ನಾಟಕಕ್ಕೂ ಅನ್ವಯಿಸುತ್ತವೆಯಲ್ಲ ಎಂದು ಪ್ರತ್ಯುತ್ತರ ನೀಡಿದರು.

ಹಕ್ಕಿ ಜ್ವರ: 17 ಸಾವಿರ ಕೋಳಿಗಳ ಹತ್ಯೆ

ರಾಯಗಢ (ಪಿಟಿಐ): ಛತ್ತೀಸಗಢದ ರಾಯಗಢದಲ್ಲಿ ಸರ್ಕಾರಿ ಪೌಲ್ಟ್ರಿ ಫಾರ್ಮ್‌ವೊಂದರಲ್ಲಿ ಹಕ್ಕಿ ಜ್ವರ ಪ್ರಕರಣ ಪತ್ತೆ ಆಗಿದ್ದರಿಂದ 17,000 ಕೋಳಿ ಹಾಗೂ ಗೌಜುಗಗಳನ್ನು ಹತ್ಯೆ ಮಾಡಲಾಗಿದೆ.

ಒಟ್ಟು 5,000 ಕೋಳಿ ಹಾಗೂ 12,000 ಗೌಜುಗಗಳನ್ನು ಹತ್ಯೆ ಮಾಡಿದ್ದು, 17 ಸಾವಿರ ಮೊಟ್ಟೆಗಳನ್ನು ನಾಶಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮಧ್ಯಮವರ್ಗಕ್ಕೆ ಹಾರ, ಅಭಿವೃದ್ಧಿಗೆ ನೆರವಿನ ಬರ

ಒಂದನೇ ಪುಟದಿಂದ...

ಬೆಳೆ ಸಂಬಂಧಿ ಅನುದಾನದಲ್ಲಿ ₹8,129 ಕೋಟಿ, ಗ್ರಾಮೀಣ ರಸ್ತೆ ಮತ್ತು ಸೇತುವೆಗೆ 16,057 ಕೋಟಿ, ಬೆಳೆವಿಮೆಗೆ ₹3,622 ಕೋಟಿ ಅನುದಾನವನ್ನು ಕಳೆದ ಬಜೆಟ್‌ಗೆ ಹೋಲಿಸಿದರೆ ಕಡಿತ ಮಾಡಲಾಗಿದೆ. ಇದು, ಬಜೆಟ್‌ನ ಗಮನವು ಮಧ್ಯಮ ವರ್ಗವನ್ನು ಬಿಟ್ಟು ಬೇರೆಡೆಗೆ ಹರಿದಿಲ್ಲ ಎಂಬುದುರ ಸುಳಿವನ್ನು ನೀಡುತ್ತದೆ.

ವಿರೋಧ ಪಕ್ಷಗಳ ಭಾರಿ ಗದ್ದಲದ ನಡುವೆಯೇ ತಮ್ಮ 75 ನಿಮಿಷಗಳ ಬಜೆಟ್ ಭಾಷಣದಲ್ಲಿ ಸಚಿವರು ದೆಹಲಿ ಹಾಗೂ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ‘ಮತ ಶಿಕಾರಿ’ಗೆ ಪೂರಕವಾದ ಜನಪ್ರಿಯ ಘೋಷಣೆಗಳನ್ನೂ ಮಾಡಿದರು. ಆದರೆ, ಕರ್ನಾಟಕದ ಬಹುಕಾಲದ ಬೇಡಿಕೆಗಳಿಗೆ ನಿರ್ಮಲಾ ಕಿಮ್ಮತ್ತು ನೀಡಿಲ್ಲ.

‘ತೆರಿಗೆ ವಿನಾಯಿತಿಯ ನಿರ್ಧಾರದಿಂದ ಹೊಸ ತೆರಿಗೆ ಪದ್ಧತಿಯಲ್ಲಿ ₹12 ಲಕ್ಷ ಆದಾಯ ಹೊಂದಿರುವ ತೆರಿಗೆ ಪಾವತಿದಾರರಿಗೆ ₹80,000 ಉಳಿತಾಯ ಆಗಲಿದೆ’ ಎಂದು ಸಚಿವರು ಪ್ರತಿಪಾದಿಸಿದರು. ಆದರೆ, ಸರ್ಕಾರದ ‘ಭರ್ಜರಿ’ ಘೋಷಣೆಯಿಂದ ₹12.75 ಲಕ್ಷಕ್ಕಿಂತ ಹೆಚ್ಚಿನ ಆದಾಯ ಹೊಂದಿರುವವರಿಗೆ ಭಾರಿ ಅನುಕೂಲವೇನೂ ಆಗುವುದಿಲ್ಲ. ಶನಿವಾರ ಬೆಳಿಗ್ಗೆ 12 ರವರೆಗೆ ಚೇತೋಹಾರಿಯಾಗಿದ್ದ ಷೇರು ಮಾರುಕಟ್ಟೆಯ ಸೂಚ್ಯಂಕಗಳು ಸಚಿವರು ತೆರಿಗೆ ವಿನಾಯಿತಿ ಘೋಷಿಸಿದ ಬಳಿಕ ಜಾರು ಹಾದಿಯಲ್ಲಿ ಸಾಗಿದವು.

ದೇಶದ ಆರ್ಥಿಕ ಸ್ಥಿತಿ ಆಶಾದಾಯಕವಾಗಿಲ್ಲ. ಉದ್ಯೋಗಾವಕಾಶಗಳು ಕಡಿಮೆಯಾಗುತ್ತಿವೆ. ಅತ್ಯಾಕರ್ಷಕ ಹೆಸರಿನ ಯೋಜನೆಗಳ ಮಹಾಪೂರದ ನಡುವೆಯೂ ಅಭಿವೃದ್ಧಿ ಚಟುವಟಿಕೆಗಳು ವೇಗ ಪಡೆದುಕೊಳ್ಳುತ್ತಿಲ್ಲ. ಈ ಸಲವೂ ಬಜೆಟ್‌ನಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಭಾರಿ ಉತ್ತೇಜನ ನೀಡಿಲ್ಲ. ಹಲವು ಪ್ರಮುಖ ಇಲಾಖೆಗಳ ಅನುದಾನ ಪ್ರಮಾಣವನ್ನು ಸದ್ದಿಲ್ಲದೆ ಕಡಿತಗೊಳಿಸಲಾಗಿದೆ. ದೇಶದ ಸಾಲ ಪ್ರಮಾಣವು ಏರುಮುಖದಲ್ಲಿ ಸಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಮದ್ದು ಹುಡುಕುವಂತಹ ನೀಲನಕ್ಷೆಗಳು ಬಜೆಟ್‌ನಲ್ಲಿ ಕಂಡುಬರಲಿಲ್ಲ.

ಸರಳವಾದ ಹೊಸ ಆದಾಯ ತೆರಿಗೆ ಮಸೂದೆಯನ್ನು ಮುಂದಿನ ವಾರ ಪರಿಚಯಿಸುವುದಾಗಿ ಸಚಿವರು ಈ ವೇಳೆ ಪ್ರಕಟಿಸಿದರು. ಹಿರಿಯ ನಾಗರಿಕರ ತೆರಿಗೆ ಕಡಿತ ಮಿತಿ ₹50,000ರಿಂದ ₹1 ಲಕ್ಷಕ್ಕೆ ಏರಿಸುವುದಾಗಿ ಹೇಳಿದರು. ಬಾಡಿಗೆ ಮೇಲಿನ ಟಿಡಿಎಸ್‌ನ ವಾರ್ಷಿಕ ₹2.40 ಲಕ್ಷದ ಮಿತಿಯನ್ನು ₹6 ಲಕ್ಷಕ್ಕೆ ಏರಿಸುವುದಾಗಿ ಘೋಷಿಸಿದರು. ಭೌಗೋಳಿಕ ರಾಜಕೀಯ ಅಡೆತಡೆಗಳಿಂದ ಉಂಟಾದ ಆರ್ಥಿಕ ಅನಿಶ್ಚಿತತೆಗಳ ನಡುವೆಯೂ ದೇಶದ ಬೆಳವಣಿಗೆ ಗತಿಯನ್ನು ಉತ್ತೇಜಿಸಲು ನಿರ್ಮಲಾ ಅವರು ದುಡಿಯುವ ವರ್ಗವನ್ನು ಓಲೈಸುವ ಎಚ್ಚರಿಕೆಯ ನಡೆ ಇಟ್ಟಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆಯ ಮತದಾನ ಬಾಗಿಲಿಗೆ ಬಂದು ನಿಂತಿರುವ ಹೊತ್ತಿನಲ್ಲಿ ದೊಡ್ಡ ಸಮುದಾಯವನ್ನು ಸಂತೃಪ್ತಗೊಳಿಸುವ ಸಚಿವರ ‘ಮಧ್ಯಮ ಮಾರ್ಗ’ವು ಕಮಲ ಪಾಳಯಕ್ಕೆ ಇನ್ನಷ್ಟು ಚೈತನ್ಯ ನೀಡಲಿದೆ ಎಂದು ಅಂದಾಜಿಸಲಾಗಿದೆ.

2025-26ರ ಹಣಕಾಸು ವರ್ಷದಲ್ಲಿ ಮೊದಲ ಬಾರಿಗೆ ಕೇಂದ್ರ ಸರ್ಕಾರದ ಒಟ್ಟು ಖರ್ಚು ₹50 ಲಕ್ಷ ಕೋಟಿ ದಾಟಲಿದೆ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ₹11.21 ಲಕ್ಷ ಕೋಟಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ದೀರ್ಘಾವಧಿಯ ಆಸ್ತಿ ಸೃಷ್ಟಿಗೆ ವೆಚ್ಚವಾಗಲಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರದ ಬಂಡವಾಳ ವೆಚ್ಚವು ಸುಮಾರು ₹1 ಲಕ್ಷ ಕೋಟಿ ಕಡಿಮೆಯಾಗುವ ಸಾಧ್ಯತೆಯಿದೆ. ವಿತ್ತೀಯ ಕೊರತೆಯನ್ನು 2026ಕ್ಕೆ ಜಿಡಿಪಿಯ ಶೇ 4.4ಕ್ಕೆ ನಿಗದಿಪಡಿಸಲಾಗಿದೆ ಎಂದು ಸಚಿವರು ತಿಳಿಸಿದರು. ವಿತ್ತೀಯ ಕೊರತೆ ಕಡಿಮೆಗೊಳಿಸಿ ಬಂಡವಾಳ ವೆಚ್ಚವನ್ನು ಹೆಚ್ಚಿಸಿದರೆ ಆರ್ಥಿಕತೆ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗಲಿದೆ. ಆದರೆ, ಈ ಸಲ ಅಂತಹ ಪ್ರಯತ್ನವೇನೂ ಕಂಡಿಲ್ಲ. ಕಲ್ಯಾಣ ಯೋಜನೆಗಳ ಘೋಷಣೆಗಳ ಬಳಿಕವೂ ವಿತ್ತೀಯ ಕೊರತೆಯನ್ನು ಹದ್ದು ಮೀರಲು ಬಿಟ್ಟಿಲ್ಲ ಎಂಬುದು ಕಾರ್ಪೊರೇಟ್ ವಲಯದ ಸಮಾಧಾನ. ಜನಪ್ರಿಯ ಘೋಷಣೆಗಳಿಗೆ ಒತ್ತು ನೀಡಿರುವ ಈ ಬಜೆಟ್ ಅರ್ಥನೀತಿಯ ಒಳಿತು ಕೆಡುಕುಗಳ ಕುರಿತು ಹೆಚ್ಚು ತಲೆಕೆಡಿಸಿಕೊಂಡಿಲ್ಲ.

ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ಕೆಲವು ವರ್ಷಗಳಲ್ಲಿ ಸತತವಾಗಿ ಅನುದಾನ ಕಡಿತ ಮಾಡಲಾಗಿತ್ತು. ಕಳೆದ ವರ್ಷ ಪರಿಷ್ಕೃತ ಅಂದಾಜಿನ ಪ್ರಕಾರ ಈ ಯೋಜನೆಗೆ ₹86 ಸಾವಿರ ಕೋಟಿ ತೆಗೆದಿರಿಸಲಾಗಿತ್ತು. ಈ ಸಲವೂ ಅಷ್ಟೇ ಮೊತ್ತ ಮೀಸಲಿಡಲಾಗಿದೆ. ಗ್ರಾಮೀಣ ಭಾರತದ ಸ್ತಂಭಗಳಾದ ಬಡವರು ಹಾಗೂ ರೈತರ ಕಲ್ಯಾಣವನ್ನು ನಿರ್ಲಕ್ಷಿಸಿ ಗ್ರಾಮೀಣ ಭಾರತದ ಬೆನ್ನೆಲುಬು ಮುರಿಯುವ ಕೆಲಸ ಮಾಡಿದೆ ಎಂದು ವಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದವು.

ನರೇಂದ್ರ ಮೋದಿ ಸರ್ಕಾರದ ಕನಸಿನ ಯೋಜನೆ ಜಲಜೀವನ್ ಮಿಷನ್ ಅನ್ನು 2028ರೊಳಗೆ ಪೂರ್ಣಗೊಳಿಸಲಾಗುವುದು ಎಂದೂ ನಿರ್ಮಲಾ ಸೀತಾರಾಮನ್ ತಿಳಿಸಿದರು. ಜಲಜೀವನ್ ಮಿಷನ್‌ನ ಯೋಜನಾ ವೆಚ್ಚ ಗಣನೀಯವಾಗಿ ಹೆಚ್ಚಳ ಆಗಿದೆ. ಈ ಸಲ ಬಜೆಟ್‌ನಲ್ಲಿ ಕುಡಿಯುವ ನೀರು ಹಾಗೂ ನೈರ್ಮಲ್ಯ ಸಚಿವಾಲಯಕ್ಕೆ ₹74,226 ಕೋಟಿ ನೀಡಲಾಗಿದೆ. ಇದರಲ್ಲಿ ಸಿಂಹಪಾಲು ಜಲಜೀವನ್ ಮಿಷನ್‌ಗೇ ಹೋಗಲಿದೆ.

ಬಿಹಾರಕ್ಕೆ ಉಡುಗೊರೆಗಳ ಸುರಿಮಳೆ

ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿರುವ ಬಿಹಾರದ ಮತದಾರರಿಗೆ ರಂಗು ರಂಗಿನ ಉಡುಗೊರೆಗಳ ಪೊಟ್ಟಣವನ್ನು ನರೇಂದ್ರ ಮೋದಿ ಸರ್ಕಾರ ಕೈಗಿಟ್ಟಿದೆ. ಈ ಮೂಲಕ, ಎನ್‌ಡಿಎ ಮೈತ್ರಿಕೂಟದ ಪ್ರಮುಖ ಪಾಲುದಾರ ಪಕ್ಷಗಳನ್ನು ಮತ್ತಷ್ಟು ಸಂತೃಪ್ತಗೊಳಿಸುವ ಪ್ರಯತ್ನ ನಡೆಸಿದೆ.

ರಾಜ್ಯಕ್ಕೆ ಹಲವಾರು ಯೋಜನೆಗಳನ್ನು ನಿರ್ಮಲಾ ಸೀತಾರಾಮನ್ ಪ್ರಕಟಿಸಿದರು. ಇದರಲ್ಲಿ ರೈತರಿಗೆ ತರಬೇತಿ ನೀಡಲು ಮಖಾನ ಮಂಡಳಿ ಸ್ಥಾಪನೆ, ರಾಷ್ಟ್ರೀಯ ಆಹಾರ ತಂತ್ರಜ್ಞಾನ ಸಂಸ್ಥೆ, ವಿಮಾನ ನಿಲ್ದಾಣ ಮತ್ತು ರಾಜ್ಯದ ಮಿಥಿಲಾಂಚಲ್ ಪ್ರದೇಶದಲ್ಲಿ ಪಶ್ಚಿಮ ಕೋಶಿ ಕಾಲುವೆ ಯೋಜನೆಗೆ ಆರ್ಥಿಕ ನೆರವು, ಪಟನಾ ಐಐಟಿ ಹಾಗೂ ವಿಮಾನ ನಿಲ್ದಾಣಗಳ ವಿಸ್ತರಣೆ ಸೇರಿವೆ. ಬಿಜೆಪಿಯು ವಿಧಾನಸಭಾ ಚುನಾವಣೆಗೆ ಮುಂಚಿತವಾಗಿ ರೈತರು, ಕೃಷಿ ಉದ್ಯಮಿಗಳು, ಯುವಕರು ಮತ್ತು ಮಧ್ಯಮ ವರ್ಗವನ್ನು ಓಲೈಸುವ ಕಸರತ್ತು ಮಾಡಿದೆ.

ಈ ಘೋಷಣೆಗಳನ್ನು ಬಿಜೆಪಿಯ ಬಿಹಾರ ಮಿತ್ರಪಕ್ಷಗಳಾದ ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಝಾ ಮತ್ತು ಕೇಂದ್ರ ಸಚಿವ ನಾಯಕ ಚಿರಾಗ್ ಪಾಸ್ವಾನ್ ಶ್ಲಾಘಿಸಿದರು.

ಆದರೆ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಚುನಾವಣಾ ವರ್ಷದಲ್ಲಿ ಬಿಹಾರ ಸಾಕಷ್ಟು ಕೊಡುಗೆಗಳನ್ನು ಪಡೆದಿದೆ. ಆದರೆ, ಎನ್‌ಡಿಎಯ ಮತ್ತೊಂದು ಆಧಾರಸ್ತಂಭವಾದ ಆಂಧ್ರಪ್ರದೇಶವನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ’ ಎಂದು ವ್ಯಂಗ್ಯವಾಡಿದರು. ‘ರಾಜ್ಯದ ಬೇಡಿಕೆಗಳನ್ನು ಕೇಂದ್ರ ಸರ್ಕಾರವು ಬಜೆಟ್‌ಗೆ ಮುನ್ನವೇ ಈಡೇರಿಸಿದೆ. ಇದನ್ನು ವಿವಾದ ಮಾಡುವ ಅಗತ್ಯ ಇಲ್ಲ’ ಎಂದು ಟಿಡಿಪಿ ಹಾಗೂ ಬಿಜೆಪಿ ನಾಯಕರು ಸಮಜಾಯಿಷಿ ನೀಡಿದರು.

ಟಿಡಿಪಿ ಹಾಗೂ ಜೆಡಿಯು ಸಹಕಾರದಿಂದ ಮೂರನೇ ಬಾರಿಗೆ ಅಧಿಕಾರಕ್ಕೆ ಹಿಡಿದ ಬಿಜೆಪಿಯು 2024ರ ಜುಲೈ ಬಜೆಟ್‌ನಲ್ಲಿ ಆಂಧ್ರ ಪ್ರದೇಶ ಹಾಗೂ ಬಿಹಾರಕ್ಕೆ ಭರಪೂರ ಯೋಜನೆಗಳನ್ನು ಪ್ರಕಟಿಸಿತ್ತು. ‘ಪೂರ್ವೋದಯ’ಕ್ಕೆ ಮೋದಿ ಸರ್ಕಾರದ ಬದ್ಧತೆಯನ್ನು ಒತ್ತಿ ಹೇಳುತ್ತಾ ನಿರ್ಮಲಾ ಅವರು, ‘ಪೂರ್ವ ಪ್ರದೇಶದಲ್ಲಿ ಆಹಾರ ಸಂಸ್ಕರಣಾ ಚಟುವಟಿಕೆಗಳಿಗೆ ಪೂರಕ ವಾತಾವರಣ ನಿರ್ಮಿಸಲು ರಾಜ್ಯದಲ್ಲಿ ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ನಿರ್ವಹಣಾ ಸಂಸ್ಥೆ ಸ್ಥಾಪಿಸುವುದಾಗಿ ಘೋಷಿಸಿದರು.

ಕೇಂದ್ರ ಬಜೆಟ್ 2025-26



ನವೋದ್ಯಮ ಉತ್ತೇಜನಕ್ಕೆ ₹10,000 ಕೋಟಿ

ನವದೆಹಲಿ (ಪಿಟಿಐ): ದೇಶದ ನವೋದ್ಯಮಗಳನ್ನು ಉತ್ತೇಜಿಸಲು ₹10,000 ಕೋಟಿ ಮೊತ್ತದ ನೂತನ ನಿಧಿ ಯೋಜನೆ (ಎಫ್‌ಎಫ್‌ಎಸ್) ಯನ್ನು ಹಣಕಾಸು ಸಚಿವರು ಪ್ರಕಟಿಸಿದರು.

ನವೋದ್ಯಮಗಳಿಗೆ ಒತ್ತುನೀಡಲೆಂದೇ ಪರ್ಯಾಯ ಬಂಡವಾಳ ಹೂಡಿಕೆ ನಿಧಿಗಳು (ಎಐಎಫ್ಸ್) ಇವೆ. ಇವುಗಳಲ್ಲಿ ಹಣ ತೊಡಗಿಸಲು ಹಲವರು ಮುಂದಾಗಿದ್ದು, ₹ 91,000 ಕೋಟಿಗೂ ಹೆಚ್ಚು ಹೂಡಿಕೆಯ ಭರವಸೆ ದೊರೆತಿದೆ ಎಂದೂ ಅವರು ಹೇಳಿದರು.

2024ರ ಅಕ್ಟೋಬರ್ 31ರವರೆಗೆ ಎಐಎಫ್ಸ್ ಒಳಗೊಂಡಂತೆ ಎಫ್‌ಎಫ್‌ಎಸ್‌ಗೆ ₹20,572.14 ಕೋಟಿ ಬಂಡವಾಳ ಹರಿದುಬಂದಿದೆ ಎಂದು ಮಾಹಿತಿ ನೀಡಿದರು.

2016ರಲ್ಲಿಯೂ ಕೇಂದ್ರ ಸರ್ಕಾರವು ನವೋದ್ಯಮಗಳ ಉತ್ತೇಜನಕ್ಕೆಂದು ಇದೇ ರೀತಿ ₹10,000 ಕೋಟಿ ಮೊತ್ತದ ಯೋಜನೆಯನ್ನು ಪ್ರಕಟಿಸಿತ್ತು.

ಇ.ವಿ ಪ್ರಗತಿಗಾಗಿ ತೆರಿಗೆ ವಿನಾಯಿತಿ

ಎಲೆಕ್ಟ್ರಿಕ್ ವಾಹನಗಳು ಹೆಚ್ಚು ಜನಮುಖಿಯಾಗುವಂತೆ ಮಾಡುವ ಉದ್ದೇಶದಿಂದ, ಇ.ವಿ ಬ್ಯಾಟರಿ ತಯಾರಿಸಲು ಅಗತ್ಯವಿರುವ ಮೂಲ ಪರಿಕರಗಳನ್ನು ಒದಗಿಸುತ್ತಿರುವ ಇನ್ನೂ 35 ಕಂಪನಿಗಳಿಗೆ ಹೆಚ್ಚುವರಿಯಾಗಿ ತೆರಿಗೆ ವಿನಾಯಿತಿಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ದೇಶೀಯವಾಗಿ ಲಿಥಿಯಮ್–ಅಯಾನ್ ಬ್ಯಾಟರಿ ಉತ್ಪಾದಿಸುವ ಪ್ರಮಾಣವನ್ನು ಇದು ಹೆಚ್ಚಿಸಲಿದೆ. ಆ ಮೂಲಕ ಸ್ಥಳೀಯವಾಗಿ ಬ್ಯಾಟರಿಚಾಲಿತ ವಾಹನಗಳ ತಯಾರಿಕೆ ವ್ಯಾಪಕವಾಗಲಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಸಣ್ಣ, ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳಲ್ಲಿ ದೇಶೀಯ ತಂತ್ರಜ್ಞಾನ ಅಭಿವೃದ್ಧಿಗೆ ಒತ್ತುನೀಡಲು 'ನ್ಯಾಷನಲ್ ಮ್ಯಾನುಫ್ಯಾಕ್ಚರಿಂಗ್ ಮಿಷನ್' ಪ್ರಾರಂಭಿಸುವುದಾಗಿಯೂ ತಿಳಿಸಿದರು. ಇ.ವಿ ಬ್ಯಾಟರಿಗಳನ್ನು ತಯಾರಿಸುವ ಉದ್ದಿಮೆಗಳೂ ಇದರ ವ್ಯಾಪ್ತಿಯಲ್ಲಿ ಇನ್ನಷ್ಟು ಪ್ರಗತಿ ಸಾಧಿಸಲಿವೆ ಎಂದರು.

ಕೃಷಿ, ಗ್ರಾಮೀಣಾಭಿವೃದ್ಧಿ: ಯೋಜನಾ ಅನುದಾನ ಕಡಿತ

ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯದ ವಿವಿಧ ಯೋಜನೆಗಳಿಗೆ 2024–25ನೇ ಸಾಲಿನಲ್ಲಿ ನೀಡಿದ್ದಕ್ಕಿಂತ ಕಡಿಮೆ ಮೊತ್ತದ ಅನುದಾನವನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಪರಿಣಾಮವಾಗಿ ಕೃಷಿಗೆ ನೀಡಿದ ಅನುದಾನ ಶೇ 3ರಷ್ಟು ಕಡಿಮೆಯಾಗಿದೆ. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಯ ವಿವಿಧ ಯೋಜನೆಗಳ ಅಡಿಯಲ್ಲಿ ಘೋಷಿಸಿದ ಅನುದಾನವು ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿದೆ



ರಸಗೊಬ್ಬರ ಸಹಾಯಧನ ಇಳಿಕೆ



ನರೇಗಾ: ಅನುದಾನ ಏರಿಕೆ ಇಲ್ಲ

ಗ್ರಾಮೀಣ ಭಾಗದ ಜನರ ಆರ್ಥಿಕ ಮಟ್ಟವನ್ನು ಸುಧಾರಿಸುವ ಅತ್ಯಂತ ಮಹತ್ವಾಕಾಂಕ್ಷಿ ಯೋಜನೆ ನರೇಗಾ. ಕೋವಿಡ್‌ನಂಥ ಸಂಕಟದ ಕಾಲದಲ್ಲಿ ಗ್ರಾಮೀಣರ ಬದುಕನ್ನು ತುಸುವಾದರೂ ಸಹಿಷ್ಣುವಾಗಿಸಿದ್ದ ಈ ಯೋಜನೆಗೆ ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರವು ಹೆಚ್ಚಿನ ಅನುದಾನವನ್ನು ನೀಡುತ್ತಿಲ್ಲ. 2023–24ನೇ ಆರ್ಥಿಕ ವರ್ಷಕ್ಕಿಂತ ಕಡಿಮೆ ಅನುದಾನವನ್ನು 2024–25 ಆರ್ಥಿಕ ವರ್ಷದಲ್ಲಿ ಮೀಸಲಿಡಲಾಗಿತ್ತು. 2025–26ನೇ ಆರ್ಥಿಕ ವರ್ಷದಲ್ಲಿ ಈ ಮೊತ್ತದಲ್ಲಿ ಯಾವುದೇ ಬದಲಾವಣೆಯಾಗಿಲ್ಲ



ಧಾನ್ಯಗಳಲ್ಲಿ ಆತ್ಮನಿರ್ಭರತೆ, ಸಾಲಮಿತಿ ಹೆಚ್ಚಳ, ಹತ್ತಿ ಉತ್ಪಾದನೆ ಏರಿಕೆಗೆ ಆದ್ಯತೆ

ಕೃಷಿ: ಹಲವು ಯೋಜನೆಗಳ ಬಿತ್ತನೆ

ಪ್ರಜಾವಾಣಿ ವಾರ್ತೆ

ಕೃಷಿಯನ್ನು ಅಭಿವೃದ್ಧಿಯ ಮೊದಲ ಎಂಜಿನ್ ಎಂದು ಬಣ್ಣಿಸಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಕೃಷಿ ಕ್ಷೇತ್ರಕ್ಕೆ ಹಲವು ಹೊಸ ಯೋಜನೆಗಳನ್ನು ಘೋಷಿಸಿದ್ದಾರೆ.

ಪ್ರಧಾನ ಮಂತ್ರಿ ಧನ-ಧಾನ್ಯ ಕೃಷಿ ಯೋಜನೆ: ಕಡಿಮೆ ಉತ್ಪಾದಕತೆ, ಕಡಿಮೆ ಬೆಳೆ ವೈವಿಧ್ಯ ಮತ್ತು ಕಡಿಮೆ ಸಾಲದ ಮಾನದಂಡಗಳಿರುವ ದೇಶದ 100 ಜಿಲ್ಲೆಗಳಲ್ಲಿ ಆಯಾ ರಾಜ್ಯಗಳ ಪಾಲುದಾರಿಕೆಯೊಂದಿಗೆ ಯೋಜನೆ ಜಾರಿಗೊಳಿಸಲಾಗುವುದು. ಉತ್ಪಾದಕತೆ, ಬೆಳೆ ವೈವಿಧ್ಯ ಹೆಚ್ಚಿಸುವುದು, ಪಂಚಾಯಿತಿ/ಬ್ಲಾಕ್ ಮಟ್ಟದಲ್ಲಿ ದಾಸ್ತಾನು ಕೇಂದ್ರಗಳ ಸ್ಥಾಪನೆ, ನೀರಾವರಿ ಸೌಲಭ್ಯ ಮತ್ತು ಸಾಲ ಸೌಲಭ್ಯ ಹೆಚ್ಚಿಸುವ ಮೂಲಕ 1.7 ಕೋಟಿ ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶ ಹೊಂದಲಾಗಿದೆ.

ಧಾನ್ಯಗಳಲ್ಲಿ ಆತ್ಮನಿರ್ಭರತೆ: ಖಾದ್ಯ ತೈಲಗಳಲ್ಲಿ ಸ್ವಾವಲಂಬನೆಗಾಗಿ ಎಣ್ಣೆಬೀಜಗಳ ಉತ್ಪಾದನೆಗೆ ಬೆಂಬಲ ನೀಡಲಾಗುವುದು; ತೊಗರಿ, ಉದ್ದು, ಮಸೂರ ಹಾಗೂ ಬೇಳೆಕಾಳು ಉತ್ಪಾದನೆ ಹೆಚ್ಚಿಸಲು ಆರು ವರ್ಷಗಳ ಕಾರ್ಯಯೋಜನೆ ರೂಪಿಸಲಾಗುವುದು. ನಾಫೆಡ್ ಮತ್ತು ಎನ್‌ಸಿಸಿಎಫ್ ಮೂಲಕ ರೈತರಿಂದ 4 ವರ್ಷ ಬೇಳೆ–ಕಾಳುಗಳನ್ನು ಖರೀದಿಸಲಾಗುವುದು.

ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿ ಹೆಚ್ಚಳ: ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಪಡೆಯುವ ಸಬ್ಸಿಡಿ ಆಧಾರಿತವಾದ ಅಲ್ಪಾವಧಿ ಸಾಲದ ಮಿತಿ ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಳ ಮಾಡುವ ಮೂಲಕ 7.7 ಕೋಟಿ ರೈತರಿಗೆ ನೆರವು ನೀಡಲಾಗುವುದು.

ಪಂಜಾಬ್‌ನ ಅಮೃತಸರದಲ್ಲಿ ಶನಿವಾರ ಸಾಸಿವೆ ಹೊಲದಲ್ಲಿ ಕಂಡ ರೈತ —ಎಎಫ್‌ಪಿ ಚಿತ್ರ

ಹೆಚ್ಚು ಇಳುವರಿಯ ಬೀಜಗಳ ಸಂಶೋಧನೆ: ಕೀಟನಿರೋಧಕವಾದ, ಪ್ರತಿಕೂಲ ಹವಾಮಾನ ಎದುರಿಸಿಯೂ ತಾಳಿಕೆಯ ಗುಣವಿರುವ, ಹೆಚ್ಚು ಇಳುವರಿ ನೀಡುವ ಬೀಜಗಳ ಉತ್ಪಾದನೆಗೆ ಸಂಶೋಧನಾ ವ್ಯವಸ್ಥೆಯೊಂದನ್ನು ರೂಪಿಸಿ, 100 ಬೀಜತಳಿಗಳನ್ನು ಮಾರುಕಟ್ಟೆಗೆ ಬಿಡಲಾಗುವುದು.

ಬಿಹಾರದಲ್ಲಿ ಮಖಾನಾ ಮಂಡಳಿ: ಮಖಾನಾ (ಕಮಲದ ಬೀಜ) ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟಕ್ಕಾಗಿ ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪಿಸಲಾಗುವುದು.

ತರಕಾರಿ, ಹಣ್ಣುಗಳಿಗಾಗಿ ಸಮಗ್ರ ಕಾರ್ಯಕ್ರಮ: ತರಕಾರಿ, ಹಣ್ಣು ಮತ್ತು 'ಶ್ರೀ ಅನ್ನ' (ಸಿರಿಧಾನ್ಯ) ಉತ್ಪಾದನೆ, ಸಂಸ್ಕರಣೆ ಮತ್ತು ಪೂರೈಕೆಗಾಗಿ ಹಾಗೂ ರೈತರಿಗೆ ಉತ್ತಮ ಬೆಲೆ ದೊರೆಯುವಂತೆ ಮಾಡಲು ರಾಜ್ಯಗಳ ಪಾಲುದಾರಿಕೆಯೊಂದಿಗೆ ಸಮಗ್ರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

5 ವರ್ಷದ ಹತ್ತಿ ಕಾರ್ಯಕ್ರಮ: ಭಾರತದ ಜವಳಿ ಉದ್ಯಮದ 5ಎಫ್ ಗುರಿಗೆ ತಕ್ಕಂತೆ ಹತ್ತಿಯ ವೈವಿಧ್ಯಮಯ ತಳಿಗಳ ಉತ್ಪಾದಕತೆ ಹೆಚ್ಚಿಸಲು ಐದು ವರ್ಷಗಳ ಕಾರ್ಯಕ್ರಮ ರೂಪಿಸಲಾಗುವುದು.

ಮೀನುಗಾರಿಕೆ: ಭಾರತದ ನಿರ್ದಿಷ್ಟ ಆರ್ಥಿಕ ವಲಯಗಳಲ್ಲಿ ಮತ್ತು ಅಂಡಮಾನ್, ನಿಕೋಬಾರ್, ಲಕ್ಷದ್ವೀಪ ಸೇರಿದಂತೆ ದೇಶದ ಗಡಿಗಳಾಚೆಗಿನ ಸಮುದ್ರದಲ್ಲಿ ಸುಸ್ಥಿರ ಮೀನುಗಾರಿಕೆಗೆ ಒಂದು ಚೌಕಟ್ಟು ರೂಪಿಸುವುದು.

ಎಂಎಸ್‌ಪಿ ಪ್ರಸ್ತಾಪ ಇಲ್ಲ

ಬಜೆಟ್ ಅನ್ನು ಹಣಕಾಸು ಸಚಿವರು ಪ್ರಾರಂಭಿಸಿದ್ದೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ವಿವರಗಳನ್ನು ನೀಡುವ ಮೂಲಕ. ಆದರೆ, ರೈತರ ದೀರ್ಘಾವಧಿ ಬೇಡಿಕೆಗಳಾದ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನು ಖಾತರಿ, ಸಾಲ ಮನ್ನಾ ಬಗ್ಗೆ ಏನೊಂದನ್ನೂ ಅವರು ಪ್ರಸ್ತಾಪಿಸಿಲ್ಲ.

'ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಣಕಾಸು ಸಚಿವೆ ಬಜೆಟ್ ಮಂಡನೆ ಶುರುಮಾಡಿದರಷ್ಟೆ. ಆದರೆ, ಎಂಎಸ್‌ಪಿಗೆ ಕಾನೂನು ಖಾತರಿ ನೀಡಬೇಕು ಎನ್ನುವುದೂ ಸೇರಿ ರೈತರ ಬೇಡಿಕೆಗಳಿಗೆ ಅವರು ಪೂರ್ಣಪ್ರಮಾಣದಲ್ಲಿ ಮೌನ ತಾಳಿದರು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಹಿಗ್ಗಿದ ಕನಸು ತಗ್ಗಿದ ಬಜೆಟ್

ಜನಸಾಮಾನ್ಯರೂ ವಿಮಾನಯಾನ ಮಾಡಲು ಅನುಕೂಲ ಕಲ್ಪಿಸುವ ಉದ್ದೇಶದ 'ಉಡಾನ್' (ಉಡೆ ದೇಶ್ ಕಾ ಆಮ್ ನಾಗರಿಕ್–ದೇಶದ ಸಾಮಾನ್ಯ ನಾಗರಿಕನೂ ವಿಮಾನಯಾನ ಮಾಡಲಿ) ಯೋಜನೆಯನ್ನು ಬಜೆಟ್‌ನಲ್ಲಿ ಪರಿಷ್ಕರಿಸಲಾಗಿದ್ದು, 120 ಹೊಸ ಪ್ರದೇಶಗಳಿಗೆ ಮುಂದಿನ 10 ವರ್ಷಗಳಲ್ಲಿ ವಾಯುಯಾನ ಸಾಧ್ಯವಾಗಲಿದೆ.

ಉಡಾನ್ ಯೋಜನೆ

ಆದಾಗ್ಯೂ ಉಡಾನ್ ಯೋಜನೆಗೆ ಮೀಸಲಿಟ್ಟಿರುವ ಹಣವು ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 32ರಷ್ಟು ಕಡಿಮೆಯಾಗಿದೆ. ₹540 ಕೋಟಿಯನ್ನು ಈ ಯೋಜನೆಗೆ ಮೀಸಲಿಡಲಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ₹800 ಕೋಟಿ ಮೀಸಲಿಡಲಾಗಿತ್ತು.

ಮುಂದಿನ ಹತ್ತು ವರ್ಷಗಳಲ್ಲಿ 4 ಕೋಟಿ ನಾಗರಿಕರು ವಿಮಾನ ಸಂಚಾರ ಮಾಡಲು ಈ ಯೋಜನೆ ಕಾರಣವಾಗಲಿದೆ ಎಂದು ಅಂದಾಜಿಸಲಾಗಿದೆ.

ಬಿಹಾರದಲ್ಲಿ ಹೊಸ ವಿಮಾನನಿಲ್ದಾಣವೊಂದು ತಲೆಎತ್ತಲಿದೆ ಎಂದೂ ಹಣಕಾಸು ಸಚಿವರು ಪ್ರಕಟಿಸಿದರು.

'ಉಡಾನ್' ಯೋಜನೆಯು ಇದುವರೆಗೆ 88 ಪ್ರದೇಶಗಳಿಗೆ ವಾಯುಯಾನ ಸಂಪರ್ಕ ಕಲ್ಪಿಸಿದ್ದು, 169 ವಿಮಾನಗಳು ಅವುಗಳ ನಡುವೆ ಸಂಚರಿಸುತ್ತಿವೆ. ಮುಂದಿನ ವರ್ಷಗಳಲ್ಲಿ ಪರ್ವತ ಪ್ರದೇಶಗಳು, ಈಶಾನ್ಯ ರಾಜ್ಯಗಳ ಸ್ಥಳಗಳಲ್ಲಿಯೂ ವಿಮಾನನಿಲ್ದಾಣಗಳು, ಹೆಲಿಪ್ಯಾಡ್‌ಗಳನ್ನು ನಿರ್ಮಿಸುವ ಗುರಿ ಇದೆ ಎಂದು ತಿಳಿಸಿದರು.

ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ₹2,400 ಕೋಟಿ ಬಜೆಟ್ ಮೀಸಲಿಡಲಾಗಿದೆ. ಡಿಜಿಸಿಎ (ಡೈರೆಕ್ಟೊರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್) ಹಾಗೂ ಬಿಸಿಎಎಸ್ (ಬ್ಯೂರೊ ಆಫ್ ಸಿವಿಲ್ ಏವಿಯೇಷನ್ ಸೆಕ್ಯುರಿಟಿ)ಗೆ ಕ್ರಮವಾಗಿ ₹330 ಕೋಟಿ ಹಾಗೂ ₹95 ಕೋಟಿಯನ್ನು 2025–26ನೇ ಸಾಲಿಗೆ ಮೀಸಲಿಡಲಾಗಿದೆ. ಈ ಬಜೆಟ್‌ನಲ್ಲಿ ಇದಕ್ಕಾಗಿ ಮೀಸಲಿಟ್ಟಿರುವ ಹಣದಲ್ಲಿ ಗಣನೀಯ ಏರಿಕೆಯಾಗಿದೆ.

2028ರವರೆಗೆ ಜಲಜೀವನ್ ಮಿಷನ್ ವಿಸ್ತರಣೆ

ಜಲಜೀವನ್ ಮಿಷನ್ ಯೋಜನೆಯ ಅಡಿ 2019ರಿಂದ ಭಾರತದ ಗ್ರಾಮೀಣ ಭಾಗದ 15 ಕೋಟಿ ಕುಟುಂಬಗಳಿಗೆ (ಶೇ 80ರಷ್ಟು) ನಲ್ಲಿ ನೀರಿನ ಸಂಪರ್ಕ ನೀಡಲಾಗಿದೆ ಎಂದು ಬಜೆಟ್‌ನಲ್ಲಿ ವಿವರಿಸಲಾಗಿದೆ.

ಈ ಯೋಜನೆಯ ಅಡಿ ಉಳಿದ ಮನೆಗಳಿಗೂ (ಶೇ 100ರಷ್ಟು) ನಲ್ಲಿ ಸಂಪರ್ಕ ನೀಡುವ ಸಲುವಾಗಿ ಯೋಜನೆಯನ್ನು 2028ರವರೆಗೆ ವಿಸ್ತರಿಸಲಾಗಿದ್ದು, ಅದಕ್ಕೆ ಹೆಚ್ಚುವರಿ ಅನುದಾನ ನೀಡಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

'ಜನ ಭಾಗೀರಥಿ'ಯ ಮೂಲಕ ಮನೆ ಮನೆಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಿ, ಅದರ ನಿರ್ವಹಣೆ ಮಾಡುವ ಮೂಲಕ ಗುಣಮಟ್ಟದ ಮೂಲಸೌಕರ್ಯ ಒದಗಿಸಲಾಗುತ್ತದೆ. ಸುಸ್ಥಿರ ಮತ್ತು ಜನಕೇಂದ್ರಿತ ಸೇವೆ ಪೂರೈಕೆಗಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳೊಂದಿಗೆ ಪ್ರತ್ಯೇಕ ಒಪ್ಪಂದಗಳನ್ನು (ಎಂಒಯು) ಮಾಡಿಕೊಳ್ಳಲಾಗುವುದು ಎಂದು ಸಚಿವೆ ಹೇಳಿದ್ದಾರೆ.

ವಲಸೆಗೆ ತಡೆ ಆರ್ಥಿಕತೆಗೆ ಪುಷ್ಟಿ

ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಮತ್ತು ಅನಿವಾರ್ಯ ವಲಸೆ ತಡೆಯಲು ರಾಜ್ಯಗಳ ಪಾಲುದಾರಿಕೆಯೊಂದಿಗೆ ಯೋಜನೆ ಕೈಗೊಳ್ಳಲಾಗುವುದು. ಕೌಶಲ ತರಬೇತಿ, ಹೂಡಿಕೆ, ತಂತ್ರಜ್ಞಾನದ ನೆರವಿನಿಂದ ಗ್ರಾಮೀಣ ಆರ್ಥಿಕತೆಗೆ ಪುಷ್ಟಿ ನೀಡುವುದು ಇದರ ಗುರಿ.

ಅಸ್ಸಾಂನ ನಾಮರೂಪದಲ್ಲಿ 12.7 ಲಕ್ಷ ಟನ್ ಸಾಮರ್ಥ್ಯದ ಯೂರಿಯಾ ಘಟಕ ಸ್ಥಾಪನೆ, ಸಹಕಾರ ಕ್ಷೇತ್ರಕ್ಕೆ ಸಾಲ ಸೌಲಭ್ಯ ಒದಗಿಸುವ ಎನ್‌ಸಿಡಿಸಿಗೆ ಬೆಂಬಲ ನೀಡುವುದು, ಗ್ರಾಮೀಣ ಆರ್ಥಿಕತೆಯ ವೇಗವರ್ಧಕವಾಗಿ ಭಾರತೀಯ ಅಂಚೆಯನ್ನು ಬಳಕೆ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಕೇಂದ್ರ ಸಚಿವರ ಮೆಚ್ಚುಗೆ, ರಾಜ್ಯ ಸರ್ಕಾರದ ಮುಖಂಡರಿಗೆ ನಿರಾಸೆ

ಕೃಷಿಕರ ಕಾಳಜಿ

ಕೃಷಿಕರ ಬಗ್ಗೆ ಅತಿಹೆಚ್ಚು ಕಾಳಜಿ ವಹಿಸಿದ ಹಾಗೂ ಮಧ್ಯಮ ವರ್ಗದ ಜನರ ಬದುಕನ್ನು ಸುಲಭ, ಸರಳಗೊಳಿಸುವ ಬಜೆಟ್. ನರೇಂದ್ರ ಮೋದಿ ಅವರ ದೂರದೃಷ್ಟಿಗೆ 2025ನೇ ಸಾಲಿನ ಬಜೆಟ್ ಕೈಗನ್ನಡಿ ಆಗಿದೆ. ಸಾವಯವ ಕೃಷಿಗೆ ಉತ್ತೇಜನ, ಕೃಷಿಯಲ್ಲಿ ಸುಸ್ಥಿರತೆಗೆ ಒತ್ತು, ರೈತನ ವೆಚ್ಚವನ್ನು ತಗ್ಗಿಸುವ ನಿಟ್ಟಿನಲ್ಲಿ ಅಗತ್ಯ ಉಪಕ್ರಮಗಳನ್ನು ಪ್ರಕಟಿಸಲಾಗಿದೆ. ಮೇಕ್ ಇನ್ ಇಂಡಿಯಾ ಬ್ರ್ಯಾಂಡ್ ಮೂಲಕ ಆಟಿಕೆಗಳ ವಲಯಕ್ಕಾಗಿ, ಭಾರತವನ್ನು ಜಾಗತಿಕ ಉತ್ಪಾದನಾ ಕೇಂದ್ರವನ್ನಾಗಿ ಮಾಡಲು ಯೋಜನೆ ರೂಪಿಸಲಾಗಿದೆ. ರಾಜ್ಯಗಳಿಗೆ 50 ವರ್ಷಗಳ ಬಡ್ಡಿರಹಿತ ಸಾಲಕ್ಕಾಗಿ ₹1.5 ಲಕ್ಷ ಕೋಟಿ ಮೀಸಲು ಇರಿಸಿರುವುದು ರಾಜ್ಯಗಳ ಆರ್ಥಿಕ ಶಕ್ತಿಗೆ ಬಲ ತುಂಬಲು ಕೈಗೊಂಡ ಮಹತ್ವದ ಕ್ರಮ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

ಭಾರಿ ನಿರಾಸೆ

ನಮ್ಮ ರಾಜ್ಯದ ಶಾಸಕರಿಂದ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಇಷ್ಟೊಂದು ನಿರಾಸೆ ಉಂಟು ಮಾಡುತ್ತಾರೆಂದು ನಾನು ಭಾವಿಸಿರಲಿಲ್ಲ. ಇಡೀ ದೇಶದಲ್ಲಿಯೇ ತೆರಿಗೆ ಕಟ್ಟುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಐಟಿ ರಫ್ತಿನಲ್ಲಿ ಮೊದಲ ಸ್ಥಾನದಲ್ಲಿದ್ದೇವೆ. ರಾಜ್ಯದ ಪ್ರಮುಖ ಯೋಜನೆಗಳಿಗೆ ಬಜೆಟ್‌ನಲ್ಲಿ ಅನುದಾನ ನೀಡಿಲ್ಲ. ರಾಜ್ಯಕ್ಕೆ ಏನಾದರೂ ಲಾಭ ಆಗಿದೆಯೇ ಎಂದು ರಾಜ್ಯವನ್ನು ಪ್ರತಿನಿಧಿಸುವವರು ಹೇಳಬೇಕು. ಯಾವ ಕ್ಷೇತ್ರಕ್ಕೂ ಬಜೆಟ್‌ನಿಂದ ಅನುಕೂಲ ಆಗಿಲ್ಲ. ಗ್ರೇಟರ್ ಬೆಂಗಳೂರಿಗೆ ಬೇಡ, ಬೆಂಗಳೂರಿಗೆ ಅನುದಾನದ ಅವಶ್ಯಕತೆ ಇತ್ತು. ಕಳೆದ ಬಾರಿ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಘೋಷಣೆ ಮಾಡಿದ್ದರು. ಅದನ್ನಾದರೂ ಕೊಟ್ಟರೇ?

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ರಾಜ್ಯಕ್ಕೆ ದ್ರೋಹ

ಕರ್ನಾಟಕದ ಯಾವ ಬೇಡಿಕೆಯನ್ನೂ ಈಡೇರಿಸಿಲ್ಲ. ನ್ಯಾಯ ಕೊಡುವ ಕೆಲಸವನ್ನು ಕೇಂದ್ರ ಮಾಡಿಲ್ಲ. ಬಿಜೆಪಿ ಸರ್ಕಾರ ಕರ್ನಾಟಕಕ್ಕೆ ಮಾಡುತ್ತಿರುವ ದ್ರೋಹವಿದು. ಕರ್ನಾಟಕ ತೆರಿಗೆ ಬೇರೆ ರಾಜ್ಯದ ಪಾಲಾಗುತ್ತಿದೆ. ಬಿಹಾರ ರಾಜ್ಯಕ್ಕೆ ಐದಾರು ಯೋಜನೆಗಳನ್ನು ಕೊಟ್ಟಿದ್ದಾರೆ. ಕರ್ನಾಟಕದವರು ಕಡ್ಲೆಬೀಜ ತಿನ್ನಲು ಇರುವುದೇ? ಕರ್ನಾಟಕಕ್ಕೆ ₹11,495 ಕೋಟಿ ಹಂಚಿಕೆ ಮಾಡುವಂತೆ ಹಣಕಾಸು ಆಯೋಗ ಹೇಳಿತ್ತು. ಈ ಅನುದಾನದ ಬಗ್ಗೆಯೂ ಬಜೆಟ್‌ನಲ್ಲಿ ಚಕಾರ ಎತ್ತಿಲ್ಲ. ಭದ್ರಾ ಮೇಲ್ದಂಡೆ ಯೋಜನೆಗೂ ನಯಾಪೈಸೆ ಕೊಟ್ಟಿಲ್ಲ. ಕಲ್ಯಾಣ ಕರ್ನಾಟಕ, ಮಲೆನಾಡು ಕರ್ನಾಟಕಕ್ಕೂ ನೀಡಿಲ್ಲ. ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಕೇವಲ ದುಡಿಯುವ ಆಳಿನ ರೀತಿ ಕಾಣುತ್ತಿದೆ.

ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಅಗತ್ಯ ವಸ್ತು ದರ ಅಗ್ಗ

ರಾಜಕೀಯ ಅರಾಜಕತೆ ಸೃಷ್ಟಿಸುವತ್ತ ಸಿದ್ದರಾಮಯ್ಯ ಅವರ ಆಡಳಿತ ಮುನ್ನಡೆದಿದೆ. ನೀವು ಅಧಿಕಾರದಲ್ಲಿ ಇರಲೇಬೇಕೆಂದರೆ 'ತೆರಿಗೆಯ ಮೇಲೆ ತೆರಿಗೆ, ಬೆಲೆ ಏರಿಕೆ ಮೇಲೆ ಬೆಲೆ ಏರಿಕೆ' ಮಾಡಿ ಜನರನ್ನು ಸುಲಿಗೆ ಮಾಡುವುದೊಂದೇ ಉಳಿದಿರುವ ಮಾರ್ಗವಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಕೇಂದ್ರ ಸರ್ಕಾರವು ಔಷಧಗಳು ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಇಳಿಸಿ ವಿಕಸಿತ ಭಾರತ ಕಟ್ಟುವ ದೂರದೃಷ್ಟಿಯ ಬಜೆಟ್ ಮಂಡಿಸಿದೆ. ಸಂಪದ್ಭರಿತ ಕರ್ನಾಟಕವನ್ನು ಬರಡು ಮಾಡಲು ಹೊರಟಿರುವ ನಿಮ್ಮ ಆಡಳಿತ ವೈಖರಿ ನಾಡಿನ ಇತಿಹಾಸಕ್ಕೆ ಕಪ್ಪು ಚುಕ್ಕೆಯಾಗುತ್ತಿದೆ. ಕೇಂದ್ರದ ನಿಲುವುಗಳನ್ನು ಟೀಕಿಸುವ ಬದಲು ಮೋದಿ ಸರ್ಕಾರದೊಂದಿಗೆ ವಿಶ್ವಾಸಪೂರ್ಣ ಹೆಜ್ಜೆ ಹಾಕಿ

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಗ್ರಾಮೀಣಾಭಿವೃದ್ಧಿಗೆ ₹1.88 ಲಕ್ಷ ಕೋಟಿ

ಗ್ರಾಮೀಣಾಭಿವೃದ್ಧಿಗೆ ಮೀಸಲಾದ ಹಣದಲ್ಲಿ ಈ ಬಾರಿ ಅಲ್ಪ ಮಟ್ಟದ ಹೆಚ್ಚಳವಾಗಿದೆ. 2025–26ರ ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ₹1.88 ಲಕ್ಷ ಕೋಟಿ ಮೀಸಲಿಡಲಾಗಿದ್ದು, ಕಳೆದ ಬಜೆಟ್‌ಗಿಂತ ಶೇ 5.75ರಷ್ಟು ಹೆಚ್ಚು ಅನುದಾನ ನಿಗದಿಪಡಿಸಲಾಗಿದೆ.

ಕಳೆದ ಬಾರಿಯ ಬಜೆಟ್‌ನಲ್ಲಿ ಇಲಾಖೆಗೆ ₹1,77,566 ಕೋಟಿ ನಿಗದಿಪಡಿಸಲಾಗಿತ್ತು. ಆದಾಗ್ಯೂ, ಪರಿಷ್ಕೃತ ಅಂದಾಜಿನಲ್ಲಿ ಅದರ ಮೊತ್ತವನ್ನು ₹1,73,912 ಕೋಟಿಗೆ (₹3,654 ಕಡಿಮೆ) ಇಳಿಸಲಾಗಿತ್ತು. ಗ್ರಾಮೀಣಾಭಿವೃದ್ಧಿಯ ಪ್ರಮುಖ ಯೋಜನೆಯಾದ ನರೇಗಾಗೆ ಕಳೆದ ಬಾರಿಯ ಬಜೆಟ್‌ನಲ್ಲಿ ₹86,000 ಕೋಟಿ ಮೀಸಲಿಡಲಾಗಿತ್ತು. ಈ ಬಾರಿಯೂ ಅಷ್ಟೇ ಮೊತ್ತವನ್ನು ನಿಗದಿಪಡಿಸಲಾಗಿದೆ.

ನರೇಗಾ ಯೋಜನೆಗೆ 2023–24ರಲ್ಲಿ ಮೊದಲು ₹60,000 ಕೋಟಿ ಮೀಸಲಿಡಲಾಗಿತ್ತು. ನಂತರ ಹೆಚ್ಚುವರಿ ಅನುದಾನ ಒದಗಿಸುವ ಮೂಲಕ ಯೋಜನೆಯ ಒಟ್ಟು ವೆಚ್ಚ 89,153 ಕೋಟಿಗೆ ಏರಿಕೆಯಾಗಿತ್ತು. 2024–25ರಲ್ಲಿ ಯಾವುದೇ ಹೆಚ್ಚುವರಿ ಅನುದಾನ ಒದಗಿಸಿರಲಿಲ್ಲ.

ಕೋವಿಡ್ ಸಾಂಕ್ರಾಮಿಕದ ವೇಳೆ, ಲಾಕ್‌ಡೌನ್‌ನಿಂದಾಗಿ ಹಳ್ಳಿಗಳಿಗೆ ದೊಡ್ಡ ಪ್ರಮಾಣದಲ್ಲಿ ಮರುವಲಸೆ ನಡೆದಿತ್ತು. ಹಾಗೆ ಹಳ್ಳಿಗಳಿಗೆ ಹಿಂದಿರುಗಿದ ಅನೇಕ ಮಂದಿಗೆ ನರೇಗಾ ಯೋಜನೆಯೇ ಜೀವನಾಧಾರವಾಗಿತ್ತು. ಯೋಜನೆಗಾಗಿ ಆಗ ₹1,11,169 ಕೋಟಿ ವ್ಯಯಿಸಲಾಗಿತ್ತು.

ಬಜೆಟ್‌ನಲ್ಲಿ ಕುಡಿಯುವ ನೀರು, ನೈರ್ಮಲ್ಯಕ್ಕಾಗಿ ₹74,226 ಕೋಟಿ ನಿಗದಿಪಡಿಸಲಾಗಿದ್ದು, ಇದರ ಪೈಕಿ ಹೆಚ್ಚು ಹಣವನ್ನು (₹67,000 ಕೋಟಿ) ಜಲಜೀವನ್ ಮಿಷನ್‌ಗಾಗಿ (ಜೆಜೆಎಂ) ಮೀಸಲಿಡಲಾಗಿದೆ. ಕಳೆದ ಬಾರಿ ಜೆಜೆಎಂಗೆ 22,694 ಕೋಟಿ ಮೀಸಲಿಡಲಾಗಿತ್ತು. ಗ್ರಾಮೀಣ ಭಾಗದಲ್ಲಿ ಬಯಲು ಶೌಚಮುಕ್ತ ವ್ಯವಸ್ಥೆ ಮತ್ತು ಘನ ಮತ್ತು ಜಲ ತ್ಯಾಜ್ಯ ನಿರ್ವಹಣೆಯ ಉದ್ದೇಶದ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಗಾಗಿ ಕಳೆದ ಬಾರಿಯಂತೆ ಈ ಬಾರಿಯೂ ₹ 7,192 ಕೋಟಿ ಮೀಸಲಿಡಲಾಗಿದೆ.

ಏಕತ್ರ ಸೂತ್ರದ ಜಪ: ಹೆಚ್ಚಿಸದ ಅನ್ನದಾತರ ವಿಶ್ವಾಸ

ವಿಶ್ಲೇಷಣೆ
ಸಾರ್ಥಕ್ ಪ್ರಧಾನ್

ಹತ್ತು ವಿಸ್ತೃತ ಕ್ಷೇತ್ರಗಳಿಗೆ ಗಮನ ನೀಡುವ ಮೂಲಕ ಸರ್ಕಾರವು ಅಭಿವೃದ್ಧಿಗೆ ಆದ್ಯತೆ ನೀಡಲಿದೆ ಎಂಬುದನ್ನು ಪ್ರಧಾನವಾಗಿ ಹೇಳುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣ ಆರಂಭಿಸಿದರು. ಅವರು ನೀಡಿದ ಪಟ್ಟಿಯಲ್ಲಿನ ಮೊದಲ ಎರಡು ಕ್ರಮಗಳು 'ಕೃಷಿ ಬೆಳವಣಿಗೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು' ಮತ್ತು 'ಗ್ರಾಮೀಣ ಸಮೃದ್ಧಿಯನ್ನು, ಚೇತರಿಕೆ'ಯನ್ನು ಖಾತರಿಪಡಿಸುವುದು. ಆದರೆ, ಬಜೆಟ್ ವಿವರಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ವಿಶ್ವಾಸ ಹೆಚ್ಚಿಸುವ ಅಂಶಗಳು ಕಾಣುವುದಿಲ್ಲ.

ಕೃಷಿ ಮತ್ತು ರೈತರ ಅಭಿವೃದ್ಧಿ ಇಲಾಖೆಗೆ 2025–26ಕ್ಕೆ ನಿಗದಿ ಮಾಡಿರುವ ಅನುದಾನವು 2024–25ರ ಪರಿಷ್ಕೃತ ಅಂದಾಜಿಗಿಂತ ಶೇಕಡ 3ರಷ್ಟು ಕಡಿಮೆ ಇದೆ. ಕೃಷಿ ಸಂಶೋಧನೆ ಮತ್ತು ಶಿಕ್ಷಣಕ್ಕೆ ಮೀಸಲಿರಿಸಿರುವ ಮೊತ್ತ ಕೂಡ ಕಳೆದ ವರ್ಷದ ಪರಿಷ್ಕೃತ ಅಂದಾಜಿಗಿಂತ ಕಡಿಮೆ ಇದೆ. ಇದು ಕಳವಳ ಮೂಡಿಸುವಂಥದ್ದು. ಏಕೆಂದರೆ, ಕೃಷಿ ಕ್ಷೇತ್ರದಲ್ಲಿನ ಸಂಶೋಧನೆಗಳು ಸುಸ್ಥಿರವಾದ ದೀರ್ಘಾವಧಿ ಪ್ರಯೋಜನಗಳನ್ನು ಒದಗಿಸುತ್ತವೆ. ಭೂಸಂಪನ್ಮೂಲ ಇಲಾಖೆಗೆ ನೀಡಿರುವ ಅನುದಾನ ಕೂಡ ಹಿಂದಿನ ವರ್ಷದ ಬಜೆಟ್ ಅಂದಾಜಿಗಿಂತ ಕಡಿಮೆ ಇದೆ. ಬೆಳೆ ವಿಮೆಯಂತಹ ಯೋಜನೆಗಳಿಗೆ ಅನುದಾನವು ಕಡಿಮೆ ಆಗಿದೆ.

'ಪ್ರಧಾನ ಮಂತ್ರಿ ಧನಧಾನ್ಯ ಕೃಷಿ ಯೋಜನೆ'ಯನ್ನು ಸರ್ಕಾರ ರೂಪಿಸಲಿದೆ ಎಂದು ಸಚಿವೆ ಹೇಳಿದ್ದಾರೆ. ಇದು ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು, ಕೃಷಿ ಬೆಳೆಗಳ ಸಂಖ್ಯೆಯನ್ನು ಏರಿಕೆ ಮಾಡಲು ಹಾಗೂ ಬೆಳೆ ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಲು ಈಗ ಚಾಲ್ತಿಯಲ್ಲಿರುವ ಯೋಜನೆಗಳನ್ನು ಒಂದುಗೂಡಿಸುವ ಕೆಲಸ ಮಾಡುತ್ತದೆ. ಹೀಗೆ ಮಾಡಲು ಮುಂದಾಗಿರುವುದು ಸರಿಯಾಗಿಯೇ ಇದೆ.

ನವದೆಹಲಿಯ ಸಮೀಪದ ಕೃಷಿ ಜಮೀನಿನೊಂದರಲ್ಲಿ ಶನಿವಾರ ಸೋರೆಕಾಯಿ ಬೀಜದ ಬಿತ್ತನೆಯಲ್ಲಿ ತೊಡಗಿದ್ದ ಮಹಿಳೆ —ಎಎಫ್‌ಪಿ ಚಿತ್ರ

ಏಕೆಂದರೆ ಒಂದೇ ವಿಷಯಕ್ಕೆ ಯೋಜನೆಗಳ ಸಂಖ್ಯೆ ಹೆಚ್ಚಾದಾಗ ಉತ್ತರದಾಯಿತ್ವ ಮತ್ತು ದಕ್ಷತೆ ಕಡಿಮೆಯಾಗುತ್ತದೆ, ಇದರಿಂದಾಗಿ ಉತ್ಪಾದಕತೆ ತಗ್ಗುತ್ತದೆ. ಆದರೆ, ಹೊಸ ಯೋಜನೆಯ ಯಶಸ್ಸು ಅದರ ಅನುಷ್ಠಾನ ಆಧರಿಸಿದೆ. ಬಜೆಟ್ ಭಾಷಣದಲ್ಲಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಕೆಲವು ವಿವರಗಳಾದ ಅನುದಾನ, ಅದರ ಫಲಿತಾಂಶಗಳ ಬಗ್ಗೆ ಮಾತು ಇಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಅವಕಾಶಗಳನ್ನು ಹೆಚ್ಚಿಸಲು ಮತ್ತು ಕೃಷಿ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಕಡಿಮೆ ಇರುವುದನ್ನು ಸರಿಪಡಿಸಲು ಹಲವು ವಲಯಗಳನ್ನು ಒಳಗೊಳ್ಳುವ 'ಗ್ರಾಮೀಣ ಸಮೃದ್ಧಿ ಮತ್ತು ಚೇತರಿಕೆ' ಯೋಜನೆಯನ್ನು ಘೋಷಿಸಲಾಗಿದೆ. ಆದರೆ ಇದಕ್ಕೆ ಎಷ್ಟು ಅನುದಾನ, ಯೋಜನೆಯ ಪ್ರಯೋಜನಗಳು ಏನು ಎಂಬುದನ್ನು ವಿವರಿಸಿಲ್ಲ. ಎರಡೂ ಕ್ರಮಗಳು ರಾಜ್ಯಗಳ ಜೊತೆಗಿನ ಪಾಲುದಾರಿಕೆಯನ್ನು ಆಧರಿಸಿರುವ ಕಾರಣ, ಫಲಿತಾಂಶವು ರಾಜ್ಯ–ಕೇಂದ್ರ ಸಂಬಂಧದ ಮೇಲೆ ನಿಂತಿದೆ.

ಹಣಕಾಸು ಸಚಿವರು ಧಾನ್ಯಗಳ ಉತ್ಪಾದನೆಯಲ್ಲಿ ಆತ್ಮನಿರ್ಭರತೆಯನ್ನು ಸಾಧ್ಯವಾಗಿಸಲು, ತರಕಾರಿ ಮತ್ತು ಹಣ್ಣು ಬೆಳೆಗಳಿಗಾಗಿ ಯೋಜನೆ ಆರಂಭಿಸುವ, ಬಿಹಾರದಲ್ಲಿ ಮಖಾನಾ ಮಂಡಳಿ ಸ್ಥಾಪಿಸುವ, ಹತ್ತಿ ಉತ್ಪಾದಕತೆಗೆ ಪ್ರತ್ಯೇಕ ಮಿಷನ್ ಆರಂಭಿಸುವ ಘೋಷಣೆ ಮಾಡಿದ್ದಾರೆ. ಈ ಘೋಷಣೆಗಳಿಗೆ ₹100 ಕೋಟಿಯಿಂದ ₹1,000 ಕೋಟಿವರೆಗೆ ಅನುದಾನ ನಿಗದಿ ಮಾಡಲಾಗಿದೆ. ಆದರೆ ಕೃಷಿ ಬಜೆಟ್ ಗಾತ್ರ ಗಮನಿಸಿದರೆ, ಈ ಅನುದಾನ ಕಡಿಮೆ.

ರಸ್ತೆ ಸಂಪರ್ಕವು ಗ್ರಾಮೀಣಾಭಿವೃದ್ಧಿಯಲ್ಲಿ ಮಹತ್ವದ ಪಾತ್ರ ಹೊಂದಿದೆ. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ 2024–25ರ ಪರಿಷ್ಕೃತ ಅಂದಾಜನ್ನು ಅವಲೋಕಿಸಿದಾಗ, ಬಜೆಟ್ ಘೋಷಣೆಗಿಂತ ಅದು ಶೇ 25ರಷ್ಟು ಕಡಿಮೆ ಇದ್ದಿದ್ದು ಕಾಣುತ್ತದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಪರಿಷ್ಕೃತ ಅಂದಾಜು ಶೇ 40ರಷ್ಟು ಕಡಿಮೆಯಾಗಿತ್ತು. ಅನುದಾನ ಕಡಿಮೆ ಆಗಿದ್ದುದು ಯೋಜನೆಗಳ ಅನುಷ್ಠಾನದಲ್ಲಿನ ಅಸಾಮರ್ಥ್ಯವನ್ನು ತೋರಿಸುತ್ತದೆ.

ಕೃಷಿ ಕ್ಷೇತ್ರವನ್ನು ನೆಚ್ಚಿಕೊಂಡಿರುವ ಜನರ ಸಂಖ್ಯೆ ಹೆಚ್ಚಿರುವ ಕಾರಣಕ್ಕೆ ಕೃಷಿ ಮತ್ತು ಗ್ರಾಮೀಣ ಉತ್ಪಾದಕತೆಯನ್ನು ಬಲಪಡಿಸುವ ಕೆಲಸವನ್ನು ಬಜೆಟ್ ಮಾಡಬಹುದಿತ್ತು. ಉದಾಹರಣೆಗೆ, ಗ್ರಾಮೀಣ ಮತ್ತು ಕೃಷಿ ಸಂಬಂಧಿತ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಬಹುದಿತ್ತು. ಬೆಲೆಯಲ್ಲಿನ ವ್ಯತ್ಯಾಸಗಳನ್ನು ಕಡಿಮೆ ಮಾಡುವುದಕ್ಕೆ ವ್ಯವಸ್ಥೆ ರೂಪಿಸಬಹುದಿತ್ತು. ಮಾರುಕಟ್ಟೆಯ ಬೇಡಿಕೆಗಳಿಗೆ ಅನುಗುಣವಾಗಿ ಸ್ಪಂದಿಸಲು ರೈತರಿಗೆ ಉತ್ತೇಜನ ನೀಡುವ ಕೆಲಸ ಆಗಬಹುದಿತ್ತು.

ಲೇಖಕ- ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನಲ್ಲಿ ಸಹಾಯಕ ಪ್ರಾಧ್ಯಾಪಕ

ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು

ದೀರ್ಘಾವಧಿಯ ಬೆಳವಣಿಗೆಗೆ ಒತ್ತು ನೀಡುವ ಮತ್ತು ದೇಶದಾದ್ಯಂತ ಸಂಪರ್ಕವನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಪ್ರಮುಖ ಮೂಲಸೌಕರ್ಯ ಯೋಜನೆಗಳಿಗೆ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಮೀಸಲಿಡಲಾಗಿದೆ.

ಅಭಿವೃದ್ಧಿಯ ವಿಷಯದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಇರುವ ಅಂತರವನ್ನು ತಗ್ಗಿಸಲು ಗ್ರಾಮೀಣ ರಸ್ತೆ, ನೈರ್ಮಲ್ಯ ಮತ್ತು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಮೊತ್ತ ನಿಗದಿಪಡಿಸಲಾಗಿದೆ.

ಸ್ಮಾರ್ಟ್ ಸಿಟಿ ಮತ್ತು ನಗರ ಮೂಲಸೌಲಭ್ಯಗಳಿಗೆ ಆದ್ಯತೆ ಕಲ್ಪಿಸಲಾಗಿದೆ. ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ.

ನಗರ ಮೂಲಸೌಕರ್ಯಕ್ಕೆ ₹1 ಲಕ್ಷ ಕೋಟಿ: ನಗರ ಮೂಲಸೌಕರ್ಯ ಉತ್ತೇಜಿಸಲು, ₹1 ಲಕ್ಷ ಕೋಟಿ ಮೊತ್ತದ ‘ನಗರಾಭಿವೃದ್ಧಿ ನಿಧಿ’ ಘೋಷಿಸಲಾಗಿದೆ. ‘ನಗರಗಳನ್ನು ಬೆಳವಣಿಗೆಯ ಹಬ್‌ಗಳನ್ನಾಗಿಸುವುದು’, ‘ನಗರಗಳ ಸಮಗ್ರ ಅಭಿವೃದ್ಧಿ’ ಹಾಗೂ ‘ನೀರು ಮತ್ತು ನೈರ್ಮಲ್ಯ’ ಮುಂತಾದ ಪ್ರಸ್ತಾವನೆಗಳನ್ನು ಕಾರ್ಯಗತಗೊಳಿಸಲು ಈ ಮೊತ್ತವನ್ನು ಬಳಸಲಾಗುವುದು.

ಈ ಯೋಜನೆಗಳ ವೆಚ್ಚದ ಶೇ 50ರಷ್ಟನ್ನು ಬಾಂಡ್‌ಗಳು, ಬ್ಯಾಂಕ್ ಸಾಲ ಮತ್ತು ಸರ್ಕಾರಿ ಖಾಸಗಿ ಸಹಭಾಗಿತ್ವದಡಿ (ಪಿಪಿಪಿ) ಭರಿಸಲು ಯೋಜನೆ ಹಾಕಿಕೊಳ್ಳಲಾಗಿದೆ. 2025–26ರ ಸಾಲಿಗೆ ₹10 ಸಾವಿರ ಕೋಟಿಯನ್ನು ತೆಗೆದಿರಿಸಲಾಗಿದೆ.

‘ಸ್ವನಿಧಿ’ ಯೋಜನೆ ಪರಿಷ್ಕರಣೆ: ಪ್ರಧಾನಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ ನಿಧಿ (ಪಿಎಂ ಸ್ವನಿಧಿ) ಯೋಜನೆಗೆ ಹೊಸ ರೂಪ ನೀಡುವ ಘೋಷಣೆ ಮಾಡಲಾಗಿದೆ.ಬ್ಯಾಂಕ್‌ಗಳು ಮತ್ತು ಯುಪಿಐ ಜತೆ ಲಿಂಕ್ ಆಗಿರುವ ಕ್ರೆಡಿಟ್ ಕಾರ್ಡ್‌ಗಳಿಂದ ₹30 ಸಾವಿರದವರೆಗೆ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಇದುವರೆಗೆ 68 ಲಕ್ಷ ಬೀದಿ ಬದಿ ವ್ಯಾಪಾರಿಗಳಿಗೆ ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ ಎಂದು ಹಣಕಾಸು ಸಚಿವರು ಮಾಹಿತಿ ನೀಡಿದರು.

200 ‘ವಂದೇ ಭಾರತ್’ ನಿರ್ಮಾಣ: ವೈಷ್ಣವ್

ಬಜೆಟ್‌ನಲ್ಲಿ ರೈಲ್ವೆ ಯೋಜನೆಗಳಿಗೆ ₹2.52 ಲಕ್ಷ ಕೋಟಿ ಮೀಸಲಿಡುವ ಮೂಲಕ ಕೇಂದ್ರ ಸರ್ಕಾರವು ರೈಲ್ವೆಯ ಅಭಿವೃದ್ಧಿಯೆಡೆಗೆ ತಾನು ಹೊಂದಿರುವ ಬದ್ಧತೆಯನ್ನು ಮುಂದುವರಿಸಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

‘ಮುಂದಿನ 2–3 ವರ್ಷಗಳಲ್ಲಿ 200 ‘ವಂದೇ ಭಾರತ್’, 100 ‘ಅಮೃತ್ ಭಾರತ್’ ಮತ್ತು 50 ‘ನಮೋ ಭಾರತ್’ ರೈಲುಗಳನ್ನು ನಿರ್ಮಿಸುವ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ’ ಎಂದರು.

‘ಮುಂದಿನ ಕೆಲವು ವರ್ಷಗಳಲ್ಲಿ 17,500 ಹೊಸ ಬೋಗಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. 2025–26ರಲ್ಲಿ 2,000 ಬೋಗಿಗಳನ್ನು ನಿರ್ಮಿಸುವ ಗುರಿ ನಮ್ಮದು’ ಎಂದು ತಿಳಿಸಿದರು.

‘₹4.6 ಲಕ್ಷ ಕೋಟಿ ಮೊತ್ತದ ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ಸೇರಿಸಲಾಗಿದ್ದು, ಮುಂದಿನ ನಾಲ್ಕೈದು ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. ಹೊಸ ಹಳಿಗಳ ನಿರ್ಮಾಣ, ದ್ವಿಪಥ ಮತ್ತು ಚತುಷ್ಪಥ ಕಾಮಗಾರಿ, ನಿಲ್ದಾಣಗಳ ನವೀಕರಣ, ಮೇಲ್ಸೇತುವೆ ಹಾಗೂ ಅಂಡರ್‌ಪಾಸ್‌ಗಳಿಗೆ ಸಂಬಂಧಿಸಿದ ಯೋಜನೆಗಳು ಇವು’ ಎಂದು ಮಾಹಿತಿ ನೀಡಿದರು.

50 ಪ್ರವಾಸಿ ತಾಣ ಅಭಿವೃದ್ಧಿ

ಬಜೆಟ್‌ನಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡಲಾಗಿದ್ದು, ವಿವಿಧ ರಾಜ್ಯಗಳ ಸಹಕಾರದೊಂದಿಗೆ ದೇಶದ 50 ಪ್ರಮುಖ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸುವ ಘೋಷಣೆ ಮಾಡಲಾಗಿದೆ.

ಪ್ರವಾಸೋದ್ಯಮ ಮೂಲಸೌಕರ್ಯ ಹೆಚ್ಚಿಸುವುದು, ದೇಶಿ ಮತ್ತು ಅಂತರರಾಷ್ಟ್ರೀಯ ಪ್ರಯಾಣವನ್ನು ಉತ್ತೇಜಿಸುವುದು ಹಾಗೂ ಪ್ರವಾಸಿಗರು, ವಿಶೇಷವಾಗಿ ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವುದಕ್ಕಾಗಿ ಪ್ರವಾಸೋದ್ಯಮ ಸಚಿವಾಲಯಕ್ಕೆ 2025–26ರ ಹಣಕಾಸು ವರ್ಷದಲ್ಲಿ ₹2,541.06 ಕೋಟಿ ಹಂಚಿಕೆ ಮಾಡಲಾಗಿದೆ. 2024-25ರಲ್ಲಿನ ಪರಿಷ್ಕೃತ ಅಂದಾಜು ಮೊತ್ತಕ್ಕಿಂತ (₹850.36 ಕೋಟಿ) ಗಣನೀಯ ಏರಿಕೆಯಾಗಿದೆ.

ಮುದ್ರಾ ಸಾಲ ಯೋಜನೆಯನ್ನು ವಿಸ್ತರಿಸುವ ಮೂಲಕ ಸರ್ಕಾರವು ಹೋಂಸ್ಟೇಗಳನ್ನು ಉತ್ತೇಜಿಸುವ ಮತ್ತು ಪ್ರವಾಸಿ ತಾಣಗಳಿಗೆ ಸಂಪರ್ಕವನ್ನು ಸುಧಾರಿಸುವ ಕೆಲಸ ಮಾಡಲಿದೆ ಎಂದು ಹಣಕಾಸು ಸಚಿವರು ತಿಳಿಸಿದರು.

₹2,541 ಕೋಟಿ
2025–26ರ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಗೆ ನಿಗದಿಪಡಿಸಿರುವ ಹಣ

‘ಪ್ರವಾಸೋದ್ಯಮದ ಉತ್ತೇಜನಕ್ಕೆ ಅಗತ್ಯ ಮೂಲಸೌಕರ್ಯ ನಿರ್ಮಿಸಲು ಜಮೀನು ಒದಗಿಸುವ ಜವಾಬ್ದಾರಿಯನ್ನು ರಾಜ್ಯ ಸರ್ಕಾರಗಳು ವಹಿಸಿಕೊಳ್ಳಲಿವೆ. ಪ್ರಮುಖ ಪ್ರವಾಸಿ ತಾಣಗಳಲ್ಲಿರುವ ಹೋಟೆಲ್‌ಗಳನ್ನು ಮೂಲಸೌಕರ್ಯಗಳ ಪಟ್ಟಿಯಲ್ಲಿ ಸೇರಿಸಲಾಗುವುದು ಮತ್ತು ಅವುಗಳ ಅಭಿವೃದ್ಧಿಗೆ ನೆರವು ನೀಡಲಾಗುವುದು’ ಎಂದರು.

ಇತರ ಕ್ರಮಗಳು

- ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಆಯ್ದ ಪ್ರವಾಸಿ ಗುಂಪುಗಳಿಗೆ ವ್ಯವಸ್ಥಿತ ಇ-ವೀಸಾ ಸೌಲಭ್ಯಗಳು ಮತ್ತು ವೀಸಾ ಶುಲ್ಕ ವಿನಾಯಿತಿಗಳನ್ನು ಸರ್ಕಾರ ನೀಡಲಿದೆ
- ‘ಹೀಲ್ ಇನ್ ಇಂಡಿಯಾ’ ಉಪಕ್ರಮದಡಿ ಮೆಡಿಕಲ್ ಟೂರಿಸಂಗೆ ಇನ್ನಷ್ಟು ಉತ್ತೇಜನ
- ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಳ್ಳಲಾಗಿರುವ ‘ಪ್ರಸಾದ್’ (ಪಿಲಿಗ್ರಿಮೇಜ್ ರಿಜುವೆನೇಷನ್ ಆ್ಯಂಡ್ ಸ್ಪಿರಿಚುಯಲ್ ಆಗ್‌ಮೆಂಟೇಷನ್ ಡ್ರೈವ್) ಯೋಜನೆಗೆ ಹೆಚ್ಚಿನ ಅನುದಾನ
- ಸ್ಪೇನ್, ಚೀನಾ, ಫ್ರಾನ್ಸ್ ಸೇರಿದಂತೆ ಕೆಲವು ದೇಶಗಳಲ್ಲಿ ಭಾರತದ ಪ್ರವಾಸೋದ್ಯಮದ ಬಗ್ಗೆ ಅಭಿಯಾನ ಕೈಗೊಳ್ಳಲು ಯೋಜನೆ
- ಪ್ರವಾಸಿ ತಾಣಗಳಲ್ಲಿ ಸುರಕ್ಷಿತ ಮತ್ತು ಮಹಿಳಾ ಸ್ನೇಹಿ ವಾತಾವರಣವನ್ನು ಸೃಷ್ಟಿಸುವ ಗುರಿ

ರಾಜ್ಯಗಳಿಗೆ ತೆರಿಗೆ ಹಂಚಿಕೆ: ಕರ್ನಾಟಕಕ್ಕೆ ಸಿಕ್ಕಿದ್ದೆಷ್ಟು...

ಕೇಂದ್ರ ಸರ್ಕಾರವು ರಾಜ್ಯಗಳಿಂದ ಮತ್ತು ವಿವಿಧ ಮೂಲಗಳಿಂದ ಸಂಗ್ರಹಿಸುವ ಒಟ್ಟು ತೆರಿಗೆ ಆದಾಯದಲ್ಲಿ ರಾಜ್ಯಗಳಿಗೆ ಸ್ವಲ್ಪ ಪ್ರಮಾಣವನ್ನು ಹಂಚುತ್ತದೆ. 2025–26ನೇ ಸಾಲಿನಲ್ಲಿ ಅತಿಹೆಚ್ಚು ಅನುದಾನ ಪಡೆದ ರಾಜ್ಯಗಳು ಮತ್ತು ಕರ್ನಾಟಕಕ್ಕೆ ದೊರೆತ ತೆರಿಗೆ ಪಾಲಿನಲ್ಲಿ ಭಾರಿ ವ್ಯತ್ಯಾಸವಿದೆ



ಘೋಷಿಸಿದ್ದ ಅನುದಾನ ನೀಡದ ಕೇಂದ್ರ

ಹಣಕಾಸು ಆಯೋಗದ ಶಿಫಾರಸಿನ ಅನ್ವಯ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸಹಾಯಾನುದಾನ ನೀಡಬೇಕು. ಅದರಂತೆ 2024–25ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಭಾರಿ ಮೊತ್ತದ ಸಹಾಯಾನುದಾನವನ್ನು ಘೋಷಿಸಿತ್ತು. ಆದರೆ ಆರ್ಥಿಕ ವರ್ಷದ ಅಂತ್ಯದ ವೇಳೆಯಲ್ಲೂ ಪೂರ್ಣ ಪ್ರಮಾಣದ ಅನುದಾನವನ್ನು ನೀಡಿಲ್ಲ. ಜತೆಗೆ ಪರಿಷ್ಕೃತ ಬಜೆಟ್‌ನಲ್ಲಿ ಅನುದಾನವನ್ನು ಕಡಿತ ಮಾಡಿದೆ. ಕೇಂದ್ರ ಹಣಕಾಸು ಸಚಿವಾಲಯವು ಬಜೆಟ್ ದಾಖಲೆಗಳಲ್ಲೇ ಈ ದತ್ತಾಂಶವನ್ನು ನಮೂದಿಸಿದೆ. ಈ ಸಹಾಯಾನುದಾನದಲ್ಲಿ ಕರ್ನಾಟಕಕ್ಕೂ ಪಾಲಿದ್ದು, ರಾಜ್ಯವು ಅದರಿಂದ ವಂಚಿತವಾಗಿದೆ.

₹46,822 ಕೋಟಿ ಕರ್ನಾಟಕವೂ ಸೇರಿ ಎಲ್ಲ ರಾಜ್ಯಗಳಿಗೆ ಖೋತಾ ಆದ ಅನುದಾನದ ಮೊತ್ತ



ಪ್ರಾದೇಶಿಕ ಭದ್ರತಾ ಸವಾಲುಗಳ ಮಧ್ಯೆ ಸೇನೆಯ ಆಧುನೀಕರಣಕ್ಕೆ ಸರ್ಕಾರ ಒತ್ತು

ರಕ್ಷಣೆ, ಅರೆಸೇನೆಗೆ ₹6.81 ಲಕ್ಷ ಕೋಟಿ

ಚೀನಾ ಮತ್ತು ಪಾಕಿಸ್ತಾನದಿಂದಾಗಿ ಕ್ಷಿಪ್ರವಾಗಿ ಹೆಚ್ಚುತ್ತಿರುವ ಪ್ರಾದೇಶಿಕ ಭದ್ರತಾ ಸವಾಲುಗಳ ನಡುವೆ ಕೇಂದ್ರ ಸರ್ಕಾರವು ಸೇನೆಯ ಆಧುನೀಕರಣದ ಮೇಲೆ ಗಮನ ಕೇಂದ್ರೀಕರಿಸಿದೆ. ಹಾಗಾಗಿ, ಈ ಬಾರಿಯ ಬಜೆಟ್‌ನಲ್ಲಿ ರಕ್ಷಣೆ, ಅರೆಸೇನೆ ವೆಚ್ಚಕ್ಕೆ ₹6,81,210 ಕೋಟಿ ಮೀಸಲಿರಿಸಿದೆ. ಕಳೆದ ಬಾರಿಗೆ ಹೋಲಿಸಿದರೆ, ಶೇ 9.53ರಷ್ಟು ಅನುದಾನವನ್ನು ಹೆಚ್ಚಿಸಿದೆ.

ಹೊಸ ಶಸ್ತ್ರಾಸ್ತ್ರಗಳು, ವಿಮಾನಗಳು, ಯುದ್ಧ ನೌಕೆಗಳು ಹಾಗೂ ಇತರ ಸೇನಾ ಉಪಕರಣಗಳ ಖರೀದಿಯು ಒಳಗೊಂಡಿರುವ ಬಂಡವಾಳ ವೆಚ್ಚವಾಗಿ ₹1,92 ಕೋಟಿ ಮೀಸಲಿಟ್ಟಿದ್ದು, ಇದರಲ್ಲಿ ರಕ್ಷಣಾ ಸೇವೆಗಳಿಗಾಗಿ ₹12,387 ತೆಗೆದಿರಿಸಲಾಗಿದೆ.

2024-25ರಲ್ಲಿ ಬಂಡವಾಳ ಹೂಡಿಕೆಯಾಗಿ ₹1.72 ಲಕ್ಷ ಕೋಟಿ ಮೀಸಲಿಡಲಾಗಿತ್ತು. ಅದರಲ್ಲಿ ಸುಮಾರು ₹13,500 ಕೋಟಿ ಇನ್ನೂ ಖರ್ಚಾಗಿಲ್ಲ. ಪರಿಷ್ಕೃತ ಅಂದಾಜಿನ ಪ್ರಕಾರ ಅದು ₹1.59 ಲಕ್ಷ ಕೋಟಿ ಆಗಿದೆ.

ಬಂಡವಾಳ ವೆಚ್ಚದ ಅಡಿಯಲ್ಲಿ ವಿಮಾನ ಮತ್ತು ಏರೋ ಎಂಜಿನ್‌ಗಳಿಗೆ ₹48,614 ಕೋಟಿ, ನೌಕಾಪಡೆಗೆ ₹24,390 ಕೋಟಿ, ಇತರೆ ಉಪಕರಣಗಳ ಖರೀದಿಗೆ ₹63,099 ಕೋಟಿ ಮೀಸಲಿಡಲಾಗಿದೆ. ಅಲ್ಲದೆ, ನೌಕಾನೆಲೆ ಯೋಜನೆಗಳಿಗೆ ಪ್ರತ್ಯೇಕವಾಗಿ ₹4,500 ಕೋಟಿ ಮೀಸಲಿರಿಸಲಾಗಿದೆ.

ಯಾವ ಪಡೆಗೆ ಎಷ್ಟು ಅನುದಾನ (₹ಕೋಟಿಗಳಲ್ಲಿ)

ಸಿಆರ್‌ಪಿಎಫ್	35,147	ಬಿಎಸ್‌ಎಫ್	28,231
ಸಿಐಎಸ್‌ಎಫ್	16,084	ಐಟಿಬಿಪಿ	10,370

ಸೇನಾ ಆಧುನೀಕರಣ ಬಜೆಟ್‌ನ ಶೇಕಡಾ 75ರಷ್ಟು ಹಣವನ್ನು ಅಂದರೆ, ₹1.11 ಲಕ್ಷ ಕೋಟಿಗಳನ್ನು ದೇಶೀಯವಾಗಿಯೇ ಶಸ್ತ್ರಾಸ್ತ್ರಗಳನ್ನು ಖರೀದಿಸಲು ಮೀಸಲಿಡಲಾಗಿದೆ. ಇದರಲ್ಲಿ ಶೇ 25ರಷ್ಟನ್ನು ಸ್ವದೇಶಿ ಖಾಸಗಿ ರಕ್ಷಣಾ ಉದ್ಯಮಗಳಿಂದ ಸೇನಾ ಉಪಕರಣಗಳ ಖರೀದಿಗೆ ಮೀಸಲಿರಿಸಲಾಗಿದೆ.

ಗಡಿಯಲ್ಲಿನ ಮೂಲಸೌಕರ್ಯ ಸುಧಾರಿಸಲು ಮತ್ತು ದುರ್ಗಮ ಭೂಪ್ರದೇಶಗಳಲ್ಲೂ ಸಶಸ್ತ್ರ ಪಡೆಗಳು ಸುಗಮವಾಗಿ ಕಾರ್ಯಾಚರಣೆ ನಡೆಸಲು ಬಂಡವಾಳ ವೆಚ್ಚದಡಿ ಗಡಿ ರಸ್ತೆಗಳ ಸಂಸ್ಥೆಗೆ (ಬಿಆರ್‌ಒ) ₹ 7,146 ಕೋಟಿ ಅನುದಾನ ನೀಡಲಾಗಿದೆ.

ಡಿಆರ್‌ಡಿಒಗೂ ಅನುದಾನ ಹೆಚ್ಚಳ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೆ (ಡಿಆರ್‌ಡಿಒ) ಅನುದಾನ ಹೆಚ್ಚಿಸಿದ್ದು, ಈ ಬಾರಿ ₹26,816 ಕೋಟಿ ನೀಡಲಾಗಿದೆ. ಕಳೆದ ಬಾರಿ ₹23,855 ಕೋಟಿ ನೀಡಲಾಗಿತ್ತು.

ಇದರಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಬಂಡವಾಳ ವೆಚ್ಚಕ್ಕಾಗಿ ₹14,923 ಕೋಟಿ ನಿಗದಿಪಡಿಸಲಾಗಿದೆ. ಇದು ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವಲ್ಲಿ ಡಿಆರ್‌ಡಿಒ ಅನ್ನು ಆರ್ಥಿಕವಾಗಿ ಬಲಪಡಿಸಲಿದೆ.

ಕಳೆದ ವರ್ಷದ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ₹ 6,21,940 ಕೋಟಿ ಇಡಲಾಗಿತ್ತು.

‘ವಿಕಸಿತ ಭಾರತ’ಕ್ಕೆ ದೊಡ್ಡ ಜಿಗಿತವಿದು: ರಕ್ಷಣಾ ಕ್ಷೇತ್ರಕ್ಕೆ ಹಂಚಿಕೆ ಮಾಡಿರುವ ಅನುದಾನದ ಬಗ್ಗೆ ಪ್ರತಿಕ್ರಿಯಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ರಕ್ಷಣಾ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಯಾಗಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಗೆ ದೊಡ್ಡ ಉತ್ತೇಜನ ಸಿಕ್ಕಿದೆ ಎಂದು ಹೇಳಿದ್ದಾರೆ.

ನಮ್ಮ ರಕ್ಷಣಾ ಪಡೆಗಳ ಆಧುನೀಕರಣ, ತಾಂತ್ರಿಕ ಪ್ರಗತಿ ಮತ್ತು ಸಾಮರ್ಥ್ಯ ವೃದ್ಧಿಗೆ ಮತ್ತಷ್ಟು ನೆರವಾಗಲಿದೆ. ಈ ಬಜೆಟ್ ಭದ್ರತೆಯನ್ನು ಮತ್ತಷ್ಟು ಬಲಪಡಿಸುತ್ತದೆ. ‘ವಿಕಸಿತ ಭಾರತ’ ಕಲ್ಪನೆ ಸಾಕಾರಗೊಳಿಸುವಲ್ಲಿ ದೊಡ್ಡ ಜಿಗಿತವೆನಿಸಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಗೃಹ ವ್ಯವಹಾರಗಳಿಗೆ ₹2.33 ಲಕ್ಷ ಕೋಟಿ

ಬಜೆಟ್‌ನಲ್ಲಿ ಗೃಹ ಸಚಿವಾಲಯಕ್ಕೆ ₹2.33 ಲಕ್ಷ ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಬಹುಪಾಲು ನಿಧಿ ₹1.60 ಲಕ್ಷ ಕೋಟಿಗಳನ್ನು ಆಂತರಿಕ ಭದ್ರತೆ ಮತ್ತು ಗಡಿ ರಕ್ಷಣೆ ನಿಭಾಯಿಸುವ ಸಿಆರ್‌ಪಿಎಫ್, ಬಿಎಸ್‌ಎಫ್ ಹಾಗೂ ಸಿಐಎಸ್‌ಎಫ್‌ನಂತಹ ಕೇಂದ್ರೀಯ ಪಡೆಗಳಿಗೆ ನೀಡಲಾಗುತ್ತಿದೆ. ಕಳೆದ ಬಾರಿ ಗೃಹ ಸಚಿವಾಲಯಕ್ಕೆ ₹2.19 ಲಕ್ಷ ಕೋಟಿ ನೀಡಲಾಗಿತ್ತು.

ಗಡಿ ಮೂಲಸೌಕರ್ಯ ಮತ್ತು ನಿರ್ವಹಣೆಗೆ ₹5,597 ಕೋಟಿ, ಪೊಲೀಸ್ ಮೂಲಸೌಕರ್ಯ ಅಭಿವೃದ್ಧಿಗೆ ₹4,379 ಕೋಟಿ, ಮಹಿಳಾ ಸುರಕ್ಷತೆಗೆ ಸಂಬಂಧಿಸಿದ ಯೋಜನೆಗಳಿಗೆ ₹960 ಕೋಟಿ, ಕೇಂದ್ರೀಯ ವಲಯದ ವಿವಿಧ ಯೋಜನೆಗಳು ಮತ್ತು ಸಚಿವಾಲಯ ಪ್ರಾಯೋಜಿತ ಯೋಜನೆಗಳಿಗೆ ₹12,491 ಕೋಟಿ, ಭದ್ರತೆಗೆ ಸಂಬಂಧಿಸಿದ ವೆಚ್ಚಕ್ಕಾಗಿ ₹ 4,876 ಕೋಟಿ ಮತ್ತು ವೈಬ್ರೆಂಟ್ ವಿಲೇಜಸ್ ಕಾರ್ಯಕ್ರಮಕ್ಕಾಗಿ ₹ 1,056 ಕೋಟಿ ಹಂಚಿಕೆ ಮಾಡಲಾಗಿದೆ.

ವಸತಿ ನಿರ್ಮಾಣ ₹15,000 ಕೋಟಿ ಅನುದಾನ

ವಸತಿ ನಿರ್ಮಾಣ ಯೋಜನೆಗಳ ವಿಳಂಬ ತಡೆಯಲು ಕೇಂದ್ರ ಸರ್ಕಾರವು 2019ರಲ್ಲಿ ಕೈಗೆಟುಕುವ ದರದ ಮನೆಗಳ ವಿಶೇಷ ನಿಧಿಯನ್ನು (ಎಸ್‌ಡಬ್ಲ್ಯುಎ-ಎಂಐಎಚ್) ಸ್ಥಾಪಿಸಿತ್ತು. ಅದು ಯಶಸ್ವಿಯಾಗಿರುವುದರಿಂದ ಈ ಬಜೆಟ್‌ನಲ್ಲಿ ಎಸ್‌ಡಬ್ಲ್ಯುಎ-ಎಂಐಎಚ್–2 ನಿಧಿ ಸ್ಥಾಪಿಸುವ ಘೋಷಣೆ ಮಾಡಲಾಗಿದೆ.

‘ಈ ಯೋಜನೆ ಯಶಸ್ವಿಯಾಗಿರುವುದರಿಂದ ಹೊಸ ನಿಧಿ ಸ್ಥಾಪಿಸಲಾಗುವುದು. ₹15 ಸಾವಿರ ಕೋಟಿ ಮೊತ್ತದ ಈ ನಿಧಿಯನ್ನು ಬಳಸಿ ಸುಮಾರು ಒಂದು ಲಕ್ಷ ಮನೆಗಳ ನಿರ್ಮಾಣ ಕೆಲಸ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ’ ಎಂದು ಹಣಕಾಸು ಸಚಿವರು ಹೇಳಿದರು.

ಅಪೂರ್ಣಗೊಂಡಿದ್ದ 50 ಸಾವಿರ ಮನೆಗಳನ್ನು ಕಳೆದ ಐದು ವರ್ಷಗಳಲ್ಲಿ ಈ ನಿಧಿಯಡಿ ನೆರವು ಪಡೆದು ಪೂರ್ಣಗೊಳಿಸಲಾಗಿದೆ. ಮನೆ ಖರೀದಿಸಿದವರಿಗೆ ಕೀಗಳನ್ನು ಹಸ್ತಾಂತರಿಸಲಾಗಿದೆ. 2025ರಲ್ಲಿ ಇನ್ನೂ 40 ಸಾವಿರ ಮನೆಗಳ ನಿರ್ಮಾಣ ಕೆಲಸ ಪೂರ್ಣಗೊಳಿಲಾಗುವುದು ಎಂದು ಮಾಹಿತಿ ನೀಡಿದರು.

ಕೈಗೆಟುಕುವ ದರದಡಿ ಮನೆಗಳ ನಿರ್ಮಾಣ ಪೂರ್ಣಗೊಳಿಸಲು ಈ ನಿಧಿಯಡಿ ಡೆವಲಪರ್‌ಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

ಪರಿಶಿಷ್ಟರು, ಅಲ್ಪಸಂಖ್ಯಾತರ ಅನುದಾನ ಇಳಿಕೆ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಧಾರ್ಮಿಕ–ಭಾಷಿಕ ಅಲ್ಪಸಂಖ್ಯಾತ ಸಮುದಾಯಗಳ ಕಲ್ಯಾಣಕ್ಕೆ ಈ ಹಿಂದೆ ನೀಡಿದ್ದಕ್ಕಿಂತ ಕಡಿಮೆ ಅನುದಾನವನ್ನು ಈ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹಿಂದಿನ ಬಜೆಟ್‌ನಲ್ಲಿ ದೊಡ್ಡ ಮೊತ್ತ ಘೋಷಿಸಿದ್ದರೂ, ಅದನ್ನು ಪೂರ್ಣ ಪ್ರಮಾಣದಲ್ಲಿ ನೀಡಿಲ್ಲ

ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗಕ್ಕೆ ಅನುದಾನ

₹70.79 ಕೋಟಿ
2024–25ನೇ ಪರಿಷ್ಕೃತ ಅಂದಾಜು

₹41 ಕೋಟಿ
2025–26ರ ಬಜೆಟ್

ಅಲ್ಪಸಂಖ್ಯಾತರ ಶಿಕ್ಷಣ, ಸಬಲೀಕರಣ

₹1,575.72 ಕೋಟಿ
2024–25ರ ಬಜೆಟ್

₹517.20 ಕೋಟಿ
2024–25ನೇ ಪರಿಷ್ಕೃತ ಅಂದಾಜು

₹678.03 ಕೋಟಿ
2025–26ರ ಬಜೆಟ್

ಪಿಎಂ ಆದಿ ಆದರ್ಶ ಗ್ರಾಮ ಯೋಜನೆ (ಪರಿಶಿಷ್ಟ ಪಂಗಡ)

₹1,000 ಕೋಟಿ
2024–25ರ ಬಜೆಟ್

₹127.51 ಕೋಟಿ
2024–25ನೇ ಪರಿಷ್ಕೃತ ಅಂದಾಜು

₹335 ಕೋಟಿ
2025–26ರ ಬಜೆಟ್

ವಿರೋಧ ಪಕ್ಷಗಳ ನಾಯಕರಿಂದ ಟೀಕೆ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶ್ಲಾಘನೆ

ಜನರನ್ನು ವಂಚಿಸಲು ಯತ್ನ

ಇಡೀ ದೇಶವೇ ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಗಳಿಂದ ಹೆಣಗಾಡುತ್ತಿರುವಾಗ ಮೋದಿ ಸರ್ಕಾರವು ತನ್ನ ಬಜೆಟ್ ಬಗ್ಗೆ ಹುಸಿ ಪ್ರಶಂಸೆ ಗಿಟ್ಟಿಸುವುದರಲ್ಲಿ ನಿರತವಾಗಿದೆ. ಆದರೆ, ಇದು ನಿಜಕ್ಕೂ ದೇಶದ ಜನರನ್ನು ವಂಚಿಸಲು ಯತ್ನಿಸಿರುವ ಬಜೆಟ್ ಎನಿಸಿದೆ. ‘ನೌ ಸೌ ಚೂಹೆ ಖಾಕೆ ಬಿಲ್ಲಿ ಹಜ್ ಕೋ ಚಲೀ’ (ಅನೇಕ ಪಾಪಗಳನ್ನು ಮಾಡಿದ ನಂತರ ಧರ್ಮನಿಷ್ಠರಾಗಿರಲು ಯತ್ನಿಸುವುದು) ಎಂಬ ಹಿಂದಿ ಗಾದೆಗೆ ಈ ಬಜೆಟ್ ಹೊಂದಿಕೆಯಾಗುತ್ತದೆ. ಮಹಿಳಾ ಸಬಲೀಕರಣಕ್ಕಾಗಿ ದೊಡ್ಡ ಹೆಜ್ಜೆ ಇಡುವುದಾಗಿ ಮೋದಿ ಜಿ ನಿನ್ನೆ ಭರವಸೆ ನೀಡಿದ್ದರು. ಆದರೆ ಬಜೆಟ್‌ನಲ್ಲಿ ಅಂತಹದ್ದೇನೂ ಆಗಲಿಲ್ಲ.

ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ನಿರಾಸೆ ಮೂಡಿಸಿದೆ

ಸಿರಿವಂತರ ಸಾಲ ಮನ್ನಾ ಮಾಡುವುದನ್ನು ಕೊನೆಗೊಳಿಸಿ, ಅದರಿಂದ ಉಳಿಯುವ ಹಣವನ್ನು ಮಧ್ಯಮ ವರ್ಗ ಮತ್ತು ರೈತರ ಕಲ್ಯಾಣಕ್ಕೆ ಬಜೆಟ್‌ನಲ್ಲಿ ವ್ಯಯಿಸುವಂತೆ ನಾನು ಸಲಹೆ ನೀಡಿದ್ದೆ. ಇದು ಈ ಬಾರಿ ಬಜೆಟ್‌ನಲ್ಲಿ ಕಾಣಿಸಲಿಲ್ಲ. ಖಜಾನೆಯ ಹೆಚ್ಚಿನ ಭಾಗವನ್ನು ಸಿರಿವಂತರ ಸಾಲ ಮನ್ನಾಗಳಿಗಾಗಿ ವ್ಯಯಿಸಲಾಗುತ್ತದೆ. ಇದು ಕೊನೆಗೊಳ್ಳಬೇಕೆಂಬುದು ನಮ್ಮ ಆಶಯವಾಗಿತ್ತು. ಆದರೆ, ಇದು ಈಡೇರಿಲ್ಲ. ಇದು ನನಗೆ ನಿರಾಶೆ ಮೂಡಿಸಿದೆ

ಅರವಿಂದ ಕೇಜ್ರಿವಾಲ್
ಎಎಪಿ ರಾಷ್ಟ್ರೀಯ ಸಂಚಾಲಕ

ಬಿಹಾರದ ಅಭಿವೃದ್ಧಿಗೆ ವೇಗ

ಬಜೆಟ್ ಪ್ರಗತಿಶೀಲ ಮತ್ತು ಭವಿಷ್ಯಕ್ಕೂ ಪೂರಕವಾಗಿದೆ. ಇದು ಬಿಹಾರದ ಬೆಳವಣಿಗೆಯನ್ನು ವೇಗಗೊಳಿಸಲು ನೆರವಾಗಲಿದೆ. ಪ್ರಧಾನಿ ಮೋದಿ ಮತ್ತು ಸಚಿವೆ ನಿರ್ಮಲಾ ಅವರಿಗೆ ಧನ್ಯವಾದ. ಫಾಕ್ಸ್‌ನಟ್ ಕೃಷಿಯಿಂದ ಬಿಹಾರ ವಿಶ್ವದಾದ್ಯಂತ ಹೆಸರುವಾಸಿಯಾಗಿದೆ. ಮಖಾನಾ ಮಂಡಳಿಯು ಫಾಕ್ಸ್‌ನಟ್ ಕೃಷಿ ಉತ್ತೇಜಿಸುತ್ತದೆ. ವಿಮಾನ ನಿಲ್ದಾಣಗಳು ರಾಜ್ಯದ ಭವಿಷ್ಯದ ಅಗತ್ಯಗಳನ್ನು ಪೂರೈಸುತ್ತವೆ. ಐಐಟಿ-ಪಟ್ನಾದ ಸಾಮರ್ಥ್ಯವನ್ನು ಹೆಚ್ಚಿಸುವ ನಿರ್ಧಾರದಿಂದ ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣಕ್ಕೆ ಹೆಚ್ಚು ಉತ್ತೇಜನ ಸಿಗಲಿದೆ

ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಪಕ್ಷಪಾತಿ; ನಿರೀಕ್ಷೆ ಹುಸಿ

ಬಜೆಟ್ ಪಕ್ಷಪಾತಿಯಾಗಿದೆ. ತಮಿಳುನಾಡನ್ನು ಸಂಪೂರ್ಣ ಕಡೆಗಣಿಸಲಾಗಿದೆ. ಜನರ ನಿರೀಕ್ಷೆಗಳನ್ನು ಹುಸಿಗೊಳಿಸಲಾಗಿದೆ. ಹಲವು ಬೇಡಿಕೆಗಳನ್ನು ಮುಂದಿಟ್ಟರೂ ಕನಿಷ್ಠ ಒಂದನ್ನಾದರೂ ಪರಿಗಣಿಸಿ ಬಜೆಟ್‌ನಲ್ಲಿ ಘೋಷಿಸುವ ಮನಸ್ಸು ಕೇಂದ್ರಕ್ಕೆ ಇಲ್ಲ. ಕೊನೆ ಪಕ್ಷ ತಮಿಳುನಾಡು ಹೆಸರನ್ನೂ ಉಲ್ಲೇಖಿಸಲಿಲ್ಲ. ಚುನಾವಣೆಗಳು ನಡೆಯಲಿರುವ ರಾಜ್ಯಗಳು ಅಥವಾ ಬಿಜೆಪಿ ಮಿತ್ರಪಕ್ಷಗಳ ಆಡಳಿತವಿರುವ ರಾಜ್ಯಗಳಿಗೆ ಮಾತ್ರ ಯೋಜನೆಗಳು ಮತ್ತು ಅನುದಾನ ಘೋಷಿಸಿದರೆ, ಅದನ್ನು ಏನೆಂದು ಕರೆಯಬೇಕು? ಇದು ‘ಕೇಂದ್ರ ಬಜೆಟ್ ಹೌದಾ?’

ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ

ಪಿಪಿಪಿಗೆ ಒತ್ತು, ಉದ್ಯೋಗ ಸೃಷ್ಟಿಗೆ ಬೇಕಿತ್ತು ಇನ್ನೂ ಸವಲತ್ತು

ವಿಶ್ಲೇಷಣೆ

ಮಾಲಿನಿ ಎಲ್. ತಂತ್ರಿ
ಸಿ. ನಳಿನ್ ಕುಮಾರ್

ಆದಾಯ ತೆರಿಗೆ ಮಿತಿಯಲ್ಲಿನ ಬದಲಾವಣೆಗಳ ಕಾರಣದಿಂದಾಗಿ 2025–26ನೇ ಹಣಕಾಸು ವರ್ಷದ ಕೇಂದ್ರ ಸರ್ಕಾರದ ಬಜೆಟ್ ದೇಶದ ಮಧ್ಯಮ ವರ್ಗದ ಜನರನ್ನೇ ಹೆಚ್ಚು ಕೇಂದ್ರೀಕರಿಸಿದೆ. ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿಗೆ ಹೆಚ್ಚು ಒತ್ತು ನೀಡುವ ಪ್ರಸ್ತಾವಗಳೂ ಬಜೆಟ್‌ನಲ್ಲಿವೆ. ಮೂಲಸೌಕರ್ಯ ಅಭಿವೃದ್ಧಿಗೂ ಧಾರಾಳವಾಗಿ ಅನುದಾನ ಒದಗಿಸುವ ಮೂಲಕ ಹೆಚ್ಚಿನ ಒತ್ತು ನೀಡಲಾಗಿದೆ. ಅನುದಾನ ಹಂಚಿಕೆಯು ಧಾರಾಳ ಅನಿಸಿದರೂ (ಕಳೆದ ವರ್ಷದ ₹11.11 ಲಕ್ಷ ಕೋಟಿಗೆ ಹೋಲಿಸಿದರೆ ಈ ವರ್ಷದ ₹ 11.21 ಲಕ್ಷ ಕೋಟಿ), ವಾಸ್ತವಿಕವಾಗಿ ಕಳೆದ ವರ್ಷಕ್ಕೆ ಹೋಲಿಸಿದರೆ ಹೆಚ್ಚೇನೂ ಬದಲಾವಣೆಗಳು ಇಲ್ಲ. ಇದು, ಒದಗಿಸಿದ ಅನುದಾನವನ್ನು ಸಮರ್ಪಕ ಮತ್ತು ಪರಿಣಾಮಕಾರಿಯಾಗಿ ಬಳಸುವುದರಲ್ಲಿ ಇರುವ ಸಾಮರ್ಥ್ಯದ ಕೊರತೆಯನ್ನು ಎತ್ತಿ ತೋರಿಸುತ್ತದೆ. ಸರ್ಕಾರದ ಪಾತ್ರವನ್ನು ಬಜೆಟ್‌ನಲ್ಲಿ ಒತ್ತಿ ಹೇಳಿದ್ದು, ಸಾಂಸ್ಥಿಕ ಗುಣಮಟ್ಟ ವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕ್ಷೇತ್ರದ ಸೇವೆಗಳ ವಿತರಣೆಯ ವಿಷಯಗಳಲ್ಲಿ ಇದು ಹೆಚ್ಚು ಅರ್ಥಪೂರ್ಣವಾದುದು.

ಮೂಲಸೌಕರ್ಯ ಅಭಿವೃದ್ಧಿಯ ವೇಗವನ್ನು ನಿರಂತರವಾಗಿ ಕಾಯ್ದುಕೊಳ್ಳುವುದು ಮತ್ತು ಸುಸ್ಥಿರ ನಿರ್ಮಾಣ ಪದ್ಧತಿಗಳನ್ನು ಉತ್ತೇಜಿಸುವ ಅಗತ್ಯವನ್ನು ಸರ್ಕಾರವು ಬಜೆಟ್‌ನಲ್ಲಿ ಗುರುತಿಸಿದೆ. ಆದರೆ, ಅನುಷ್ಠಾನದ ಹಂತದಲ್ಲಿ ಖಚಿತವಾದ ಮಾನದಂಡಗಳ ಅಗತ್ಯವೂ ಇದೆ ಎಂಬುದನ್ನು ಹೇಳಿದೆ. ಈ ಬಜೆಟ್‌ನಲ್ಲಿ ರಸ್ತೆಗಳು, ರೈಲ್ವೆ ಮತ್ತು ಸಂವಹನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅತಿ ಕಡಿಮೆ ಪ್ರಸ್ತಾಪವಿದೆ. ಕೊನೆಯ ಹಂತದ ಸಂಪರ್ಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಡೆಗಣಿಸಿದಂತಿದೆ. ಬಹು ಆಯಾಮದಲ್ಲಿ ಧನಾತ್ಮಕ ಪರಿಣಾಮ ಬೀರಬಲ್ಲ ಮೂಲಸೌಕರ್ಯ ಯೋಜನೆಗಳನ್ನು ಸರ್ಕಾರದಿಂದ ಅನುಷ್ಠಾನಗೊಳಿಸುವ ಘೋಷಣೆಗಳ ಜೊತೆಯಲ್ಲೇ ಸಾರ್ವಜನಿಕ– ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಯ ಯೋಜನೆಗಳ ಅನುಷ್ಠಾನಕ್ಕೆ ಹೆಚ್ಚಿನ ಉತ್ತೇಜನ ನೀಡುವ ಪ್ರಸ್ತಾವ ಈ ಬಜೆಟ್‌ನಲ್ಲಿದೆ.

2024–25ರ ಆರ್ಥಿಕ ಸಮೀಕ್ಷೆಯಲ್ಲಿ ಗುರುತಿಸಿದಂತೆ ಭಾರತವು ಜಗತ್ತಿನ ಉತ್ಪಾದನಾ ವಲಯದಲ್ಲಿ ಶೇಕಡ 2.8ರಷ್ಟು ಪಾಲು ಹೊಂದಿದ್ದು, ಇದೇ ಕ್ಷೇತ್ರದಲ್ಲಿ ಚೀನಾದ ಪಾಲು ಶೇ 28.8ರಷ್ಟಿದೆ. ಭಾರತವು ಈ ವಲಯದಲ್ಲಿ ಸಾಕಷ್ಟು ಎತ್ತರಕ್ಕೆ ಏರಲು ಅವಕಾಶಗಳಿವೆ. ನಿರಂತರ ಪೂರೈಕೆ ಜಾಲದಲ್ಲಿನ ಅಡೆತಡೆಗಳು, ರಾಜಕೀಯ ಅಸ್ಥಿರತೆ, ಮಾಲಿನ್ಯ ತಗ್ಗಿಸಲು ಇರುವ ಒತ್ತಡಗಳು, ಪುನರ್‌ಬಳಕೆ ಮಾಡಬಹುದಾದ ಸಂಪನ್ಮೂಲಗಳತ್ತ ಹೆಚ್ಚಿನ ಒತ್ತು, ಹೆಚ್ಚುತ್ತಿರುವ ಸಾಗಾಣಿಕೆ ವೆಚ್ಚ ಮತ್ತು ಪ್ರಾದೇಶಿಕ ಸಂಘರ್ಷಗಳ ದುಷ್ಪರಿಣಾಮಗಳೂ ಸೇರಿದಂತೆ ಹಲವು ಬಗೆಯ ಜಾಗತಿಕ ಸವಾಲುಗಳೂ ಇವೆ. ದೇಶೀಯವಾಗಿ ನಿಯಂತ್ರಣ ಕ್ರಮಗಳ ಸಡಿಲಿಕೆ, ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು, ಕೌಶಲ ಅಭಿವೃದ್ಧಿ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಕಾರ್ಯತಂತ್ರ, ಸಣ್ಣ ಉದ್ದಿಮೆಗಳ ಹೆಚ್ಚಿನ ಪ್ರೋತ್ಸಾಹ ನೀಡಬೇಕಾದ ಅಗತ್ಯವೂ ಇದೆ.

ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 26ರಷ್ಟು ಮಂದಿ 10ರಿಂದ 24ವರ್ಷ ವಯಸ್ಸಿನ ಮಧ್ಯದವರಾಗಿದ್ದು, ಅತ್ಯುತ್ತಮ ಮಾನವ ಸಂಪನ್ಮೂಲವನ್ನು ರೂಪಿಸಿಕೊಳ್ಳಬಹುದಾದ ಸುವರ್ಣಾವಕಾಶ ದೇಶದ ಮುಂದಿದೆ. ಉದ್ಯೋಗ ಸೃಷ್ಟಿ ಮತ್ತು ಉದ್ಯೋಗದ ಅರ್ಹತೆಯ ಖಾತರಿಗಳ ವಿಚಾರದಲ್ಲಿ ಎರಡು ಬಗೆಯ ನೀತಿಗಳ ಪ್ರಸ್ತಾಪ ಬಜೆಟ್‌ನಲ್ಲಿದೆ. ಆಟಿಕೆಗಳು, ಪಾದರಕ್ಷೆ ಮತ್ತು ಚರ್ಮೋದ್ಯಮ ಸೇರಿದಂತೆ ಕಾರ್ಮಿಕ ಕೇಂದ್ರಿತ ಕೈಗಾರಿಕೆಗಳಿಗೆ ಹೆಚ್ಚಿನ ಒತ್ತು ನೀಡುವುದು ಅವುಗಳಲ್ಲಿ ಒಂದು. ಕೌಶಲ ಅಭಿವೃದ್ಧಿಯ ಮೂಲಕ ತನ್ನ ಮಾನವ ಸಂಪನ್ಮೂಲಕ್ಕೆ ಉದ್ಯೋಗದ ಅರ್ಹತೆಯನ್ನು ಖಾತರಿಪಡಿಸುವುದು ಎರಡನೆಯದ್ದು. 2014ರ ಆರಂಭವಾದ ಐದು ಐಐಟಿಗಳಲ್ಲಿ ಹೆಚ್ಚುವರಿ ಮೂಲಸೌಕರ್ಯ ಒದಗಿಸುವ ಘೋಷಣೆಯು ಈ ದಿಸೆಯಲ್ಲಿ ಉಲ್ಲೇಖಿಸಲೇಬೇಕಾದ ಕ್ರಮ. ಆದರೆ, ಈ ಕುರಿತಂತೆ ಯಾವುದೇ ಖಚಿತವಾದ ಮಾಹಿತಿಯನ್ನು ಬಜೆಟ್‌ನಲ್ಲಿ ಒದಗಿಸಿಲ್ಲ. ಇದೇ ಉದ್ದೇಶದಿಂದ ಕೌಶಲ ಅಭಿವೃದ್ಧಿಗೆ ಸಂಬಂಧಿಸಿದಂತೆ ಐದು ನ್ಯಾಷನಲ್ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭಿಸುವುದಾಗಿ ಹಣಕಾಸು ಸಚಿವರು 2024ರ ಜುಲೈನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಒಂದು ಕೋಟಿ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಯೋಜನೆಗೆ ಬಜೆಟ್‌ನಲ್ಲಿ ಒತ್ತು ನೀಡಿದ್ದು, ಇದರಿಂದ ಅವರ ಕೆಲಸದ ವಾತಾವರಣದಲ್ಲಿ ಸುಧಾರಣೆ ತರುವ ಗುರಿಯನ್ನು ಹೊಂದಿದೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು (ಎಂಎಸ್‌ಎಂಇ) ‘ಸೆಕೆಂಡ್ ಎಂಜಿನ್’ ಎಂದು ಪರಿಗಣಿಸಿ ಹಲವು ಉತ್ತೇಜನಗಳನ್ನು ಪ್ರಕಟಿಸಲಾಗಿದೆ. ಎಂಎಸ್‌ಎಂಇಗಳ ಹೂಡಿಕೆ ಮತ್ತು ವಹಿವಾಟಿನ ಮಿತಿಯನ್ನು ಅನುಕ್ರಮವಾಗಿ ಎರಡು ಮತ್ತು ಎರಡೂವರೆ ಪಟ್ಟು ಹೆಚ್ಚಿಸಲಾಗಿದೆ. ಸಾಲದ ಮಿತಿಯನ್ನು ₹5 ಕೋಟಿಯಿಂದ ₹10 ಕೋಟಿಗೆ ಏರಿಕೆ ಮಾಡಲಾಗಿದೆ. ಅತ್ಯುತ್ತಮವಾಗಿ ರಫ್ತು ಚಟುವಟಿಕೆ ನಡೆಸುವ ಎಂಎಸ್‌ಎಂಇಗಳಿಗೆ ನೀಡುವ ಅವಧಿ ಸಾಲದ ಮಿತಿಯನ್ನು ₹20 ಕೋಟಿಗೆ ಹೆಚ್ಚಿಸಲಾಗಿದೆ. ದಾಖಲೆಗಳ ನಿರ್ವಹಣೆಯಲ್ಲಿ ಏಕರೂಪತೆ ತರುವುದಕ್ಕಾಗಿ ಭಾರತ್ ಟ್ರೇಡ್ ನೆಟ್ ರೂಪಿಸುವಂತಹ ಉಪಕ್ರಮವನ್ನೂ ಘೋಷಿಸಲಾಗಿದೆ. ಪಾದರಕ್ಷೆ, ಚರ್ಮೋದ್ಯಮ ಮತ್ತು ಆಟಿಕೆ ಕ್ಷೇತ್ರಗಳಲ್ಲಿ ಉತ್ಪಾದನೆಯನ್ನು ಉತ್ತೇಜಿಸುವ ಘೋಷಣೆಗಳಿವೆ. ಆದರೆ, ಈ ಕುರಿತಂತೆ ಹೆಚ್ಚಿನ ಖಚಿತತೆ ಇನ್ನಷ್ಟೇ ದೊರಕಬೇಕಿದೆ.

ಬಿಹಾರದ ಹೊರತಾಗಿ ದೇಶದ ಯಾವುದೇ ರಾಜ್ಯಕ್ಕೂ ಕೈಗಾರಿಕಾ ಅಭಿವೃದ್ಧಿಗೆ ವಿಶೇಷವಾದ ನೆರವಿನ ಭರವಸೆ ದೊರಕಿಲ್ಲ. ಸುಲಲಿತ ವಹಿವಾಟಿನ ಅವಕಾಶಗಳ ಕುರಿತು ವಾಚ್ಯವಾದ ಘೋಷಣೆಗಳಿವೆ. ಅದಕ್ಕೆ ಪೂರಕವಾಗಿ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಘೋಷಿಸಲಾದ ಅನುದಾನವನ್ನು ಸದ್ಬಳಕೆ ಮಾಡಿ, ಸುಲಲಿತ ವಹಿವಾಟಿಗೆ ದೇಶವನ್ನು ಸಜ್ಜುಗೊಳಿಸಬೇಕಿದೆ.

ಲೇಖಕರು ಅನುಕ್ರಮವಾಗಿ ಐಸೆಕ್ ಮತ್ತು ಪಿಇಎಸ್ ವಿಶ್ವವಿದ್ಯಾಲಯಗಳ ಬೋಧಕರು



ಕೇಂದ್ರ ಬಜೆಟ್ 2025-26

ಪ್ರಜಾವಾಣಿ

ಬಡವರ ಹಿತದೃಷ್ಟಿಯಿಂದ ಮುಖ್ಯವಾಗಿ ಗ್ಯಾಸ್, ಪೆಟ್ರೋಲ್, ಡೀಸೆಲ್ ಬೆಲೆ ಇಳಿಸಬೇಕಾಗಿತ್ತು. ಆಹಾರ ಧಾನ್ಯ, ಅಡುಗೆ ಎಣ್ಣೆ ಸೇರಿದಂತೆ ಅಗತ್ಯ ವಸ್ತುಗಳ ದರ ಇಳಿಕೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದರಿಂದಾಗಿ ಬಡವರ ಬದುಕು ಇನ್ನಷ್ಟು ಸಂಕಷ್ಟಮಯವಾಗಲಿದೆ

ಟಿ.ತಿಪ್ಪೇಸ್ವಾಮಿ, ಆಟೊ ಚಾಲಕ, ಚಿತ್ರದುರ್ಗ

ಪ್ರಸಕ್ತ ಬಜೆಟ್ ನವ ಉದ್ಯಮಿಗಳಿಗೆ ಉತ್ತೇಜನ ನೀಡುತ್ತದೆ. ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಉದ್ಯಮ ಕ್ಷೇತ್ರಕ್ಕೆ ಸೆಳೆಯುವುದು ಅಲ್ಲದೇ ಹೊಸ ಉದ್ಯಮ ಆರಂಭಿಸುವವರಿಗೆ ₹2 ಕೋಟಿ ದೀರ್ಘಾವಧಿ ಸಾಲ ನೀಡಲು ಮುಂದಾಗಿದ್ದು ಸ್ವಾಗತಾರ್ಹ

ಎಸ್.ಪಿ.ಸಂಶಿಮಠ, ಉದ್ಯಮಿ, ಹುಬ್ಬಳ್ಳಿ

ಮಹಿಳೆಯರಿಗೆ ಸ್ವ ಉದ್ಯಮ ಪ್ರಾರಂಭಿಸಲು ₹2 ಕೋಟಿವರೆಗೆ ಸಾಲ, ಕ್ಯಾನ್ಸರ್ ಔಷಧಕ್ಕೆ ತೆರಿಗೆ ವಿನಾಯಿತಿ ನೀಡಿರುವುದು ಬಡ, ಮಧ್ಯಮ ವರ್ಗದವರಿಗೆ ತುಂಬಾ ಅನುಕೂಲವಾಗಿದೆ

ವಿದ್ಯಾ ಅಮಿನ್, ಉದ್ಯೋಗಿ, ಮಂಗಳೂರು

ಅಗತ್ಯ ವಸ್ತುಗಳಾದ ಎಲ್‌ಇಡಿ ಟಿವಿ, ವಿದ್ಯುತ್ ಚಾಲಿತ ವಾಹನಗಳು, ಮೊಬೈಲ್ ಫೋನ್, ಕ್ಯಾನ್ಸರ್ ಔಷಧ, ಚರ್ಮದ ಉತ್ಪನ್ನಗಳ ಬೆಲೆ ಇಳಿಕೆ ಮಾಡಿರುವುದು ಸ್ವಾಗತಾರ್ಹ. ₹12 ಲಕ್ಷ ತನಕ ತೆರಿಗೆ ವಿನಾಯಿತಿ ನೀಡಿದ್ದರಿಂದ ಮಧ್ಯಮ ವರ್ಗದ ಜನರಿಗೆ ಶಕ್ತಿ ತುಂಬಿದಂತಾಗಿದೆ

ಜಯಶ್ರೀ ಪಲ್ಯದ, ಗೃಹಿಣಿ, ಕೊಪ್ಪಳ

₹12 ಲಕ್ಷದವರೆಗೆ ಆದಾಯ ತೆರಿಗೆ ವಿನಾಯಿತಿಯಿಂದ ಮಧ್ಯಮ ವರ್ಗದವರಿಗೆ ಬಹಳ ಅನುಕೂಲವಾಗಲಿದೆ. 120 ಹೊಸ ವಿಮಾನನಿಲ್ದಾಣ ನಿರ್ಮಿಸುವ ಘೋಷಣೆ, ಹೋಂಸ್ಟೇಗಳಿಗೆ ಮುದ್ರಾ ಸಾಲ ಸೌಲಭ್ಯದಿಂದ ಪ್ರವಾಸೋದ್ಯಮದಲ್ಲಿ ಪ್ರಗತಿ ಕಾಣಬಹುದು. ಹಿರಿಯ ನಾಗರಿಕರಿಗೆ ಟಿಡಿಎಸ್ ಕಡಿತವನ್ನು ₹1 ಲಕ್ಷದವರಿಗೆ ಹೆಚ್ಚಿಸಿರುವುದು ಒಳ್ಳೆಯದು

ಕೆ.ಬಿ.ಲಿಂಗರಾಜು

ಅಧ್ಯಕ್ಷ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ

ಉದ್ಯೋಗ ಸೃಷ್ಟಿ, ಪ್ರವಾಸೋದ್ಯಮ, ಮತ್ಸ್ಯ ಉದ್ಯಮಕ್ಕೆ ಉತ್ತೇಜನ ಸಿಕ್ಕಿದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ತರಬೇತಿ ನೀಡಲು ಉದ್ದೇಶಿಸಿರುವುದು ಯುವಕರಿಗೆ ನೆರವಾಗಲಿದೆ. ಆದಾಯ ತೆರಿಗೆ ಮಿತಿ ಹೆಚ್ಚಳ ಮಾಡಿರುವುದು ಮಧ್ಯಮ ವರ್ಗಕ್ಕೆ ಅನುಕೂಲವಾಗಿದೆ

ಸುರೇಶ್, ಸಮಾಜ ಸೇವಕ, ಕುಣಿಗಲ್

ಭಾರಿ ಘೋಷಣೆ: ದಕ್ಕಿದ್ದು ಬೊಗಸೆಯಷ್ಟು

ವಿಷಯ	ಬಜೆಟ್‌ನಲ್ಲಿ ಘೋಷಣೆ	ಪರಿಷ್ಕೃತ ಅಂದಾಜು	ಅನುದಾನದಲ್ಲಿ ಖೋತಾ
ಸಹಾಯಧನ ಮತ್ತಿತರ ಆರ್ಥಿಕ ಸೇವೆಗಳು	₹63,318 ಕೋಟಿ	₹9,815 ಕೋಟಿ	₹53,503 ಕೋಟಿ
ನೀರು ಮತ್ತು ನೈರ್ಮಲ್ಯ	₹64,303 ಕೋಟಿ	₹21,260 ಕೋಟಿ	₹43,043 ಕೋಟಿ
ಸರ್ಕಾರದ ಇತರ ವೆಚ್ಚಗಳು	₹21.53 ಲಕ್ಷ ಕೋಟಿ	₹20.84 ಲಕ್ಷ ಕೋಟಿ	₹68,693 ಕೋಟಿ
ಒಟ್ಟು	₹22.80 ಲಕ್ಷ ಕೋಟಿ	₹21.15 ಲಕ್ಷ ಕೋಟಿ	₹1.65 ಲಕ್ಷ ಕೋಟಿ

ಎನ್‌ಡಿಎ ನೇತೃತ್ವದ ಕೇಂದ್ರ ಸರ್ಕಾರದ 2024–25ನೇ ಆರ್ಥಿಕ ವರ್ಷದ ಬಜೆಟ್‌ನಲ್ಲಿ ಹಲವು ವಲಯಗಳಿಗೆ ಅನುದಾನ ಘೋಷಿಸಿತ್ತು. ನಂತರ ಪರಿಷ್ಕೃತ ಅಂದಾಜನ್ನೂ ನೀಡಿತ್ತು. ಆದರೆ, ಆಯಾ ವಲಯಗಳಿಗೆ ಅಂತಿಮವಾಗಿ ದಕ್ಕಿದ್ದು ಮಾತ್ರ ಬೊಗಸೆಯಷ್ಟು. ಘೋಷಣೆ ಮೊತ್ತ, ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ದೊರಕಿದ್ದು ತೀರಾ ಕಡಿಮೆ ಎನ್ನುವ ಸ್ಥಿತಿ ಇದೆ. ಪರಿಷ್ಕೃತ ಅಂದಾಜು ಮತ್ತು ಅಂತಿಮವಾಗಿ ದೊರೆತ ಒಟ್ಟು ಅನುದಾನದಲ್ಲಿ ಶೇ 92.1ರಷ್ಟು ಕಡಿತ ಮಾಡಲಾಗಿದೆ

ಐಐಟಿಗೆ ಸೌಕರ್ಯ ಹೆಚ್ಚಳ • ಭಾಷಾ ಪುಸ್ತಕಗಳಿಗೆ ಡಿಜಿಟಲ್ ರೂಪ

ಸರ್ಕಾರಿ ಶಾಲೆಗಳಿಗೆ ಟಿಂಕರಿಂಗ್ ಲ್ಯಾಬ್, ಬ್ರಾಡ್‌ಬ್ಯಾಂಡ್ ಬಲ

ಸರ್ಕಾರದ 50 ಸಾವಿರ ಶಾಲೆಗಳಲ್ಲಿ ಟಿಂಕರಿಂಗ್ ಲ್ಯಾಬ್, ಪ್ರೌಢಶಾಲೆಗಳಿಗೆ ಬ್ರಾಡ್‌ಬ್ಯಾಂಡ್, ಭಾರತೀಯ ತಂತ್ರಜ್ಞಾನ ಸಂಸ್ಥೆಗಳಿಗೆ (ಐಐಟಿ) ಹೆಚ್ಚಿನ ಮೂಲ ಸೌಕರ್ಯ, ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳ ಹೆಚ್ಚಳ, ಶಿಕ್ಷಣಕ್ಕಾಗಿ ಕೃತಕ ಬುದ್ಧಿಮತ್ತೆ (ಎಐ) 'ಸೆಂಟರ್ ಆಫ್ ಎಕ್ಸಲೆನ್ಸ್' ಮತ್ತು ಭಾರತೀಯ ಭಾಷೆಗಳ ಪುಸ್ತಕಗಳಿಗೆ ಡಿಜಿಟಲ್ ರೂಪ ನೀಡಲು 'ಭಾರತೀಯ ಭಾಷಾ ಪುಸ್ತಕ' ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿ ಹಲವು ಹೊಸ ಕಾರ್ಯಕ್ರಮಗಳನ್ನು 2025–26ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಶಾಲಾ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಮುಂದಿನ ಐದು ವರ್ಷಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ 50 ಸಾವಿರ 'ಅಟಲ್ ಟಿಂಕರಿಂಗ್ ಲ್ಯಾಬ್'ಗಳನ್ನು ಸ್ಥಾಪಿಸಲಾಗುವುದು. ಅಲ್ಲದೆ ಎಲ್ಲ ಸರ್ಕಾರಿ ಪ್ರೌಢಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

'ಭಾರತೀಯ ಭಾಷಾ ಪುಸ್ತಕ': ಶಾಲೆ ಮತ್ತು ಉನ್ನತ ಶಿಕ್ಷಣಕ್ಕಾಗಿ ಡಿಜಿಟಲ್ ರೂಪದಲ್ಲಿ ಭಾರತೀಯ ಭಾಷಾ ಪುಸ್ತಕಗಳನ್ನು ಒದಗಿಸುವ ಯೋಜನೆ ಘೋಷಿಸಲಾಗಿದೆ. ವಿದ್ಯಾರ್ಥಿಗಳು ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನೆರವಾಗುವ ಗುರಿಯನ್ನು ಇದು ಹೊಂದಿದೆ. ಗ್ರಾಮೀಣ ಮತ್ತು ದೂರ ಪ್ರದೇಶಗಳಲ್ಲಿನ ಮಕ್ಕಳ ಉತ್ತಮ ಕಲಿಕೆಗೆ ಈ ಯೋಜನೆ ನೆರವಾಗಲಿದೆ.

ಐಐಟಿಗೆ ಬಲ: ದೇಶದ ಐದು ಐಐಟಿಗಳಿಗೆ ಹೆಚ್ಚುವರಿಯಾಗಿ ಮೂಲ ಸೌಕರ್ಯ ಕಲ್ಪಿಸುವುದರ ಜತೆಗೆ ಐಐಟಿ ಪಟ್ನಾವನ್ನು ವಿಸ್ತರಿಸುವ ಯೋಜನೆಯನ್ನು ಘೋಷಿಸಲಾಗಿದೆ.

'ಸೆಂಟರ್ ಆಫ್ ಎಕ್ಸಲೆನ್ಸ್'

ಶಿಕ್ಷಣಕ್ಕಾಗಿ ಕೃತಕ ಬುದ್ಧಿಮತ್ತೆಯಲ್ಲಿ (ಎಐ) 'ಸೆಂಟರ್ ಆಫ್ ಎಕ್ಸಲೆನ್ಸ್' ಅನ್ನು ₹500 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು. 2023ರ ಬಜೆಟ್‌ನಲ್ಲಿ ಕೃಷಿ, ಸುಸ್ಥಿರ ನಗರಗಳು ಮತ್ತು ಆರೋಗ್ಯಕ್ಕಾಗಿ ಎಐನಲ್ಲಿ 'ಸೆಂಟರ್ ಆಫ್ ಎಕ್ಸಲೆನ್ಸ್' ಸ್ಥಾಪನೆ ಕುರಿತು ಘೋಷಿಸಲಾಗಿತ್ತು.

'ದೇಶದ 23 ಐಐಟಿಗಳಲ್ಲಿ 10 ವರ್ಷಗಳಲ್ಲಿ ಶೇ100ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಅಂದರೆ 65,000 ಇದ್ದ ವಿದ್ಯಾರ್ಥಿಗಳ ಸಂಖ್ಯೆ 1.35 ಲಕ್ಷಕ್ಕೆ ಏರಿಕೆಯಾಗಿದೆ. 2014ರ ಬಳಿಕ ಆರಂಭವಾದ ಐದು ಐಐಟಿಗಳಲ್ಲಿ 6,500ಕ್ಕೂ ಹೆಚ್ಚಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲ ಆಗುವಂತೆ ಹೆಚ್ಚುವರಿ ಮೂಲ ಸೌಕರ್ಯ ಕಲ್ಪಿಸಲಾಗುವುದು. ಐಐಟಿ ಪಟ್ನಾದಲ್ಲಿನ ಹಾಸ್ಟೆಲ್ ಮತ್ತು ಇತರ ಸೌಕರ್ಯಗಳನ್ನು ವಿಸ್ತರಿಸಲಾಗುವುದು' ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

10 ಸಾವಿರ ಫೆಲೋಶಿಪ್: ಮುಂದಿನ ಐದು ವರ್ಷಗಳಲ್ಲಿ ಐಐಟಿ ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ತಂತ್ರಜ್ಞಾನ ಸಂಶೋಧನೆಗಾಗಿ 10,000 ಫೆಲೋಶಿಪ್‌ಗಳನ್ನು ನೀಡುವ ಯೋಜನೆಯನ್ನು ಪ್ರಕಟಿಸಲಾಗಿದೆ.

ರಾಷ್ಟ್ರೀಯ ಕೌಶಲ ಕೇಂದ್ರಗಳ ಸ್ಥಾಪನೆ: ಕೌಶಲ ಹೊಂದಿದ ಯುವ ಜನರನ್ನು ಸಜ್ಜುಗೊಳಿಸಲು ಜಾಗತಿಕ ಪರಿಣತಿ ಮತ್ತು ಸಹಭಾಗಿತ್ವದೊಂದಿಗೆ ಐದು ರಾಷ್ಟ್ರೀಯ ಕೌಶಲ ಕೇಂದ್ರಗಳನ್ನು ಸರ್ಕಾರ ಸ್ಥಾಪಿಸಲಿದ್ದು, ಪಠ್ಯಕ್ರಮ, ವಿನ್ಯಾಸ, ತರಬೇತಿ, ಕೌಶಲದ ಪ್ರಮಾಣೀಕರಣದ ಚೌಕಟ್ಟನ್ನು ಪಾಲುದಾರಿಕೆಯಲ್ಲಿ ರೂಪಿಸಲಾಗುತ್ತದೆ.

ವೈದ್ಯಕೀಯ ಸೀಟು ಹೆಚ್ಚಳ

ಮುಂದಿನ ವರ್ಷದಲ್ಲಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳಲ್ಲಿ ಹೆಚ್ಚುವರಿಯಾಗಿ 10,000 ಸೀಟುಗಳು ಹಾಗೂ ಮುಂದಿನ ಐದು ವರ್ಷಗಳಲ್ಲಿ ಹೆಚ್ಚುವರಿಯಾಗಿ 75 ಸಾವಿರ ವೈದ್ಯಕೀಯ ಸೀಟುಗಳನ್ನು ಹೊಂದುವ ಗುರಿಯನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

'ನಮ್ಮ ಸರ್ಕಾರವು 10 ವರ್ಷಗಳಲ್ಲಿ ಯು.ಜಿ ಮತ್ತು ಪಿ.ಜಿ ವೈದ್ಯಕೀಯ ಸೀಟುಗಳ ಸಂಖ್ಯೆಯನ್ನು 1.1 ಲಕ್ಷದಷ್ಟು ಹೆಚ್ಚಿಸಿದೆ. ಇದು ಶೇ 130ರಷ್ಟು ಹೆಚ್ಚಳವಾಗಿದೆ' ಎಂದು ಸಚಿವರು ಹೇಳಿದ್ದಾರೆ.

₹1.28 ಲಕ್ಷ ಕೋಟಿ ಶಿಕ್ಷಣ ಸಚಿವಾಲಯಕ್ಕೆ ಮೀಸಲಿಟ್ಟ ಹಣ

₹78,572 ಕೋಟಿ ಶಾಲಾ ಶಿಕ್ಷಣ ಇಲಾಖೆಗೆ

₹50,067 ಕೋಟಿ ಉನ್ನತ ಶಿಕ್ಷಣ ಇಲಾಖೆಗೆ

ಅಣುಶಕ್ತಿ ಯೋಜನೆಗೆ ₹20 ಸಾವಿರ ಕೋಟಿ



ಇಂಧನ ಪರಿವರ್ತನೆಯನ್ನು ಸಾಕಾರಗೊಳಿಸುವ ಉದ್ದೇಶದಿಂದ ₹20 ಸಾವಿರ ಕೋಟಿ ವೆಚ್ಚದ ಪರಮಾಣು ಶಕ್ತಿ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ವಿಕಸಿತ ಭಾರತಕ್ಕಾಗಿ ಈ ಘೋಷಣೆ ಮಾಡಿರುವ ನಿರ್ಮಲಾ ಸೀತಾರಾಮನ್, '2047ರ ವೇಳೆಗೆ ಕನಿಷ್ಠ 100 ಗಿಗಾ ವಾಟ್ ಪರಮಾಣು ಶಕ್ತಿ ಉತ್ಪಾದನಾ ಸಾಮರ್ಥ್ಯ ಹೊಂದಲಾಗುವುದು' ಎಂದು ಹೇಳಿದ್ದಾರೆ.

'ವಿದ್ಯುತ್ ಪರಿವರ್ತನೆಯ ಗುರಿಯನ್ನು ತಲುಪಲು ಇದು ಅಗತ್ಯವಾಗಿದ್ದು, ಖಾಸಗಿ ವಲಯದೊಂದಿಗೂ ಪಾಲುದಾರಿಕೆ ಹೊಂದಲಾಗುವುದು. ಅಣು ಶಕ್ತಿ ಕಾಯ್ದೆ ಮತ್ತು ಪರಮಾಣು ಹಾನಿ ಕಾಯ್ದೆಗೆ ತಿದ್ದುಪಡಿಗಳನ್ನು ತರಲಾಗುವುದು' ಎಂದು ಅವರು ಹೇಳಿದ್ದಾರೆ.

'₹20 ಸಾವಿರ ಕೋಟಿ ವೆಚ್ಚದಲ್ಲಿ ಸಂಶೋಧನೆ ಮತ್ತು ಸಣ್ಣ ಮಾದರಿ ಪರಮಾಣು ಸ್ಥಾವರಗಳನ್ನು (ಎಸ್‌ಎಂಆರ್) ಅಭಿವೃದ್ಧಿ ಪಡಿಸಲಾಗುವುದು. 2033ರ ವೇಳೆಗೆ ದೇಶೀಯವಾಗಿ ಅಭಿವೃದ್ಧಿ ಪಡಿಸಿರುವ ಕನಿಷ್ಠ ಐದು ಎಸ್‌ಎಂಆರ್‌ಗಳು ಕಾರ್ಯಾರಂಭ ಮಾಡಲಿವೆ' ಎಂದು ಅವರು ತಿಳಿಸಿದ್ದಾರೆ.

ಇಂಧನ ಕ್ಷೇತ್ರದ ಸುಧಾರಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಪ್ರಸ್ತಾಪಿಸಿರುವ ಅವರು, 'ವಿದ್ಯುತ್ ಸರಬರಾಜು ವ್ಯವಸ್ಥೆಯಲ್ಲಿ ಸುಧಾರಣೆ ತರುವುದಕ್ಕಾಗಿ ಸರ್ಕಾರ ಆರ್ಥಿಕವಾಗಿ ಪ್ರೋತ್ಸಾಹ ನೀಡಲಿದೆ ಮತ್ತು ರಾಜ್ಯಗಳ ಅಂತರರಾಜ್ಯ ಸಾಗಣೆ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು' ಎಂದು ಹೇಳಿದ್ದಾರೆ.

'ಇದು ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಸ್ಥಿತಿ ಮತ್ತು ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಜೊತೆಗೆ, ಆಯಾ ರಾಜ್ಯಗಳ ಆಂತರಿಕ ಉತ್ಪನ್ನದ ಶೇ 0.5ರಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಪಡೆಯಲು ರಾಜ್ಯಗಳಿಗೆ ಅವಕಾಶ ನೀಡಲಾಗುವುದು' ಎಂದು ನಿರ್ಮಲಾ ಹೇಳಿದ್ದಾರೆ.

2070ರ ವೇಳೆಗೆ ದೇಶದಲ್ಲಿ ಇಂಗಾಲ/ಹಸಿರು ಮನೆ ಅನಿಲಗಳ ಹೊರಸೂಸುವ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವ ಗುರಿಯನ್ನು ಭಾರತ ಹೊಂದಿದೆ. ದೇಶದಲ್ಲಿ ಸದ್ಯ ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲನ್ನೇ ಬಳಸಲಾಗು ತ್ತಿದೆ. ಪರಮಾಣು ಶಕ್ತಿಯು ಕಲ್ಲಿದ್ದಲಿಗೆ ಪರ್ಯಾಯವಾಗಿದ್ದು, ಪರಮಾಣು ಶಕ್ತಿಬಳಸಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುವುದು ಈಗಿನ ಅಗತ್ಯ ಎಂದು ಸರ್ಕಾರ ಹೇಳಿದೆ.

ಮಹಿಳೆಯರಿಗೆ, ಮಕ್ಕಳಿಗೆ ಇನ್ನಷ್ಟು 'ಶಕ್ತಿ'

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಈ ಬಜೆಟ್‌ನಲ್ಲಿ ₹26,889.69 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಕಳೆದ ವರ್ಷದ (2024–25) ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ (₹23,182.98) ₹3,706.71 ಕೋಟಿ ಜಾಸ್ತಿ ಮೀಸಲಿಡಲಾಗಿದೆ.

ಇಲಾಖೆಗೆ ಹಂಚಿಕೆ ಮಾಡಲಾದ ಒಟ್ಟಾರೆ ಹಣದಲ್ಲಿ ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಗಳು ಸಿಂಹಪಾಲನ್ನು ಪಡೆದಿವೆ. ಮಹಿಳೆಯರು ಮತ್ತು ಮಕ್ಕಳು ಎದುರಿಸುತ್ತಿರುವ ಅಪೌಷ್ಟಿಕತೆ ನೀಗಿಸಲು ಈ ಎರಡು ಯೋಜನೆಗಳನ್ನು ಜಾರಿಗೆ ತಂದಿದ್ದು, ಒಟ್ಟಾರೆ ₹21,690 ಕೋಟಿ ಹಣವನ್ನು ಇವು ಪಡೆದಿವೆ. ಕಳೆದ ವರ್ಷದ ಪರಿಷ್ಕೃತ ಅಂದಾಜಿನಲ್ಲಿ ಈ ಎರಡು ಯೋಜನೆಗಳಿಗೆ ₹20,070.90 ಕೋಟಿ ಹಂಚಿಕೆ ಮಾಡಲಾಗಿತ್ತು.

ದೇಶದಾದ್ಯಂತ ಹಿಂದುಳಿದ ಜಿಲ್ಲೆಗಳ ಮತ್ತು ಈಶಾನ್ಯ ಭಾಗದ 8 ಕೋಟಿ ಮಕ್ಕಳು, 1 ಕೋಟಿ ಗರ್ಭಿಣಿಯರು ಮತ್ತು ಬಾಣಂತಿಯರು ಹಾಗೂ 20 ಲಕ್ಷ ಹದಿಹರೆಯದ ಹೆಣ್ಣು ಮಕ್ಕಳಿಗೆ ಪೋಷಕಾಂಶಯುಕ್ತ ಆಹಾರವನ್ನು ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 ಯೋಜನೆಗಳು ಒದಗಿಸುತ್ತಿವೆ.

'ಪೌಷ್ಟಿಕತೆಗೆ ಸಂಬಂಧಿಸಿದ ಯೋಜನೆಗಳ ವೆಚ್ಚವನ್ನು ಅಗತ್ಯಕ್ಕೆ ತಕ್ಕಂತೆ ಹೆಚ್ಚಿಸಲಾಗುವುದು' ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

'ವಾತ್ಸಲ್ಯ'ಕ್ಕೂ ಒತ್ತು: ಮಕ್ಕಳ ರಕ್ಷಣಾ ಸೇವೆಗಳಿಗೆ ಗಮನ ನೀಡುವ 'ವಾತ್ಸಲ್ಯ' ಯೋಜನೆಗೆ ₹1,500 ಕೋಟಿ ಹಂಚಿಕೆ ಮಾಡಲಾಗಿದೆ. ಕಳೆದ ವರ್ಷ ₹1,391 ಕೋಟಿ ನೀಡಲಾಗಿತ್ತು.

ಮಹಿಳೆಯರ ಸಬಲೀಕರಣಕ್ಕಾಗಿ 'ಶಕ್ತಿ' ಯೋಜನೆಗೆ ₹3,150 ಕೋಟಿ ಮೀಸಲಿಡಲಾಗಿದೆ. ಇದರ ಅಡಿಯಲ್ಲಿ ಬರುವ ಸಂಬಲ್ ವಿಭಾಗಕ್ಕೆ ₹629 ಕೋಟಿ ಮತ್ತು ಸಾಮರ್ಥ್ಯ ವಿಭಾಗಕ್ಕೆ ₹2,521 ಕೋಟಿ ಹಂಚಿಕೆ ಮಾಡಲಾಗಿದೆ. ನಿರ್ಭಯ ನಿಧಿಯ ಅಡಿಯಲ್ಲಿ ಬರುವ ಇತರ ಯೋಜನೆಗಳಿಗಾಗಿ ₹30 ಕೋಟಿ ನೀಡಲಾಗಿದೆ.

ಜಿಲ್ಲಾ ಆಸ್ಪತ್ರೆಗಳಲ್ಲಿ 'ಡೇ ಕೇರ್ ಕ್ಯಾನ್ಸರ್' ಕೇಂದ್ರ

ಮುಂದಿನ ಮೂರು ವರ್ಷಗಳಲ್ಲಿ ದೇಶದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 'ಡೇ ಕೇರ್ ಕ್ಯಾನ್ಸರ್' ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಪೈಕಿ 2025–26ರಲ್ಲಿಯೇ 200 ಕೇಂದ್ರಗಳು ಆರಂಭವಾಗಲಿವೆ ಎಂದು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ವೈದ್ಯಕೀಯ ಪ್ರವಾಸೋದ್ಯಮ ಮತ್ತು 'ಹೀಲ್ ಇನ್ ಇಂಡಿಯಾ' ಕಾರ್ಯಕ್ರಮವನ್ನು ಖಾಸಗಿ ಸಹಭಾಗಿತ್ವದೊಂದಿಗೆ ಉತ್ತೇಜಿಸಲಾಗುವುದು. ಇದಕ್ಕಾಗಿ ಸುಲಭ ವೀಸಾ ನಿಯಮ ಜಾರಿಗೆ ತರಲಾಗುವುದು ಎಂದು ಹೇಳಲಾಗಿದೆ.

₹ 99,858 ಕೋಟಿ ಆರೋಗ್ಯ ಸಚಿವಾಲಯಕ್ಕೆ ಮಾಡಿದ ಹಂಚಿಕೆ

36 ಔಷಧಗಳಿಗೆ ಸುಂಕ ವಿನಾಯಿತಿ: 'ಕ್ಯಾನ್ಸರ್, ಅಪರೂಪದ ಕಾಯಿಲೆಗಳು ಮತ್ತು ತೀವ್ರತರವಾದ ದೀರ್ಘಕಾಲೀನ ರೋಗಗಳಿಂದ ಬಳಲುತ್ತಿರುವ ರೋಗಿಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ, ಮೂಲ ಕಸ್ಟಮ್ಸ್ ಸುಂಕದಿಂದ (ಬಿಸಿಡಿ) ಪೂರ್ಣ ವಿನಾಯಿತಿ ನೀಡಲಾದ ಔಷಧಗಳ ಪಟ್ಟಿಗೆ 36 ಜೀವರಕ್ಷಕ ಔಷಧಗಳನ್ನು ಸೇರಿಸಲಾಗುವುದು. ಆರು ಜೀವರಕ್ಷಕ ಔಷಧಗಳನ್ನು ಶೇ 5ರಷ್ಟು ರಿಯಾಯಿತಿ ಕಸ್ಟಮ್ಸ್ ಸುಂಕ ವಿಧಿಸುವ ಪಟ್ಟಿಗೆ ಸೇರಿಸಲಾಗುವುದು' ಎಂದು ಸಚಿವರು ಹೇಳಿದ್ದಾರೆ.

'ಔಷಧ ತಯಾರಿಕಾ ಕಂಪನಿಗಳು 'ರೋಗಿ ಸಹಾಯ ಕಾರ್ಯಕ್ರಮದಡಿ'ಯಲ್ಲಿ ಉತ್ಪಾದಿಸುವ ನಿರ್ದಿಷ್ಟ ಔಷಧಗಳಿಗೆ ಮೂಲ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ನೀಡಲಾಗುವುದು, ಆದರೆ ಇಂತಹ ಔಷಧಗಳು ರೋಗಿಗಳಿಗೆ ಉಚಿತವಾಗಿ ಪೂರೈಕೆಯಾಗುತ್ತಿರಬೇಕು. ಈ ಸುಂಕ ವಿನಾಯಿತಿಗೆ ಇನ್ನೂ 37 ಔಷಧಗಳು ಮತ್ತು 13 ಹೊಸ ರೋಗಿ ಸಹಾಯ ಕಾರ್ಯಕ್ರಮಗಳನ್ನು ಸೇರ್ಪಡೆ ಮಾಡಲಾ ಗುವುದು' ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಸ್ವಚ್ಛ ಭಾರತಕ್ಕೆ ₹12,192 ಕೋಟಿ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಸ್ವಚ್ಛ ಭಾರತ ಯೋಜನೆಗೆ ಈ ಬಜೆಟ್‌ನಲ್ಲಿ ₹12,192 ಕೋಟಿ ಅನುದಾನ ಮೀಸಲಿಡಲಾಗಿದೆ. ಕಳೆದ ವರ್ಷವೂ ಇಷ್ಟೇ ಮೊತ್ತವನ್ನು ಹಂಚಿಕೆ ಮಾಡಲಾಗಿತ್ತು. ಹಂಚಿಕೆ ಮಾಡಲಾದ ಅನುದಾನವನ್ನು ಗ್ರಾಮೀಣ ಪ್ರದೇಶ ಮತ್ತು ನಗರ ಪ್ರದೇಶ ಎಂದು ವಿಂಗಡಣೆ ಮಾಡಲಾಗಿದ್ದು, ಗ್ರಾಮೀಣ ಪ್ರದೇಶದ ಸ್ವಚ್ಛ ಭಾರತ ಯೋಜನೆಗೆ ₹7,192 ಕೋಟಿ ಮತ್ತು ನಗರ ಕೇಂದ್ರಿತ ಯೋಜನೆಗೆ ₹5,000 ಕೋಟಿ ಹಂಚಿಕೆ ಮಾಡಲಾಗಿದೆ.

ದೇಶವನ್ನು ಬಯಲು ಶೌಚಾಲಯ ಮುಕ್ತಗೊಳಿಸಬೇಕು ಎಂಬ ಉದ್ದೇಶದಿಂದ 2014ರ ಅಕ್ಟೋಬರ್ 2ರಂದು ಕೇಂದ್ರ ಸರ್ಕಾರ ಸ್ವಚ್ಛ ಭಾರತ ಯೋಜನೆಗೆ ಚಾಲನೆ ನೀಡಿತ್ತು.

'ಗಿಗ್' ಕಾರ್ಮಿಕರಿಗೆ ಭದ್ರತೆ

ಇ–ಕಾಮರ್ಸ್ ಕ್ಷೇತ್ರದಲ್ಲಿ ತೊಡಗಿರುವ ಒಂದು ಕೋಟಿ ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

'ಈ ಕಾರ್ಮಿಕರಿಗೆ ಗುರುತಿನ ಚೀಟಿಗಳನ್ನು ನೀಡಲಾಗುವುದು ಮತ್ತು ಇ–ಶ್ರಮ್ ಪೋರ್ಟಲ್‌ನಲ್ಲಿ ಅವರ ನೋಂದಣಿಗೂ ಕ್ರಮ ಕೈಗೊಳ್ಳಲಾಗುವುದು. ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆಯ ಅಡಿಯಲ್ಲಿ ಇವರಿಗೆ ಆರೋಗ್ಯ ಸೌಲಭ್ಯ ಒದಗಿಸಲಾಗುವುದು' ಎಂದು ನಿರ್ಮಲಾ ಹೇಳಿದ್ದಾರೆ.

ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರ ನೋಂದಣಿಗಾಗಿ ಇ–ಶ್ರಮ್ ಪೋರ್ಟಲ್ ಅನ್ನು 2021ರ ಆಗಸ್ಟ್‌ನಲ್ಲಿ ಆರಂಭಿಸಲಾಗಿತ್ತು. 2025ರ ಜನವರಿ 27ರವರೆಗೆ 30.58 ಕೋಟಿ ಕಾರ್ಮಿಕರು ಇದರಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ.

ಚಾಂಪಿಯನ್‌ಗಳ ಅನುಕೂಲಕ್ಕಾಗಿ ರೂಪಿಸಿದ ಬಜೆಟ್

ಬಜೆಟ್ ವಿಶ್ಲೇಷಣೆ

• ನಾಗೇಗೌಡ ಕೆ.ಎಸ್.

ಭಾರತದ ಆರ್ಥಿಕ ಕ್ಷೇತ್ರವು ಮೂರು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ. ಇಡೀ ದೇಶದ ಆರ್ಥಿಕ ವ್ಯವಸ್ಥೆಯನ್ನೇ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಹವಣಿಸುತ್ತಿರುವ ಬಲಾಢ್ಯ ಬಂಡವಾಳಶಾಹಿ 'ರಾಷ್ಟ್ರೀಯ ಚಾಂಪಿಯನ್' ಗಳಿಗೆ ಅನುಕೂಲವಾಗುವ ಆರ್ಥಿಕ ನೀತಿಗಳನ್ನಷ್ಟೇ ರೂಪಿಸಿ ಜಾರಿಗೆ ತರುವುದು ಮೊದಲನೆಯ ಸಮಸ್ಯೆ. ರಾಷ್ಟ್ರೀಯ ಚಾಂಪಿಯನ್‌ಗಳ ಲಾಭ ಹೆಚ್ಚಿಸಲು ಒಕ್ಕೂಟ ಸರ್ಕಾರ ರಕ್ಷಣಾತ್ಮಕ ವಿಧಾನಗಳನ್ನು ದಿನೇದಿನೇ ಹೆಚ್ಚು ಹೆಚ್ಚು ಬೆಳೆಸಿಕೊಳ್ಳುತ್ತಿರುವುದು ಎರಡನೆಯ ಸಮಸ್ಯೆ. ರಾಷ್ಟ್ರೀಯ ಚಾಂಪಿಯನ್‌ಗಳಾಚೆ ಬಂಡವಾಳವನ್ನು ಆಕರ್ಷಿಸಲು ಸಮರ್ಪಕ ತಂತ್ರವನ್ನು ಅಳವಡಿಸಿಕೊಳ್ಳಲು ಹಿಂಜರಿಯುತ್ತಿ ರುವುದು ಮೂರನೆಯ ಸಮಸ್ಯೆ.

ಈ ಸಾಲಿನ ಬಜೆಟ್‌ನಲ್ಲಿ ಮೇಲೆ ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಲು ಯಾವುದೇ ರೀತಿಯ ಕ್ರಮಗಳನ್ನು ಕೈಗೊಂಡಿಲ್ಲ. ಇದರ ಪರಿಣಾಮ ಮುಂದಿನ ವರ್ಷಗಳಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಬೆಳವಣಿಗೆಯಲ್ಲಿ ನಿರೀಕ್ಷೆಯಷ್ಟು ಏರಿಕೆ ಆಗದಿರಬಹುದು. ಈ ಹಿನ್ನೆಲೆಯಲ್ಲಿ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿರುವ ಅನುದಾನವನ್ನು ಗಮನಿಸಬೇಕಿದೆ.

ಬಜೆಟ್‌ನ ಕ್ಷೇತ್ರವಾರು ಹಂಚಿಕೆ: ಗ್ರಾಮೀಣಾಭಿವೃದ್ಧಿ ಕ್ಷೇತ್ರಕ್ಕೆ 2018–19ರಲ್ಲಿ ಕೇಂದ್ರ ಸರ್ಕಾರದ ಒಟ್ಟು ಬಜೆಟ್ ಗಾತ್ರದ ಶೇಕಡ 6.3ರಷ್ಟು ಅನುದಾನವನ್ನು ಒದಗಿಸಲಾಗಿತ್ತು. ಈ ವರ್ಷದ ಬಜೆಟ್‌ನಲ್ಲಿ ಅದು ಶೇ 5.26ಕ್ಕೆ ಕುಸಿದಿದೆ. ಶಿಕ್ಷಣಕ್ಕೆ 2018–19ರಲ್ಲಿ ಶೇ 3.75ರಷ್ಟು ಅನುದಾನ ಮೀಸಲಿಡಲಾಗಿತ್ತು. ಈ ಬಾರಿ ಅದನ್ನು ಶೇ 2.53ಕ್ಕೆ ಇಳಿಸಲಾಗಿದೆ. ಸಮಾಜ ಕಲ್ಯಾಣಕ್ಕೆ ಮೀಸಲಿಟ್ಟ ಅನುದಾನ ಶೇ 1.75ರಿಂದ ಶೇ 1.18ಕ್ಕೆ ಮತ್ತು ಆರೋಗ್ಯ ಕ್ಷೇತ್ರಕ್ಕೆ ಮೀಸಲಿಟ್ಟ ಅನುದಾನ ಶೇ 2.47ರಿಂದ ಶೇ 1.94ಕ್ಕೆ ಇಳಿಕೆ ಮಾಡಲಾಗಿದೆ.

ಕಳೆದ ಆರೇಳು ವರ್ಷಗಳಿಂದ ಕೇಂದ್ರ ಸರ್ಕಾರ ಯಾವ ರೀತಿಯಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರವನ್ನು ಕಡೆಗಣಿಸುತ್ತಿದೆ ಎಂಬುದು ಮೇಲಿನ ಅಂಕಿಅಂಶ ಗಳನ್ನು ಗಮನಿಸಿದರೆ ಅರ್ಥವಾಗುತ್ತದೆ. ಯಾವ ದೇಶ ಸಾಮಾಜಿಕ ಬೆಳವಣಿಗೆಗೆ ಬಂಡವಾಳ ಹೂಡಿಕೆ ಮಾಡುವುದಿಲ್ಲವೋ, ಅಂತಹ ದೇಶದಲ್ಲಿ ಮಾನವ ಸಂಪನ್ಮೂಲದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಮಾನವ ಸಂಪನ್ಮೂಲದ ಅಭಿವೃದ್ಧಿ ಸಾಧ್ಯವಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಾಗುವುದಿಲ್ಲ.

ಈ ಬಾರಿಯ ಬಜೆಟ್‌ನಲ್ಲಿ ಸಾಮಾಜಿಕ ಕ್ಷೇತ್ರಗಳ ಮೇಲಿನ ಬಂಡವಾಳ ಹೂಡಿಕೆಯನ್ನು ಯಾವ ರೀತಿಯಲ್ಲಿ ಕಡಿಮೆ ಮತ್ತು ಸ್ಥಗಿತಗೊಳಿಸಿದ್ದಾರೆ ಎಂದು ನೋಡೋಣ. 2024 – 25ರ ಬಜೆಟ್‌ನಲ್ಲಿ ಪ್ರಧಾನಮಂತ್ರಿ ಶಿಕ್ಷಣ ಅಭಿಯಾನ (ಪಿಎಂ–ಉಷಾ) ಯೋಜನೆಗೆ ಘೋಷಿಸಿದ್ದ ₹1,815 ಕೋಟಿಯಲ್ಲಿ ಖರ್ಚು ಮಾಡಿದ್ದು ಕೇವಲ ₹ 895 ಕೋಟಿ. ಘೋಷಿಸಿದ ಅನುದಾನದಲ್ಲಿ ಶೇ 50ರಷ್ಟು ಬಳಕೆಯಾಗದೇ ಖೋತಾ ಆಗಿದೆ. ಈ ವರ್ಷದ ಬಜೆಟ್‌ನಲ್ಲಿ ಮತ್ತೊಮ್ಮೆ ಇದೇ ಯೋಜನೆಗೆ ₹1,815 ಕೋಟಿ ಘೋಷಣೆ ಮಾಡಿದ್ದಾರೆ. ಹಿಂದಿನ ವರ್ಷದ ಲೆಕ್ಕ ನೋಡಿದರೆ ಈ ವರ್ಷವೂ ಬಳಕೆಯ ಹಂತದಲ್ಲಿ ಎಷ್ಟು ಖೋತಾ ಮಾಡಬಹುದು ಎಂದು ಸುಲಭವಾಗಿ ಊಹಿಸಬಹುದು. ಇದೇ ರೀತಿಯಲ್ಲಿ ಜಲಜೀವನ್ ಮಿಷನ್ ಯೋಜನೆಯಲ್ಲಿ ಶೇ 69, ರಾಷ್ಟ್ರೀಯ ವಿಕಾಸ್ ಯೋಜನೆಯಲ್ಲಿ ಶೇ 20, ರಾಷ್ಟ್ರೀಯ ಆಯುಷ್ ಯೋಜನೆಯಲ್ಲಿ ಶೇ 13, ಪ್ರಧಾನಮಂತ್ರಿ ಪೋಷಣ್ ಶಕ್ತಿ ನಿರ್ಮಾಣ (ಪಿಎಂ– ಪೋಷಣ್) ಯೋಜನೆಯಲ್ಲಿ ಶೇ 20ರಷ್ಟು ಖೋತಾ ಆಗಿದೆ. ಈ ರೀತಿಯಲ್ಲಿ ಹಲವಾರು ಸಾಮಾಜಿಕ ಕ್ಷೇತ್ರಗಳ ಯೋಜನೆಗಳಲ್ಲಿ ಅನುದಾನದ ಖೋತಾ ಆಗಿರುವ ವಿವರಗಳನ್ನು ಈ ಸಲದ ಬಜೆಟ್‌ನಲ್ಲಿ ನೋಡಬಹುದು.

ಈ ಬಾರಿಯ ಬಜೆಟ್ ಭಾಷಣದ ಪ್ರಾರಂಭದಲ್ಲಿ ಹಣಕಾಸು ಸಚಿವರು ತೆಲುಗು ಕವಿ ಗುರುಜಾದ ಅಪ್ಪರಾವ್ ಅವರ – 'ದೇಶವೆಂದರೆ ಮಣ್ಣು ಅಲ್ಲವೋ, ದೇಶವೆಂದರೆ ಮನುಷ್ಯರೋ' ಎಂಬ ಮಾತನ್ನು ಉಲ್ಲೇಖಿಸಿದರು. ಆದರೆ, ಇಡೀ ಬಜೆಟ್ ಅನ್ನು ಗಮನಿಸಿದರೆ ತಾವೇ ಉಲ್ಲೇಖಿಸಿರುವ ಮಾತಿಗೆ ಸಚಿವರು ಬದ್ಧರಾಗಿಲ್ಲ ಎನ್ನುವುದು ಎದ್ದು ಕಾಣುತ್ತದೆ. ಏಕೆಂದರೆ ದೇಶದ ಜನರ ಅಭಿವೃದ್ಧಿಗಾಗಿ ಸಾಮಾಜಿಕ, ಶೈಕ್ಷಣಿಕ ಹಾಗೂ ಆರೋಗ್ಯ ಕ್ಷೇತ್ರಗಳ ಮೇಲಿನ ಬಂಡವಾಳ ಹೂಡಿಕೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದಾರೆ. ಆದ್ದರಿಂದ ಈ ಬಜೆಟ್ ದೇಶದ ಜನರಿಗಾಗಿ ಅಲ್ಲ, ಇದು ಕೇವಲ ರಾಷ್ಟ್ರೀಯ ಚಾಂಪಿಯನ್‌ಗಳಿಗಾಗಿ ಎನ್ನುವುದು ಸ್ಪಷ್ಟವಾಗುತ್ತದೆ.

ಲೇಖಕ– ಸಹ ಪ್ರಾಧ್ಯಾಪಕ, ಪಿಇಎಸ್ ವಿಶ್ವವಿದ್ಯಾಲಯ

ಕೊರತೆ ಮರೆಸಲು ಸಾಲದ ಮೊರೆ

ಬಜೆಟ್‌ನಲ್ಲಿನ ವಿತ್ತೀಯ ಕೊರತೆಯನ್ನು ಸರಿದೂಗಿಸಲು ಕೇಂದ್ರ ಸರ್ಕಾರವು ಸಾಲದ ಮೊರೆ ಹೋಗುವುದು ಸಾಮಾನ್ಯ. ಈವರೆಗಿನ ಕೇಂದ್ರ ಸರ್ಕಾರಗಳು ಮಾಡಿದ ಸಾಲದ ಮೊತ್ತ 2025–26ನೇ ಸಾಲಿನ ಬಜೆಟ್‌ನಲ್ಲಿ ₹196 ಲಕ್ಷ ಕೋಟಿಯ ಗಡಿ ದಾಟಿದೆ.

₹196.78 ಲಕ್ಷ ಕೋಟಿ
2025–26ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಸಾಲ ಒಟ್ಟು ಮೊತ್ತ

₹134 ಲಕ್ಷ ಕೋಟಿ
ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು 2014–15ನೇ ಸಾಲಿನಿಂದ 2025–26ನೇ ಸಾಲಿನ ಬಜೆಟ್‌ವರೆಗೆ ಮಾಡಿರುವ ಸಾಲದ ಒಟ್ಟು ಮೊತ್ತ

ಹಿರಿಯ ನಾಗರಿಕರಿಗೆ ಟಿಡಿಎಸ್ ಮಿತಿ ಹೆಚ್ಚಳ

ಹಿರಿಯ ನಾಗರಿಕರು ಪಡೆಯುವ ಬಡ್ಡಿ ಮೇಲಿನ ಟಿಡಿಎಸ್ (ಮೂಲದಲ್ಲಿ ತೆರಿಗೆ ಕಡಿತ) ಮಿತಿಯನ್ನು ಈಗಿನ ₹50 ಸಾವಿರದಿಂದ ₹1 ಲಕ್ಷಕ್ಕೆ ಹೆಚ್ಚಿಸುವುದಾಗಿ ನಿರ್ಮಲಾ ಸೀತಾರಾಮನ್ ಘೋಷಿಸಿದರು. ಇತರರಿಗೆ ಈಗ ಇರುವ ₹40 ಸಾವಿರದ ಮಿತಿಯನ್ನು ₹50 ಸಾವಿರಕ್ಕೆ ಹೆಚ್ಚಿಸಲಾಗುತ್ತದೆ.

ಬಾಡಿಗೆ ವರಮಾನದ ಮೇಲಿನ ಟಿಡಿಎಸ್ ಮಿತಿಯನ್ನು ಈಗ ಇರುವ ₹2.4 ಲಕ್ಷದಿಂದ ₹6 ಲಕ್ಷಕ್ಕೆ ಹೆಚ್ಚು ಮಾಡಲಾಗುವುದು ಎಂದೂ ಸಚಿವೆ ಹೇಳಿದರು. ಈ ಕ್ರಮದಿಂದಾಗಿ ಸಣ್ಣ ತೆರಿಗೆ ಪಾವತಿದಾರರಿಗೆ ಅನುಕೂಲ ಆಗುತ್ತದೆ ಎಂದಿದ್ದಾರೆ.

ವಿದೇಶಗಳಲ್ಲಿರುವ ಭಾರತೀಯರು ಆರ್‌ಬಿಐನ ಎಲ್‌ಆರ್‌ಎಸ್ ಯೋಜನೆಯ ಅಡಿಯಲ್ಲಿ ಕಳುಹಿಸುವ ಹಣಕ್ಕೆ ಟಿಸಿಎಸ್ (ಮೂಲದಲ್ಲಿ ತೆರಿಗೆ ಸಂಗ್ರಹ) ಮಿತಿಯನ್ನು ಈಗಿರುವ ₹7 ಲಕ್ಷದಿಂದ ₹10 ಲಕ್ಷಕ್ಕೆ ಹೆಚ್ಚಿಸಲಾಗುತ್ತದೆ. ಶಿಕ್ಷಣದ ಉದ್ದೇಶಕ್ಕಾಗಿ ನಿರ್ದಿಷ್ಟ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಕಳುಹಿಸುವ ಮೊತ್ತಕ್ಕೆ ಟಿಸಿಎಸ್ ಇರುವುದಿಲ್ಲ ಎಂದು ಅವರು ಪ್ರಕಟಿಸಿದ್ದಾರೆ.

ಸ್ವಸಹಾಯ ಗುಂಪುಗಳಿಗೆ ‘ಗ್ರಾಮೀಣ ಕ್ರೆಡಿಟ್ ಸ್ಕೋರ್’

ಸ್ವಸಹಾಯ ಗುಂಪುಗಳು ಹಾಗೂ ಗ್ರಾಮೀಣ ಭಾಗದ ಜನರು ಸಾಲ ಪಡೆಯುವುದಕ್ಕೆ ಅನುಕೂಲವಾಗಲು ಸಾರ್ವಜನಿಕ ವಲಯದ ಬ್ಯಾಂಕುಗಳು ‘ಗ್ರಾಮೀಣ ಕ್ರೆಡಿಟ್ ಸ್ಕೋರ್’ಗೆ ಸಂಬಂಧಿಸಿ ಚೌಕಟ್ಟು ರೂಪಿಸಲಿವೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ವಿವಿಧ ಯೋಜನೆಗಳ ಸಬ್ಸಿಡಿಗೆ ₹4.5 ಲಕ್ಷ ಕೋಟಿ

ಒಟ್ಟು ಸ್ವೀಕೃತಿಯಲ್ಲಿ ಶೇ 6ರಷ್ಟು ಮೊತ್ತ ವಿವಿಧ ಸಬ್ಸಿಡಿಗಳಿಗೆ ವೆಚ್ಚವಾಗಲಿದೆ. ಇದು ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 1ರಷ್ಟು ಕಡಿಮೆ.

ಆಹಾರ, ರಸಗೊಬ್ಬರಗಳು ಹಾಗೂ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಗೆ ಸಂಬಂಧಿಸಿದ ಯೋಜನೆಗಳಡಿ ನೀಡಲಾಗುವ ಸಬ್ಸಿಡಿಗಾಗಿ ಒಟ್ಟು ₹4.5 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದೆ.

ಆಹಾರಕ್ಕೆ ಸಂಬಂಧಿಸಿದ ಸಬ್ಸಿಡಿಗಾಗಿ ₹2 ಲಕ್ಷ ಕೋಟಿ ತೆಗೆದಿರಿಸಲಾಗಿದೆ. ಇದು, ಪ್ರಸಕ್ತ ಹಣಕಾಸು ವರ್ಷದ ಪರಿಷ್ಕೃತ ಅಂದಾಜಿಗಿಂತಲೂ ಅಧಿಕವಾಗಿದೆ.

ಒಬಿಸಿ ಹಾಗೂ ಇಬಿಸಿ ಅಭ್ಯರ್ಥಿಗಳು ವಿದೇಶಗಳಲ್ಲಿ ಉನ್ನತ ಶಿಕ್ಷಣ ಕೈಗೊಳ್ಳಲು ಪಡೆಯುವ ಸಾಲದ ಬಡ್ಡಿಗೆ ಸಂಬಂಧಿಸಿದ ಸಬ್ಸಿಡಿಗಾಗಿ ಬಜೆಟ್‌ನಲ್ಲಿ ₹60 ಕೋಟಿ ತೆಗೆದಿರಿಸಲಾಗಿದೆ.

ತೆರಿಗೆ ಹೊರೆ ಇಳಿಕೆ

ಜಾಗತಿಕ ಅರ್ಥವ್ಯವಸ್ಥೆಯಲ್ಲಿನ ಅನಿಶ್ಚಿತ ಪರಿಸ್ಥಿತಿಗಳ ನಡುವೆ ದೇಶದ ಆರ್ಥಿಕ ಬೆಳವಣಿಗೆಗೆ ಶಕ್ತಿ ನೀಡುವ ಉದ್ದೇಶದಿಂದ ಆದಾಯ ತೆರಿಗೆ ಕಡಿತದ ಕ್ರಮವನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ವರ್ಷಕ್ಕೆ ₹12 ಲಕ್ಷದವರೆಗೆ ಆದಾಯ ಹೊಂದಿರುವ ವ್ಯಕ್ತಿಗಳ ಆದಾಯ ತೆರಿಗೆ ಹೊರೆಯು ಹೊಸ ತೆರಿಗೆ ವ್ಯವಸ್ಥೆಯ ಅಡಿಯಲ್ಲಿ ಹೊಸ ಆರ್ಥಿಕ ವರ್ಷದಿಂದ (ಏಪ್ರಿಲ್ 1) ಸೊನ್ನೆಗೆ ಇಳಿಯಲಿದೆ. ವೇತನದಾರ ವರ್ಗದವರಿಗೆ ಸ್ಟ್ಯಾಂಡರ್ಡ್ ಡಿಡಕ್ಷನ್‌ನ ಪ್ರಯೋಜನ ಇರುವ ಕಾರಣ, ವಾರ್ಷಿಕ ₹12.75 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಹೊರೆ ಇರುವುದಿಲ್ಲ.

ಹೊಸ ತೆರಿಗೆ ವ್ಯವಸ್ಥೆಯಲ್ಲಿ ಇದುವರೆಗೆ ₹7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇರಲಿಲ್ಲ. ₹12 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವವರಿಗೆ ಅನ್ವಯವಾಗುವ ತೆರಿಗೆ ಹಂತಗಳಲ್ಲಿ ಬದಲಾವಣೆಗಳನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇದರಿಂದಾಗಿ ವರ್ಷಕ್ಕೆ ₹25 ಲಕ್ಷದವರೆಗೆ ಆದಾಯ ಹೊಂದಿರುವವರು ಪಾವತಿಸಬೇಕಿದ್ದ ಆದಾಯ ತೆರಿಗೆ ಮೊತ್ತದಲ್ಲಿ ₹1.1 ಲಕ್ಷದವರೆಗೆ ಉಳಿತಾಯ ಆಗಲಿದೆ.

ತೆರಿಗೆ ವಿನಾಯಿತಿ ಹಾಗೂ ತೆರಿಗೆ ಹಂತಗಳಲ್ಲಿನ ಬದಲಾವಣೆಯ ಕಾರಣದಿಂದಾಗಿ ಕೇಂದ್ರ ಸರ್ಕಾರದ ಬೊಕ್ಕಸಕ್ಕೆ ₹1 ಲಕ್ಷ ಕೋಟಿ ವರಮಾನ ಕಡಿಮೆ ಆಗಲಿದೆ. ಆದರೆ ಈ ಕ್ರಮಗಳಿಂದಾಗಿ 6.3 ಕೋಟಿ ಜನರಿಗೆ ಅನುಕೂಲ ಆಗಲಿದೆ ಎಂದು ಹೇಳಿದ್ದಾರೆ.

‘ಹೊಸ ವ್ಯವಸ್ಥೆಯು ಮಧ್ಯಮ ವರ್ಗದ ಜನ ಪಾವತಿಸಬೇಕಿದ್ದ ತೆರಿಗೆ ಮೊತ್ತವನ್ನು ಗಣನೀಯವಾಗಿ ಕಡಿಮೆ ಮಾಡಲಿದೆ. ಅವರ ಕೈಯಲ್ಲಿ ಹೆಚ್ಚು ಹಣ ಉಳಿಯಲಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಕುಟುಂಬಗಳಿಂದ ಬರುವ ಬೇಡಿಕೆ, ಅವರಿಂದ ಆಗುವ ಉಳಿತಾಯ ಹಾಗೂ ಹೂಡಿಕೆಗಳು ಹೆಚ್ಚಲಿವೆ’ ಎಂದು ನಿರ್ಮಲಾ ಹೇಳಿದ್ದಾರೆ.

ಕೇಂದ್ರದ ವರಮಾನದಲ್ಲಿ ತುಸು ಇಳಿಕೆ ಆಗುವ ಕಾರಣದಿಂದಾಗಿ, ಬಂಡವಾಳ ವೆಚ್ಚಗಳನ್ನು ಅಲ್ಪ ಪ್ರಮಾಣದಲ್ಲಿ ಮಾತ್ರ ಹೆಚ್ಚಿಸಲಾಗಿದೆ.

ಶೂನ್ಯ ತೆರಿಗೆ: ಬಜೆಟ್ ಮಂಡನೆಯ ನಂತರ ಪತ್ರಿಕಾಗೋಷ್ಠಿ ನಡೆಸಿದ ನಿರ್ಮಲಾ ಅವರು, ‘ಆದಾಯ ತೆರಿಗೆ ಹಂತಗಳಲ್ಲಿ ಬದಲಾವಣೆ ತರುವ ಮೂಲಕ ಸರ್ಕಾರ ಜನರ ಕೈಯಲ್ಲಿ ಗಣನೀಯ ಪ್ರಮಾಣದ ಹಣ ಉಳಿಯುವಂತೆ ಮಾಡಿದೆ. ಈ ಕ್ರಮಗಳಿಂದಾಗಿ ಹೆಚ್ಚುವರಿಯಾಗಿ 1 ಕೋಟಿ ಜನರ ತೆರಿಗೆ ಹೊರೆ ಶೂನ್ಯಕ್ಕೆ ಇಳಿಯಲಿದೆ’ ಎಂದಿದ್ದಾರೆ.

ಈ ಕ್ರಮಗಳ ಮೂಲಕ ಕೇಂದ್ರ ಸರ್ಕಾರವು ಜನರ ದನಿಗೆ ಸ್ಪಂದಿಸುವ ಕೆಲಸ ಮಾಡಿದೆ ಎಂದು ಅವರು ಹೇಳಿದ್ದಾರೆ. ಮಧ್ಯಮ ವರ್ಗಕ್ಕೆ ನೆರವಾಗುವ ಉದ್ದೇಶದಿಂದ ತೆರಿಗೆ ಕಡಿಮೆ ಮಾಡಲಾಗಿದೆ ಎಂದಿದ್ದಾರೆ.

ಹೊಸ ತೆರಿಗೆ ಪದ್ಧತಿ: ಆದಾಯ ತೆರಿಗೆ ಲೆಕ್ಕಾಚಾರ

2024-25ನೇ ಆರ್ಥಿಕ ವರ್ಷ				2025-26ನೇ ಆರ್ಥಿಕ ವರ್ಷ			
ವಾರ್ಷಿಕ ನಿವ್ವಳ ಆದಾಯ (ಸಂಬಳದಾರರಿಗೆ ₹75,000 ಸ್ಟ್ಯಾಂಡರ್ಡ್ ಡಿಡಕ್ಷನ್ ನಂತರದ ಆದಾಯ) (₹ಗಳಲ್ಲಿ)	ವಾರ್ಷಿಕ ನಿವ್ವಳ ಆದಾಯ (₹ಗಳಲ್ಲಿ)	ತೆರಿಗೆ ದರ (%)	ಪಾವತಿಸಬೇಕಾದ ತೆರಿಗೆ (ತೆರಿಗೆ + ಸರ್ಚಾರ್ಜ್ + ಸೆಸ್) (₹ಗಳಲ್ಲಿ)	ವಾರ್ಷಿಕ ನಿವ್ವಳ ಆದಾಯ (₹ಗಳಲ್ಲಿ)	ತೆರಿಗೆ ದರ (%)	ಪಾವತಿಸಬೇಕಾದ ತೆರಿಗೆ (ತೆರಿಗೆ + ಸರ್ಚಾರ್ಜ್ + ಸೆಸ್) (₹ಗಳಲ್ಲಿ)	ತೆರಿಗೆ ಉಳಿತಾಯ (₹ಗಳಲ್ಲಿ)
4 ಲಕ್ಷ	4 ಲಕ್ಷ	5	-	4 ಲಕ್ಷ	0	-	-
5 ಲಕ್ಷ	5 ಲಕ್ಷ	5	-	5 ಲಕ್ಷ	5	-	-
6 ಲಕ್ಷ	6 ಲಕ್ಷ	5	-	6 ಲಕ್ಷ	5	-	-
7 ಲಕ್ಷ	7 ಲಕ್ಷ	5	-	7 ಲಕ್ಷ	5	-	-
8 ಲಕ್ಷ	8 ಲಕ್ಷ	10	31,200	8 ಲಕ್ಷ	5	-	30,000
9 ಲಕ್ಷ	9 ಲಕ್ಷ	10	41,600	9 ಲಕ್ಷ	10	-	40,000
10 ಲಕ್ಷ	10 ಲಕ್ಷ	10	52,000	10 ಲಕ್ಷ	10	-	50,000
11 ಲಕ್ಷ	11 ಲಕ್ಷ	15	67,600	11 ಲಕ್ಷ	10	-	65,000
12ಲಕ್ಷ	12 ಲಕ್ಷ	15	83,200	12 ಲಕ್ಷ	10	-	80,000
12.10 ಲಕ್ಷ	12.10 ಲಕ್ಷ	20	85,280	12.10 ಲಕ್ಷ	15	**10,400 (10,000+4% ಸೆಸ್)	72,000
12.25 ಲಕ್ಷ	12.25 ಲಕ್ಷ	20	88,400	12.25 ಲಕ್ಷ	15	**26,000 (25,000+4% ಸೆಸ್)	75,000
12.50 ಲಕ್ಷ	12.50 ಲಕ್ಷ	20	93,600	12.50 ಲಕ್ಷ	15	**52,000 (50,000+4% ಸೆಸ್)	40,000
12.75 ಲಕ್ಷ	12.75 ಲಕ್ಷ	20	98,800	12.75 ಲಕ್ಷ	15	74,100	45,000
13 ಲಕ್ಷ	13 ಲಕ್ಷ	20	1,04,000	13 ಲಕ್ಷ	15	78,000	25,000
14 ಲಕ್ಷ	14 ಲಕ್ಷ	20	1,24,800	14 ಲಕ್ಷ	15	93,600	30,000
15 ಲಕ್ಷ	15 ಲಕ್ಷ	20	1,45,600	15 ಲಕ್ಷ	15	1,09,200	35,000
16 ಲಕ್ಷ	16 ಲಕ್ಷ	30	1,76,800	16 ಲಕ್ಷ	15	1,24,800	50,000
17 ಲಕ್ಷ	17 ಲಕ್ಷ	30	2,08,000	17 ಲಕ್ಷ	20	1,45,600	60,000
18 ಲಕ್ಷ	18 ಲಕ್ಷ	30	2,39,200	18 ಲಕ್ಷ	20	1,66,400	70,000
19 ಲಕ್ಷ	19 ಲಕ್ಷ	30	2,70,400	19 ಲಕ್ಷ	20	1,87,200	80,000
20 ಲಕ್ಷ	20 ಲಕ್ಷ	30	3,01,600	20 ಲಕ್ಷ	20	2,08,000	90,000
24 ಲಕ್ಷ	24 ಲಕ್ಷ	30	4,26,400	24 ಲಕ್ಷ	25	3,12,000	1,10,000
25 ಲಕ್ಷ	25 ಲಕ್ಷ	30	4,57,600	25 ಲಕ್ಷ	30	3,43,200	1,10,000

(** ಸೆಕ್ಷನ್ 87ಎ ಅಡಿ ಹೊಸ ತೆರಿಗೆ ರಿಯಾಯಿತಿ ಕಾರ್ಯ ವಿಧಾನವನ್ನು ಪರಿಗಣಿಸಲಾಗಿದೆ)

(4% ಆರೋಗ್ಯ ಮತ್ತು ಶಿಕ್ಷಣ ಸೆಸ್)

ಪ್ರಗತಿಗೆ ಪೂರಕ ಬಜೆಟ್



ಎಂ.ಜಿ. ಬಾಲಕೃಷ್ಣ

‘ಆರ್ಥಿಕ ಪ್ರಗತಿ, ಮೂಲಸೌಕರ್ಯ ಅಭಿವೃದ್ಧಿ, ನಾವೀನ್ಯ, ಕೌಶಲ ಮತ್ತು ಉದ್ಯೋಗ ಸೃಷ್ಟಿಗೆ ಬಜೆಟ್ ಸಮಗ್ರ ಮಾರ್ಗಸೂಚಿಯನ್ನು ಒದಗಿಸುತ್ತದೆ’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಹೇಳಿದ್ದಾರೆ.

ಎಂಎಸ್‌ಎಂಇ ವರ್ಗೀಕರಣದ ಮಾನದಂಡಗಳ ಪರಿಷ್ಕರಣೆಯು ಸ್ವಾಗತಾರ್ಹವಾಗಿದೆ. ಇದು ಸಣ್ಣ ಉದ್ಯಮಗಳ ಕಾರ್ಯಾಚರಣೆ ವಿಸ್ತರಣೆಗೆ ಸಹಕಾರಿಯಾಗಲಿದೆ. ಉದ್ದಿಮೆಗಳಿಗೆ ಸಾಲದ ಹೆಚ್ಚಳವು ಹಣಕಾಸಿನ ಸಮಸ್ಯೆಯನ್ನು ಕಡಿಮೆ ಮಾಡಲಿದೆ. ಸೂಕ್ಷ್ಮ ಉದ್ಯಮಗಳಿಗೆ ₹5 ಲಕ್ಷ ಮಿತಿ ಹೊಂದಿರುವ ಕ್ರೆಡಿಟ್ ಕಾರ್ಡ್‌ಗಳನ್ನು ಪರಿಚಯಿಸುವುದು ವ್ಯಾಪಾರ ಹಾಗೂ ಉದ್ಯಮಿಗಳಿಗೆ ನೆರವಾಗಲಿದೆ ಎಂದು ಹೇಳಿದ್ದಾರೆ.

ಕೈಗಾರಿಕಾ ಬೆಳವಣಿಗೆ, ನಾವೀನ್ಯ ಮತ್ತು ಉದ್ಯಮಶೀಲತೆಗೆ ಬಜೆಟ್ ಗಟ್ಟಿಯಾದ ಅಡಿಪಾಯ ಹಾಕುತ್ತದೆ. ಎಫ್‌ಕೆಸಿಸಿಐ ಸಕ್ರಿಯ ವ್ಯಾಪಾರ ವಾತಾವರಣವನ್ನು ಬೆಳೆಸುವ ಸರ್ಕಾರದ ಬದ್ಧತೆಯನ್ನು ಶ್ಲಾಘಿಸುತ್ತದೆ. ಜೊತೆಗೆ, ಕರ್ನಾಟಕದ ಕೈಗಾರಿಕಾ ಮತ್ತು ವ್ಯಾಪಾರ ವ್ಯವಸ್ಥೆ ಮೇಲೆ ಸಕಾರಾತ್ಮಕ ಪರಿಣಾಮ ಬೀರಲಿದೆ ಎಂದಿದ್ದಾರೆ.

ರಫ್ತು ಉತ್ತೇಜನ ಅಭಿಯಾನ ಮತ್ತು ಭಾರತೀಯ ಕೈಗಾರಿಕೆಗಳನ್ನು ಜಾಗತಿಕ ಪೂರೈಕೆ ಸರಪಳಿಗಳೊಂದಿಗೆ ಸಂಯೋಜಿಸುವ ಕ್ರಮಗಳು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರತದ ಸ್ಥಾನವನ್ನು ಮತ್ತಷ್ಟು ಸದೃಢಗೊಳಿಸಲಿದೆ ಎಂದು ತಿಳಿಸಿದ್ದಾರೆ.



ಎಂ.ಜಿ. ರಾಜಗೋಪಾಲ್

‘ಅತಿಸಣ್ಣ, ಸಣ್ಣ ಉದ್ಯಮಗಳ (ಎಂಎಸ್‌ಇ) ಬೆಳವಣಿಗೆಗೆ ಬಜೆಟ್ ಪೂರಕವಾಗಿದೆ. ಇವುಗಳಿಗೆ ಸಾಲ, ಕೌಶಲ ಅಭಿವೃದ್ಧಿ, ನಾವೀನ್ಯ ಮತ್ತು ವ್ಯವಹಾರ ಉತ್ತೇಜನಕ್ಕೆ ಆದ್ಯತೆ ಸಿಕ್ಕಿದೆ’ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಹೇಳಿದ್ದಾರೆ.

ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ವರ್ಗೀಕರಣ ಮಾನದಂಡವನ್ನು ಪರಿಷ್ಕರಿಸುವುದು ಒಳ್ಳೆಯ ಸುಧಾರಣೆಯಾಗಿದೆ. ಇದರಿಂದ ಸರ್ಕಾರದ ಪ್ರಯೋಜನ ಪಡೆದುಕೊಂಡು ಸಣ್ಣ ಕೈಗಾರಿಕೆಗಳನ್ನು ವಿಸ್ತರಿಸಲು ಸಹಕಾರಿಯಾಗಲಿದೆ. ಹೂಡಿಕೆ ಮತ್ತು ವಹಿವಾಟು ಮಿತಿಯನ್ನು ಕ್ರಮವಾಗಿ 2.5 ಮತ್ತು 2 ಪಟ್ಟು ಹೆಚ್ಚಿಸುವ ಮೂಲಕ ಸರ್ಕಾರವು ಎಂಎಸ್‌ಎಂಇ ಬೆಳವಣಿಗೆಗೆ ತನ್ನ ಬದ್ಧತೆ ಪ್ರದರ್ಶಿಸಿದೆ ಎಂದು ಹೇಳಿದ್ದಾರೆ.

ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಕ್ರೆಡಿಟ್ ಗ್ಯಾರಂಟಿಯನ್ನು ₹5 ಕೋಟಿಯಿಂದ ₹10 ಕೋಟಿಗೆ ಹೆಚ್ಚಿಸಿದೆ. ಇದರಿಂದ ಮುಂದಿನ ಐದು ವರ್ಷಗಳಲ್ಲಿ ಈ ವಲಯಕ್ಕೆ ಹೆಚ್ಚುವರಿಯಾಗಿ ₹1.5 ಲಕ್ಷ ಕೋಟಿ ಸಾಲ ದೊರೆಯಲಿದೆ ಎಂದಿದ್ದಾರೆ.

ಜನ ವಿಶ್ವಾಸ್ ಮಸೂದೆ 2.0ರ ಮಂಡನೆಗೆ ನಿರ್ಧರಿಸಿರುವುದು ಎಂಎಸ್‌ಇಗಳ ಮೇಲಿನ ನಿಯಂತ್ರಕ ಹೊರೆಗಳನ್ನು ಕಡಿಮೆ ಮಾಡಲಿದೆ. ಇದು ಹೆಚ್ಚು ವ್ಯಾಪಾರ ಸ್ನೇಹಿ ವಾತಾವರಣ ಸೃಷ್ಟಿಸಲಿದೆ. ಹೂಡಿಕೆಗೆ ಮತ್ತಷ್ಟು ಉತ್ತೇಜನ ನೀಡಲಿದೆ ಎಂದು ಹೇಳಿದ್ದಾರೆ.

ತೆರಿಗೆ ಹೆಚ್ಚು, ಸಾಲ ಕಮ್ಮಿ

ಸರ್ಕಾರದ ಖರ್ಚು–ವೆಚ್ಚ, ಆದಾಯಗಳಲ್ಲಿ ಕೆಲವು ಪ್ರಮುಖ ಬದಲಾವಣೆಗಳಾಗಿವೆ. 2024-25ರ ಕೇಂದ್ರ ಬಜೆಟ್ ಮತ್ತು 2025-26ರ ಬಜೆಟ್‌ನಲ್ಲಿ ಈ ಬದಲಾವಣೆಗಳು ನಿಚ್ಚಳವಾಗಿವೆ. ಆದಾಯ ತೆರಿಗೆ ಹಾಗೂ ಜಿಎಸ್‌ಟಿಯನ್ನೇ ಕೇಂದ್ರ ಸರ್ಕಾರವು ತನ್ನ ಪ್ರಮುಖ ಆದಾಯ ಮೂಲವನ್ನಾಗಿಸಿಕೊಂಡಿದೆ. ಬಜೆಟ್‌ನ ಗಾತ್ರ ಹೆಚ್ಚಾಗಿದ್ದರೂ ಕೇಂದ್ರ ಪ್ರಾಯೋಜಿತ ಯೋಜನೆಗಳ ಅನುದಾನ ಮತ್ತು ಇತರ ವೆಚ್ಚಗಳನ್ನು ಇಳಿಕೆ ಮಾಡಿಕೊಳ್ಳುವತ್ತ ಗಮನ ನೀಡಿದೆ. ಇಂತಹ ಯೋಜನೆಗಳ ಹೊರೆಯನ್ನು ಕಡಿಮೆ ಮಾಡಿಕೊಂಡಿದೆ

ರೂಪಾಯಿ ಜಮೆ (ಪೈಸೆಗಳಲ್ಲಿ)

ಆವರಣದಲ್ಲಿರುವುದು 2024–25ರ ಬಜೆಟ್



- ಕೇಂದ್ರ ಬಜೆಟ್‌ನ ಪ್ರತಿ ಒಂದು ರೂಪಾಯಿಯಲ್ಲಿ, ಆದಾಯ ತೆರಿಗೆ ಮೂಲದ ವರಮಾನವನ್ನು 15 ಪೈಸೆಯಿಂದ 22 ಪೈಸೆಗೆ ಹೆಚ್ಚಿಸುವ ಗುರಿ ಹಾಕಿಕೊಂಡಿದೆ. ಇದು ಶೇ 46.6ರಷ್ಟು ಏರಿಕೆ
- ಜಿಎಸ್‌ಟಿ ಮೂಲದ ಆದಾಯ ಸಂಗ್ರಹ ಗುರಿಯನ್ನು 17 ಪೈಸೆಗಳಿಂದ 18 ಪೈಸೆಗೆ ಹೆಚ್ಚಿಸಿಕೊಂಡಿದೆ.
- 2024–25ರ ಬಜೆಟ್‌ನ ಪ್ರತಿ ಒಂದು ರೂಪಾಯಿಯಲ್ಲಿ 34 ಪೈಸೆಯನ್ನು ಸಾಲದಿಂದ ಸಂಗ್ರಹಿಸಲಾಗಿತ್ತು. 2025–26ರ ಬಜೆಟ್‌ನಲ್ಲಿ ಸಾಲದ ಪ್ರಮಾಣವನ್ನು 22 ಪೈಸೆಗೆ ಇಳಿಸುವ ಗುರಿ ಹಾಕಿಕೊಳ್ಳಲಾಗಿದೆ

ರೂಪಾಯಿ ವೆಚ್ಚ (ಪೈಸೆಗಳಲ್ಲಿ)

ಆವರಣದಲ್ಲಿರುವುದು 2024–25ರ ಬಜೆಟ್



- ಬಜೆಟ್‌ನ ಪ್ರತಿ ರೂಪಾಯಿಯಲ್ಲಿ ಕೇಂದ್ರೀಯ ವಲಯ ಯೋಜನೆಗಳ ವೆಚ್ಚವನ್ನು 17 ಪೈಸೆಯಿಂದ 16 ಪೈಸೆಗೆ ಕಡಿತ ಮಾಡಲಾಗಿದೆ
- ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಅಡಿ ನೀಡಲಾಗುತ್ತಿರುವ ಸಹಾಯಧನಗಳ ವೆಚ್ಚವನ್ನು 7 ಪೈಸೆಯಿಂದ 6 ಪೈಸೆಗೆ ಇಳಿಸಲಾಗಿದೆ
- ಕೇಂದ್ರ ಪ್ರಾಯೋಜಿತ ಯೋಜನೆಗಳ ವೆಚ್ಚವನ್ನು 9 ಪೈಸೆಯಿಂದ 8 ಪೈಸೆಗೆ ತಗ್ಗಿಸಿದೆ. ಹಣಕಾಸು ಆಯೋಗದ ಶಿಫಾರಸಿನ ವರ್ಗಾವಣೆ ಮೇಲಿನ ವೆಚ್ಚವನ್ನೂ 9 ಪೈಸೆಯಿಂದ 8 ಪೈಸೆಗೆ ಕಡಿತ ಮಾಡಲಾಗಿದೆ

ವಿಮಾ ವಲಯದಲ್ಲಿ ಶೇ 100ರಷ್ಟು ಎಫ್‌ಡಿಐ

ದೇಶದ ವಿಮಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು (ಎಫ್‌ಡಿಐ) ಶೇಕಡ 100ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಈ ಬಾರಿಯ ಬಜೆಟ್‌ನಲ್ಲಿ ಇದೆ. ಹಣಕಾಸು ವಲಯಕ್ಕೆ ಸಂಬಂಧಿಸಿದ ಹೊಸ ಸುಧಾರಣೆಗಳ ಭಾಗವಾಗಿ ಈ ಕ್ರಮ ಎಂದು ಕೇಂದ್ರ ಹೇಳಿದೆ. ವಿಮಾ ಕ್ಷೇತ್ರದಲ್ಲಿ ಎಫ್‌ಡಿಐ ಮಿತಿಯನ್ನು ಈಗಿನ ಶೇ 74ರ ಬದಲಾಗಿ, ಶೇ 100ಕ್ಕೆ ಹೆಚ್ಚಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

‘ಪ್ರೀಮಿಯಂ ಮೊತ್ತವನ್ನು ಸಂಪೂರ್ಣವಾಗಿ ಭಾರತದಲ್ಲಿ ತೊಡಗಿಸುವ ಕಂಪನಿಗಳಿಗೆ ಮಾತ್ರ ಈ ಹೆಚ್ಚುವರಿ ಎಫ್‌ಡಿಐ ಮಿತಿಯ ಪ್ರಯೋಜನ ಸಿಗುತ್ತದೆ’ ಎಂದಿದ್ದಾರೆ. ಮಿತಿಯನ್ನು ಹೆಚ್ಚಿಸುವುದಕ್ಕಾಗಿ ಕೇಂದ್ರವು ವಿಮಾ ಕಾಯ್ದೆ 1938, ಜೀವ ವಿಮಾ ನಿಗಮ ಕಾಯ್ದೆ – 1956 ಮತ್ತು ವಿಮಾ ನಿಯಂತ್ರಣ ಹಾಗೂ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ 1999ಕ್ಕೆ ತಿದ್ದುಪಡಿ ತರಬೇಕಿದೆ.

ಮಧ್ಯಮ ವರ್ಗದ ಕೈಗೆ ದುಡ್ಡು ಕೊಟ್ಟ ಬಜೆಟ್

ಬಜೆಟ್ ವಿಶ್ಲೇಷಣೆ

ಕಾವ್ಯ ಡಿ.

ವೈಯಕ್ತಿಕ ಆದಾಯ ತೆರಿಗೆ ಪಾವತಿಸುವ ಜೊತೆಗೆ ಬೆಲೆ ಏರಿಕೆಯ ಬಿಸಿಯನ್ನೂ ಸಹಿಸಿಕೊಂಡು ಬದುಕಿನ ಬಂಡಿ ಎಳೆಯುತ್ತಿದ್ದ ದೇಶದ ಮಧ್ಯಮ ವರ್ಗದ ಜನರಿಗೆ ಬಜೆಟ್‌ನಲ್ಲಿ ದೊಡ್ಡ ಪರಿಹಾರ ಸಿಕ್ಕಿದೆ. ಜನಸಾಮಾನ್ಯರ ಬಹುದಿನಗಳ ಬೇಡಿಕೆಯಾಗಿದ್ದ ಆದಾಯ ತೆರಿಗೆ ಮಿತಿ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ಪುರಸ್ಕರಿಸಿದ್ದಾರೆ.

‘ನಾನು ಮಿಡಲ್ ಕ್ಲಾಸ್‌ಗೆ ಸೇರಿದ್ದೇನೆ. ಅವರ ಕಷ್ಟ ನನಗೆ ಅರ್ಥವಾಗುತ್ತದೆ’ ಎಂದು ಹಲವು ಪತ್ರಿಕಾಗೋಷ್ಠಿಗಳಲ್ಲಿ ಹೇಳುತ್ತಿದ್ದ ಅವರು, ನಿಜ ಅರ್ಥದಲ್ಲಿ ಈ ಬಾರಿ ಮಧ್ಯಮ ವರ್ಗದವರ ಜೇಬಿಗೆ ಒಂದಷ್ಟು ದುಡ್ಡು ತುಂಬಿಸುವ ಕೆಲಸ ಮಾಡಿದ್ದಾರೆ. ಹೊಸ ತೆರಿಗೆ ಪದ್ಧತಿ ಆಯ್ದುಕೊಳ್ಳುವವರಿಗೆ ವಾರ್ಷಿಕ ₹12 ಲಕ್ಷದ ವರೆಗಿನ ಆದಾಯಕ್ಕೆ ಯಾವುದೇ ತೆರಿಗೆ ಇಲ್ಲ ಎಂದು ಪ್ರಕಟಿಸಿದ್ದಾರೆ. ಸಂಬಳ ಪಡೆಯುವವರಿಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ₹75 ಸಾವಿರ ಒಳಗೊಂಡು ತೆರಿಗೆಗೆ ಒಳಪಡದ ಮಿತಿಯನ್ನು ₹12.75 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜನಸಾಮಾನ್ಯರ ತೆರಿಗೆ ಹೊರೆಯನ್ನು ಕಾಲಕಾಲಕ್ಕೆ ಒಂದಿಷ್ಟು ತಗ್ಗಿಸುತ್ತಾ ಬಂದಿದೆ ಎನ್ನುವುದನ್ನು ಅಂಕಿ-ಅಂಶ ಹೇಳುತ್ತವೆ. 2014ರಲ್ಲಿ ಮೊದಲ ಬಾರಿಗೆ ಅಂದಿನ ಹಣಕಾಸು ಸಚಿವರಾಗಿದ್ದ ಅರುಣ್ ಜೇಟ್ಲಿ ತೆರಿಗೆ ರಹಿತ ಸ್ಲ್ಯಾಬ್ ಮಿತಿಯನ್ನು ₹2 ಲಕ್ಷದಿಂದ ₹2.5 ಲಕ್ಷಕ್ಕೆ ಏರಿಕೆ ಮಾಡಿದ್ದರು. ನಂತರ 2019ರಲ್ಲಿ ತೆರಿಗೆ ರಹಿತ ಆದಾಯದ ಮಿತಿಯನ್ನು ₹5 ಲಕ್ಷಕ್ಕೆ ಹೆಚ್ಚಿಸಲಾಯಿತು. 2023ರಲ್ಲಿ ಈ ಮಿತಿಯು ₹7 ಲಕ್ಷಕ್ಕೆ ಜಿಗಿಯಿತು.

2024ರಲ್ಲಿ ಕೇಂದ್ರ ಸರ್ಕಾರ ಆದಾಯ ತೆರಿಗೆಯ ಹೊರೆ ಇಳಿಸುವ ಮನಸ್ಸು ಮಾಡಿರಲಿಲ್ಲ. ಬೆಲೆ ಏರಿಕೆಯ ಕಾಲದಲ್ಲಿ ಆದಾಯ ತೆರಿಗೆ ಭಾರ ತಗ್ಗಿಸದ ಸರ್ಕಾರದ ನೀತಿಯು ವ್ಯಾಪಕ ಟೀಕೆಗೆ ಗುರಿಯಾಗಿತ್ತು. ಸಾಮಾಜಿಕ ಜಾಲತಾಣಗಳಲ್ಲೂ ಸರ್ಕಾರದ ದುಬಾರಿ ತೆರಿಗೆ ನೀತಿಗೆ ಟೀಕೆ ವ್ಯಕ್ತವಾಗಿತ್ತು. ಇದೆಲ್ಲವನ್ನೂ ಅರಿತಿರುವ ಸರ್ಕಾರ ಕೊನೆಗೂ ಈ ಬಾರಿಯ ಬಜೆಟ್‌ನಲ್ಲಿ ಮಧ್ಯಮವರ್ಗದ ಜನರ ತೆರಿಗೆ ಭಾರ ಕಡಿಮೆ ಮಾಡಿದ್ದಾರೆ.

ಎಷ್ಟು ಇಳಿಯಲಿದೆ ತೆರಿಗೆ ಭಾರ?: ₹12 ಲಕ್ಷಕ್ಕಿಂತ ಹೆಚ್ಚಿನ ಆದಾಯ ಗಳಿಸುವವರಿಗೂ ತೆರಿಗೆ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಸರ್ಕಾರ ಆದಾಯ ತೆರಿಗೆ ಸ್ಲ್ಯಾಬ್ ಮಿತಿಯಲ್ಲಿ ಸಾಕಷ್ಟು ಬದಲಾವಣೆ ಮಾಡಿದೆ. ಹೊಸ ತೆರಿಗೆ ಸ್ಲ್ಯಾಬ್ ಪ್ರಕಾರ ತೆರಿಗೆದಾರ ಎಷ್ಟೇ ಆದಾಯ ಪಡೆದರೂ ಮೊದಲ ₹4 ಲಕ್ಷದ ವರೆಗಿನ ಗಳಿಕೆಗೆ ಯಾವುದೇ ತೆರಿಗೆ ಇರುವುದಿಲ್ಲ.

ಹೊಸ ತೆರಿಗೆ ಸ್ಲ್ಯಾಬ್ ಮಿತಿಗಳ ಘೋಷಣೆಯಿಂದ ₹12 ಲಕ್ಷ ಆದಾಯ ಪಡೆಯುವ ವ್ಯಕ್ತಿಗೆ ₹80 ಸಾವಿರ, ₹18 ಲಕ್ಷ ಆದಾಯವಿರುವ ವ್ಯಕ್ತಿಗೆ ₹70 ಸಾವಿರ ಮತ್ತು ₹25 ಲಕ್ಷ ಆದಾಯ ಇರುವವರಿಗೆ ₹1.10 ಲಕ್ಷ ತೆರಿಗೆ ಉಳಿತಾಯವಾಗಲಿದೆ.

ಮಧ್ಯಮ ವರ್ಗ ಸ್ನೇಹಿ ತೆರಿಗೆ ನೀತಿಗೆ ಮುನ್ನುಡಿ: ಬಜೆಟ್ ಘೋಷಣೆಗಳಲ್ಲಿ ಸದಾ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದ ಮಧ್ಯಮ ವರ್ಗದ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಸಾಕಷ್ಟು ಉಲ್ಲೇಖವಿದೆ. ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್ ಭಾಷಣದ ಐದನೇ ಸಾಲಿನಲ್ಲೇ ಮಧ್ಯಮ ವರ್ಗದ ಖರೀದಿ ಸಾಮರ್ಥ್ಯ ಹೆಚ್ಚಿಸುವುದು ಬಜೆಟ್‌ನ ಮೂಲ ಮಂತ್ರಗಳಲ್ಲಿ ಒಂದಾಗಿದೆ ಎಂದು ಪ್ರಸ್ತಾಪಿಸಲಾಗಿದೆ.

ಆಯವ್ಯಯ ಪ್ರತಿಯಲ್ಲಿ ಒಟ್ಟು ಏಳು ಬಾರಿ ‘ಮಧ್ಯಮ ವರ್ಗ’ ಎನ್ನುವ ಪದ ಬಳಕೆಯಾಗಿದೆ. ಇದೆಲ್ಲದರ ಜೊತೆ ಮುಂದಿನ ವಾರವೇ ಹೊಸ ಆದಾಯ ತೆರಿಗೆ ಮಸೂದೆ ಮಂಡಿಸುವುದಾಗಿ ಹೇಳಿದ್ದಾರೆ. ಮಧ್ಯಮ ವರ್ಗ ಮತ್ತು ಜನಸ್ನೇಹಿ ಆದಾಯ ತೆರಿಗೆ ನೀತಿಗಳನ್ನು ತರುವುದೇ ಇದರ ಉದ್ದೇಶ ಎಂದು ತಿಳಿಸಿದ್ದಾರೆ. ಈ ನಡುವೆ ಆದಾಯ ತೆರಿಗೆ ಭಾರ ಇಳಿಸುವ ಸರ್ಕಾರದ ನಿರ್ಧಾರದಿಂದ ಬೊಕ್ಕಸಕ್ಕೆ ₹1 ಲಕ್ಷ ಕೋಟಿ ಹೊರೆ ಬೀಳುತ್ತದೆ. ಅದನ್ನು ಸರ್ಕಾರ ಹೇಗೆ ಭರಿಸಿಕೊಳ್ಳಲಿದೆ ಎನ್ನುವುದನ್ನು ಕಾದು ನೋಡಬೇಕಿದೆ. ಸದ್ಯದ ಮಟ್ಟಿಗೆ ಮಧ್ಯಮ ವರ್ಗದ ಮಂದಿಗಂತೂ ಈ ಸಲದ ಬಜೆಟ್ ಬಂಪರ್ ಕೊಡುಗೆ ನೀಡಿದೆ.

ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್

ಮತ್ತಷ್ಟು ಸಿಹಿ ಸುದ್ದಿ ಏನು?

ಈ ಬಾರಿಯ ಬಜೆಟ್‌ನಲ್ಲಿ ಮೂಲದಲ್ಲೇ ತೆರಿಗೆ ಕಡಿತದ (ಟಿಡಿಎಸ್) ವಾರ್ಷಿಕ ಮಿತಿಯನ್ನು ಹಿರಿಯ ನಾಗರಿಕರಿಗೆ ₹50 ಸಾವಿರದಿಂದ ₹1 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಬಾಡಿಗೆ ಮೇಲಿನ ವಾರ್ಷಿಕ ಟಿಡಿಎಸ್ ಮಿತಿಯನ್ನು ₹2.40 ಲಕ್ಷದಿಂದ ₹6 ಲಕ್ಷಕ್ಕೆ ಪರಿಷ್ಕರಿಸಲಾಗಿದೆ. ಸರ್ಕಾರದ ಈ ಕ್ರಮದಿಂದ ಸಣ್ಣ ತೆರಿಗೆದಾರರಿಗೆ ಅನುಕೂಲವಾಗಲಿದೆ.

ಇನ್ನು ಹಣ ಸಂದಾಯಕ್ಕೆ ಮೂಲದಲ್ಲೇ ತೆರಿಗೆ ಸಂಗ್ರಹ (ಟಿಸಿಎಸ್) ಮಿತಿಯನ್ನು ₹7 ಲಕ್ಷದಿಂದ ₹10 ಲಕ್ಷಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ. ಜೊತೆಗೆ, ಶಿಕ್ಷಣದ ಉದ್ದೇಶಕ್ಕೆ ಮಾಡುವ ಹಣ ಸಂದಾಯಕ್ಕೆ ಮೂಲದಲ್ಲೇ ತೆರಿಗೆ ಸಂಗ್ರಹ (ಟಿಸಿಎಸ್) ಮಾಡುವುದನ್ನು ರದ್ದುಪಡಿಸಲಾಗುತ್ತದೆ. ಇನ್ನು ಈ ಹಿಂದೆ ಎರಡು ಮನೆಗಳಿದ್ದ ಪಕ್ಷದಲ್ಲಿ ಒಂದು ಮನೆಯನ್ನು ಮಾತ್ರ ಸ್ವಂತಕ್ಕೆ ಬಳಸುತ್ತಿದ್ದೇವೆ ಎಂದು ತೋರಿಸಲು ತೆರಿಗೆ ನಿಯಮದಲ್ಲಿ ಅವಕಾಶವಿತ್ತು. ಎರಡನೇ ಮನೆಯನ್ನು ಸ್ವಂತಕ್ಕೆ ಬಳಸುತ್ತಿದ್ದೇವೆ. ಅದರಿಂದ ಆದಾಯ ಬರುತ್ತಿಲ್ಲ ಎಂದು ವಿನಾಯಿತಿ ಪಡೆದುಕೊಳ್ಳಬೇಕಾದರೆ ಸಾಕಷ್ಟು ನಿಬಂಧನೆಗಳನ್ನು ಪೂರೈಸಬೇಕಿತ್ತು.

ಆದರೆ, ಈ ಬಜೆಟ್‌ನಲ್ಲಿ ಯಾವುದೇ ನಿಬಂಧನೆಗಳು ಇಲ್ಲದೆ ಎರಡು ಮನೆಗಳನ್ನು ಸ್ವಂತಕ್ಕೆ ಬಳಸುತ್ತಿದ್ದೇವೆ. ಅದರಿಂದ ಆದಾಯವಿಲ್ಲ ಎಂದು ತಿಳಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,508
ಇಂದಿನ ಅಂತ್ಯ	23,482
▼	26
ದಿನದ ಕನಿಷ್ಠ	23,318

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹535
12 ಕ್ಕೆ	₹70
ಮೈಸೂರು	
100ಕ್ಕೆ	₹535

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹515-691

ದ್ವಿತಳಿ (ಬಿ.ವಿ) ₹401-905

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹189

ಆರ್‌ಎಸ್‌ಎಸ್-5 ₹184

ಗುಡ್ ಲಾಟ್ ₹179

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹25650
ಎಸಿ	₹14420
ಆರ್‌ಪಿ	₹21000
ಆರ್‌ಸಿ	₹12550

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಸಿದ್ದಾಪುರ		ತಟ್ಟಿಬೆಟ್ಟೆ	26699-41099
ಕೋಕ	20000-27500	ಬಿಳಿಗೋಟು	20569-25299	ಶಿರಸಿ	
ಹೊಸತು	30000-36000	ಚಾಲಿ	31889-37929	ಬೆಟ್ಟೆ	28098-41659
ಹಳತು	45500-49500	ಕೋಕ	13019-14319	ಬಿಳಿಗೋಟು	16099-29668
ಕಾರ್ಕಳ		ಹೊಸಚಾಲಿ	22699-30009	ಚಾಲಿ	35098-39698
ಹೊಸತು	25000-36500	ಕೆಂಪುಗೋಟು	21319-21619	ಕೆಂಪುಗೋಟು	16600-23268
ಹಳತು	30000-45500	ರಾಶಿ	41099-49299	ರಾಶಿ	42479-47208

ಮುಂದಿನ ವಾರ ಹೊಸ ತೆರಿಗೆ ಮಸೂದೆ ಮಂಡನೆ: ಸಚಿವೆ ನಿರ್ಮಲಾ

ತೆರಿಗೆ ಪಾವತಿಗೆ ಸರಳ ಪಾಠ

ನವದೆಹಲಿ (ಪಿಟಿಐ): ಸರ್ಕಾರವು ನೇರ ತೆರಿಗೆ ಕಾನೂನಿನ ಸರಳೀಕರಣಕ್ಕೆ ನಿರ್ಧರಿಸಿದ್ದು, ಮುಂದಿನ ವಾರ ಸಂಸತ್ ಅಧಿವೇಶನದಲ್ಲಿ ಹೊಸ ಆದಾಯ ತೆರಿಗೆ ಮಸೂದೆಯನ್ನು ಮಂಡಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಈಗಿರುವ 1961ರ ಆದಾಯ ತೆರಿಗೆ ಕಾಯ್ದೆಯು ಆರು ದಶಕದಷ್ಟು ಹಳೆಯದಾಗಿದೆ. ಕಾಯ್ದೆಯಲ್ಲಿ 23 ಅಧ್ಯಾಯಗಳಿದ್ದು, 298ಕ್ಕೂ ಹೆಚ್ಚು ಸೆಕ್ಷನ್‌ಗಳಿವೆ. ತೆರಿಗೆ ಪಾವತಿ ಸರಳೀಕರಣವಾಗಿಲ್ಲ. ತೆರಿಗೆ ಭಾಷೆಯೂ ಅರ್ಥವಾಗುತ್ತಿಲ್ಲ. ಹಾಗಾಗಿ, ಕಾಯ್ದೆಯ ಶೇ 60ರಷ್ಟು ಪುಟಗಳನ್ನು ಕಡಿಮೆ ಮಾಡಲು ನಿರ್ಧರಿಸಲಾಗಿದೆ.

ಈ ಕಾಯ್ದೆಯ ಸಮಗ್ರ ಬದಲಾವಣೆ ಕುರಿತು 2024–25ನೇ ಸಾಲಿನ ಬಜೆಟ್‌ನಲ್ಲಿಯೇ ನಿರ್ಮಲಾ ಅವರು ಪ್ರಸ್ತಾಪಿಸಿದ್ದರು. ಇದಕ್ಕೆ ಅನುಗುಣವಾಗಿ ಕಾಯ್ದೆಯ ಸಮಗ್ರ ಪರಾಮರ್ಶೆ ಸಂಬಂಧ ಕೇಂದ್ರ ನೇರ ತೆರಿಗೆಗಳ ಮಂಡಳಿಯಿಂದ ಆಂತರಿಕ ಸಮಿತಿ ಕೂಡ ರಚಿಸಲಾಗಿತ್ತು. ಇದರಡಿ 22 ವಿಶೇಷ ಉಪ ಸಮಿತಿಗಳನ್ನು ರಚಿಸಲಾಗಿದೆ. ಮಧ್ಯಸ್ಥಗಾರರಿಂದ 6,500 ಸಲಹೆಗಳನ್ನು ಸ್ವೀಕರಿಸಲಾಗಿದೆ.

ಹೊಸ ಆದಾಯ ತೆರಿಗೆ ಮಸೂದೆಯಲ್ಲಿ ಯಾವ ಅಂಶಗಳು ಅಡಕವಾಗಿರಲಿವೆ ಎಂಬ ಬಗ್ಗೆ ಬಜೆಟ್‌ನಲ್ಲಿ ಸ್ಪಷ್ಟಪಡಿಸಿಲ್ಲ. ಆದರೆ, ತೆರಿಗೆ ಸರಳೀಕರಣದಿಂದ ವ್ಯಾಜ್ಯಗಳ ಸಂಖ್ಯೆ ಕಡಿಮೆಯಾಗಲಿದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ತೆರಿಗೆಗೆ ಸಂಬಂಧಿಸಿದಂತೆ ಇರುವ ಅರ್ಥಗಳನ್ನು ಸರಳ ಭಾಷೆಯಲ್ಲಿ ನಮೂದಿಸುವ ಗುರಿ ಹೊಂದಲಾಗಿದೆ. ತೆರಿಗೆದಾರರಿಗೆ ಸುಲಭವಾಗಿ ಅರ್ಥೈಸುವ ಆಶಯ ಹೊಂದಲಾಗಿದೆ. ಕಾಯ್ದೆಯಡಿ ಇರುವ ಕೆಲವು ಷರತ್ತುಗಳನ್ನು ಬದಲಾಯಿಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

‘ಮೊದಲು ನಂಬಿ; ಬಳಿಕ ಪರೀಕ್ಷಿಸಿ’

‘ನ್ಯಾಯದ ತತ್ವ ಪರಿಪಾಲನೆಯೇ ಹೊಸ ಆದಾಯ ತೆರಿಗೆ ಮಸೂದೆಯ ಆಶಯವಾಗಿದೆ. ‘ಮೊದಲು ನಂಬಿಕೆ ಇಡಿ; ಬಳಿಕ ಪರೀಕ್ಷಿಸಿ’ ಎಂಬ ಪರಿಕಲ್ಪನೆ ಇದಾಗಿದೆ ಎಂದು ನಿರ್ಮಲಾ ಹೇಳಿದರು.

ಈಗಿರುವ ಕಾಯ್ದೆಯ ಅರ್ಧದಷ್ಟು ಪುಟಗಳು ತಗ್ಗಲಿದೆ. ಪ್ರತಿ ಅಧ್ಯಾಯ ಮತ್ತು ಷರತ್ತುಗಳನ್ನು ಸರಳೀಕರಿಸಲಾಗುವುದು. ತೆರಿಗೆದಾರರು ಮತ್ತು ತೆರಿಗೆ ಪಾವತಿ ಸಂಸ್ಥೆಗಳು ಸುಲಭವಾಗಿ ಅರ್ಥೈಸಿಕೊಳ್ಳಲು ನೆರವಾಗುವಂತೆ ರೂಪಿಸಲಾಗುತ್ತದೆ ಎಂದರು. ಹೊಸ ಮಸೂದೆಯನ್ನು ಸಂಸದೀಯ ಸ್ಥಾಯಿಸಮಿತಿಯ ಪರಾಮರ್ಶೆಗೆ ಒಳಪಡಿಸಲಾಗುವುದು ಎಂದು ತಿಳಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಸರ್ಕಾರವು ತೆರಿಗೆಗೆ ಸಂಬಂಧಿಸಿದಂತೆ ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಯಾವುದೇ, ಅಡೆತಡೆ ಇಲ್ಲದೆ ಮಸೂದೆಗೆ ಅನುಮೋದನೆ ಸಿಗುವ ವಿಶ್ವಾಸವಿದೆ ಎಂದು ತಿಳಿಸಿದರು.

₹2.56 ಲಕ್ಷ ಕೋಟಿ ಲಾಭಾಂಶ ನಿರೀಕ್ಷೆ

ನವದೆಹಲಿ (ಪಿಟಿಐ): 2025–26ನೇ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಂದ ₹2.56 ಲಕ್ಷ ಕೋಟಿ ಲಾಭಾಂಶ ನಿರೀಕ್ಷಿಸಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆರ್‌ಬಿಐ, ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಂದ ₹2.34 ಲಕ್ಷ ಕೋಟಿ ಲಾಭಾಂಶದ ಗುರಿ ನಿಗದಿಯಾಗಿದೆ. ಇದು 2023–24ನೇ ಆರ್ಥಿಕ ಸಾಲಿನಲ್ಲಿ ನಿಗದಿಯಾಗಿದ್ದ ಗುರಿಗಿಂತ ₹1,410 ಕೋಟಿ ಹೆಚ್ಚಿದೆ.

ಸುದ್ದಿ 2 ನಿಮಿಷ

ವಿತ್ತೀಯ ಕೊರತೆ ತಗ್ಗಿಸಲು ಗುರಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವಾದ ವಿತ್ತೀಯ ಕೊರತೆಯನ್ನು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ 4.8ಕ್ಕೆ ಮತ್ತು 2025–26ರಲ್ಲಿ ಶೇ 4.4ಕ್ಕೆ ತಗ್ಗಿಸಲು ಬಜೆಟ್‌ನಲ್ಲಿ ಗುರಿ ನಿಗದಿಪಡಿಸಲಾಗಿದೆ.

ಮುಂದಿನ ಆರ್ಥಿಕ ವರ್ಷದಲ್ಲಿ ನಿವ್ವಳ ಮಾರುಕಟ್ಟೆ ಸಾಲದ ಮೊತ್ತವು ₹11.54 ಲಕ್ಷ ಕೋಟಿ ಆಗಲಿದೆ ಎಂದು ಅಂದಾಜಿಸಲಾಗಿದೆ.

ಹಣಕಾಸುಯೇತರ ವಲಯದ ನಿಯಂತ್ರಕಗಳ ಸುಧಾರಣೆಗೆ ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು. ರಾಷ್ಟ್ರೀಯ ಹಣಕಾಸು ಮೂಲಸೌಕರ್ಯ ಮತ್ತು ಅಭಿವೃದ್ಧಿ ಬ್ಯಾಂಕ್‌ನಿಂದ ಕಾರ್ಪೊರೇಟ್ ಬಾಂಡ್‌ಗಳಿಗೆ ಭಾಗಶಃ ಸಾಲ ಸೌಲಭ್ಯ ಕಲ್ಪಿಸಲಾಗುವುದು. ಪ್ರಸಕ್ತ ವರ್ಷ ಹೂಡಿಕೆ ಸ್ನೇಹಿ ರಾಜ್ಯಗಳ ಸೂಚ್ಯಂಕವನ್ನು ಬಿಡುಗಡೆ ಮಾಡಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ಜಿಎಸ್‌ಟಿ ₹1.96 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ ಮೂಲಕ ಜನವರಿಯಲ್ಲಿ ₹1.96 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ. ದೇಶೀಯ ಮಟ್ಟದಲ್ಲಿ ಆರ್ಥಿಕ ಚಟುವಟಿಕೆಗಳು ಸದೃಢಗೊಂಡಿದೆ. ಇದರಿಂದ ವರಮಾನ ಸಂಗ್ರಹದಲ್ಲಿ ಶೇ 12.3ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10.4ರಷ್ಟು ಏರಿಕೆಯಾಗಿದ್ದು, ಒಟ್ಟು ₹1.47 ಲಕ್ಷ ಕೋಟಿ ಸಂಗ್ರಹವಾಗಿದೆ. ಆಮದು ಸರಕುಗಳ ಮೇಲಿನ ಸಂಗ್ರಹದಲ್ಲಿ ಶೇ 19.8ರಷ್ಟು ಏರಿಕೆಯಾಗಿದ್ದು, ₹48,382 ಕೋಟಿ ಸಂಗ್ರಹವಾಗಿದೆ.

ಜನವರಿಯಲ್ಲಿ ಒಟ್ಟು ₹23,853 ಕೋಟಿ ಮರುಪಾವತಿ ಮಾಡಲಾಗಿದೆ. ಮರುಪಾವತಿ ಬಳಿಕ ಒಟ್ಟು ವರಮಾನ ಸಂಗ್ರಹ ₹1.72 ಲಕ್ಷ ಕೋಟಿ ಆಗಿದೆ.

ವಾಣಿಜ್ಯ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ವಾಣಿಜ್ಯ ಬಳಕೆಯ ಸಿಲಿಂಡರ್ ದರವನ್ನು ಇಳಿಕೆ ಮಾಡಿವೆ. ವಿಮಾನ ಇಂಧನ (ಎಟಿಎಫ್) ದರವನ್ನು ಏರಿಕೆ ಮಾಡಿವೆ. ಹೊಸ ದರವು ಶನಿವಾರದಿಂದಲೇ ಜಾರಿಗೆ ಬಂದಿದೆ.

19 ಕೆ.ಜಿ ತೂಕದ ಸಿಲಿಂಡರ್ ಬೆಲೆಯಲ್ಲಿ ₹7 ಇಳಿಕೆಯಾಗಿದೆ. ದೆಹಲಿಯಲ್ಲಿ ಸಿಲಿಂಡರ್ ದರ ₹1,797 ಆಗಿದೆ. ಮುಂಬೈನಲ್ಲಿ ₹1,749, ಕೋಲ್ಕತ್ತದಲ್ಲಿ ₹1,907 ಮತ್ತು ಚೆನ್ನೈನಲ್ಲಿ ₹1,959 ಇದೆ. ಗೃಹ ಬಳಕೆಯ 14 ಕೆ.ಜಿ ತೂಕದ ಸಿಲಿಂಡರ್ ದರವು ಯಥಾಸ್ಥಿತಿಯಲ್ಲಿದ್ದು, ₹803 ಇದೆ.

ವಿಮಾನ ಇಂಧನ ಬೆಲೆ ಏರಿಕೆ: ವಿಮಾನಗಳಲ್ಲಿ ಬಳಸುವ ಇಂಧನ ದರವು ಪ್ರತಿ ಕಿಲೋ ಲೀಟರ್‌ಗೆ (1 ಸಾವಿರ ಲೀಟರ್) ₹5,078 (ಶೇ 5.6) ಹೆಚ್ಚಳವಾಗಿದೆ. ದೆಹಲಿಯಲ್ಲಿ ₹95,533 ಆಗಿದೆ.

ಬಂಡವಾಳ ವೆಚ್ಚ ಕಡಿಮೆ ತಗ್ಗಿದ ಹೂಡಿಕೆದಾರರ ವಿಶ್ವಾಸ

ಮುಂಬೈ (ಪಿಟಿಐ): ಕೇಂದ್ರ ಬಜೆಟ್ ಮಂಡನೆ ಅಂಗವಾಗಿ ಶನಿವಾರ ನಡೆದ ವಿಶೇಷ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಸ್ಥಿರಗೊಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 5 ಅಂಶ ಏರಿಕೆಯಾಗಿ, 77,505ಕ್ಕೆ ವಹಿವಾಟು ಅಂತ್ಯಗೊಂಡಿದೆ. ಒಂದು ಸಂದರ್ಭದಲ್ಲಿ 892 ಅಂಶ ಏರಿಕೆಯಾಗಿತ್ತು. ವಹಿವಾಟಿನ ಅಂತ್ಯಕ್ಕೆ ಏರಿಕೆಯನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶೇ 26 ಅಂಶ ಇಳಿಕೆಯಾಗಿ, 23,482ಕ್ಕೆ ಕೊನೆಗೊಂಡಿತು.

ಜೊಮಾಟೊ ಷೇರಿನ ಮೌಲ್ಯ ಶೇ 7ಕ್ಕೂ ಹೆಚ್ಚು ಏರಿಕೆಯಾಗಿದೆ. ಮಾರುತಿ ಸುಜುಕಿ, ಐಟಿಸಿ ಹೋಟೆಲ್ಸ್, ಐಟಿಸಿ, ಮಹೀಂದ್ರ ಆ್ಯಂಡ್ ಮಹೀಂದ್ರ, ಏಷ್ಯನ್ ಪೇಂಟ್ಸ್, ಟೈಟನ್ ಮತ್ತು ಇಂಡಸ್ ಇಂಡ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಹೆಚ್ಚಳವಾಗಿದೆ.

ಪವರ್ ಗ್ರಿಡ್, ಲಾರ್ಸೆನ್ ಆ್ಯಂಡ್ ಟೊಬ್ರೊ, ಎನ್‌ಟಿಪಿಸಿ, ಅಲ್ಟ್ರಾಟೆಕ್ ಸಿಮೆಂಟ್, ಎಚ್‌ಸಿಎಲ್ ಟೆಕ್, ಟೆಕ್ ಮಹೀಂದ್ರ, ಇನ್ಫೊಸಿಸ್ ಮತ್ತು ಅದಾನಿ ಪೋರ್ಟ್ಸ್ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹1,188 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

‘ಬಜೆಟ್‌ನಲ್ಲಿ ಬಂಡವಾಳ ವೆಚ್ಚವು ಶೇ 10ರಷ್ಟು ಕಡಿಮೆಯಾಗಿದೆ. ಇದರಿಂದ ಬಜೆಟ್ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇದು ಹೂಡಿಕೆದಾರರ ವಿಶ್ವಾಸವನ್ನು ಕುಗ್ಗಿಸಿದೆ. ಹಾಗಾಗಿ, ಷೇರುಪೇಟೆಯಲ್ಲಿ ಮಂದಗತಿಯ ವಹಿವಾಟಿಗೆ ಕಾರಣವಾಯಿತು’ ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಉತ್ಪಾದನೆ ಕೊರತೆ: ಮಾರುಕಟ್ಟೆಯಲ್ಲಿ ಹೆಚ್ಚಿದ ಬೇಡಿಕೆ

ಬಿಳಿ ಕಾಳುಮೆಣಸು ದರ ಏರಿಕೆ

• ರಾಜೇಂದ್ರ ಹೆಗಡೆ

ಶಿರಸಿ: ಹಲವು ವರ್ಷಗಳಿಂದ ಏರದ ದರ, ಕೂಲಿಯಾಳುಗಳ ಕೊರತೆಯಿಂದ ಬೇಡಿಕೆಗೆ ತಕ್ಕಷ್ಟು ಉತ್ಪಾದನೆ ಯಿಲ್ಲದ ಕಾರಣ ಬಿಳಿ ಕಾಳುಮೆಣಸು (ಬೋಳಕಾಳು) ದರ ಮಾರುಕಟ್ಟೆಯಲ್ಲಿ ದಿಢೀರ್ ಏರಿಕೆಯಾಗಿದ್ದು, ಒಂದು ಲಕ್ಷದ ಗಡಿ ದಾಟಿ ಮುನ್ನುಗ್ಗುತ್ತಿದೆ.

ಕಾಳುಮೆಣಸಿನ ಸಿಪ್ಪೆ ಬೇರ್ಪಡಿಸಿ ತಯಾರಿಸುವ ಬಿಳಿ ಬಣ್ಣದ ಕಾಳುಮೆಣಸಿಗೆ ಪ್ರತಿ ಕ್ವಿಂಟಲ್‌ಗೆ ಗರಿಷ್ಠ ₹1.06 ಲಕ್ಷ ದರ ಬೆಳೆಗಾರರಿಗೆ ಲಭಿಸುತ್ತಿದೆ. ಈ ದರ ತಿಂಗಳ ಹಿಂದಷ್ಟೇ ₹70 ಸಾವಿರದ ಸನಿಹವಿತ್ತು. ಅದೇ ಕಪ್ಪು ಕಾಳುಮೆಣಸಿಗೆ ಪ್ರಸ್ತುತ ಗರಿಷ್ಠ ₹65 ಸಾವಿರ ದರವಿದೆ.

'ಗುಣಮಟ್ಟದ ಹಾಗೂ ಸಂಪೂರ್ಣ ಬೆಳೆದ, ಹಣ್ಣಾದ ಕಾಳುಮೆಣಸನ್ನು ಬಳ್ಳಿಯಿಂದ ಬಿಡಿಸಿ, ಅದರಿಂದ ಕಾಳು ಪ್ರತ್ಯೇಕಿಸಿ ನೀರಿನಲ್ಲಿ 10–15 ದಿನ ನೆನೆಸಿಡಬೇಕು. ಕಾಳಿನ ಮೇಲ್ಪದರ ತೆಗೆದು, ನಿರ್ದಿಷ್ಟ ಬಿಸಿಲಿನಲ್ಲಿ ಒಣಗಿಸಿ ಬಿಳಿ ಮೆಣಸು ಸಿದ್ಧಪಡಿಸಬೇಕು. ಇದನ್ನು ಬೇರ್ಪಡಿಸುವ ಕೆಲಸವು ಕಾರ್ಮಿಕ ಕೇಂದ್ರಿತವಾದ್ದರಿಂದ ಆರೇಳು ವರ್ಷಗಳಿಂದ ಬೆಳೆಗಾರರು ಅಷ್ಟಾಗಿ ಇದರತ್ತ ಆಸಕ್ತಿ ವಹಿಸುತ್ತಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿ ಬಿಳಿ ಕಾಳುಮೆಣಸಿನ ತೀವ್ರ ಕೊರತೆ ಉಂಟಾಗಿರುವ ಸಾಧ್ಯತೆಯಿದೆ. 2010ರ ಸಾಲಿನಲ್ಲಿ 400–500 ಕ್ವಿಂ.ಗೂ ಹೆಚ್ಚು ಸಹಕಾರಿ ವ್ಯವಸ್ಥೆಯಡಿ ಮಾರಾಟವಾಗುತ್ತಿದ್ದ ಬಿಳಿ ಕಾಳುಮೆಣಸು ಕಳೆದ ವರ್ಷಗಳಲ್ಲಿ 150 ಕ್ವಿಂಟಾಲ್‌ಗೂ ಕಡಿಮೆ ಮಾರಾಟವಾಗಿದೆ’ ಎಂಬುದು ಶಿರಸಿಯ ಸಹಕಾರಿ ಸಂಘದ ಪ್ರಮುಖರೊಬ್ಬರ ಮಾಹಿತಿ.

'ಹಲವು ವರ್ಷಗಳಿಂದ ಕ್ವಿಂಟಲ್ ಕಪ್ಪು ಕಾಳುಮೆಣಸಿನ ದರಕ್ಕಿಂತ ₹10- ₹12 ಸಾವಿರ ಮಾತ್ರ ಬಿಳಿ ಕಾಳುಮೆಣಸಿನ ದರ ಹೆಚ್ಚಿತ್ತು. ಈ ಅಂತರದಲ್ಲಿ ಕಪ್ಪು ಕಾಳು ಮಾಡುವುದು ಲಾಭದಾಯಕ. ಕಾರಣ ಬಿಳಿಕಾಳು ಮಾಡಿ ದರದಲ್ಲಿ ಕೈಸುಟ್ಟುಕೊಳ್ಳುವ ಬದಲು ಬೆಳೆಗಾರರು ಕಪ್ಪು ಕಾಳುಮೆಣಸು ಮಾಡಿ ಮಾರುತ್ತಿದ್ದರು. ಇದರಿಂದ ಮಾರುಕಟ್ಟೆಯಲ್ಲಿ ಬೇಡಿಕೆಯಷ್ಟು ಪೂರೈಕೆಯಿಲ್ಲದ ಕಾರಣ ದರ ಏರುತ್ತ ಸಾಗುತ್ತಿದೆ’ ಎನ್ನುತ್ತಾರೆ ಶಿರಸಿಯ ಬೆಳೆಗಾರ ಸತೀಶ ಹೆಗಡೆ.

ಕೃತಕ ಕಾಳುಮೆಣಸು ಮಾರಾಟ ಹಾವಳಿ

ಕಪ್ಪು ಹಾಗೂ ಬಿಳಿ ಕಾಳುಮೆಣಸಿನ ನಡುವೆ ಕ್ವಿಂಟಲ್‌ಗೆ ಅಂದಾಜು ₹40 ಸಾವಿರ ವ್ಯತ್ಯಾಸವಿದೆ. ಹೀಗಾಗಿ ಸ್ಥಳೀಯ ವರ್ತಕರಿಂದ ಕಪ್ಪು ಕಾಳುಮೆಣಸು ಖರೀದಿಸುವ ಹೊರ ರಾಜ್ಯದ ಮಧ್ಯವರ್ತಿಗಳು ಅದಕ್ಕೆ ರಾಸಾಯನಿಕ ಹಾಕಿ ಕೃತಕವಾಗಿ ಬಿಳಿ ಕಾಳುಮೆಣಸು ಮಾಡಿ ಮಾರುಕಟ್ಟೆಗೆ ಬಿಡುತ್ತಿದ್ದಾರೆ ಎಂಬುದು ವ್ಯಾಪಾರಿಗಳ ದೂರಾಗಿದೆ. ಇದರಿಂದ ಹೃದಯ, ಕ್ಯಾನ್ಸರ್ ಸಂಬಂಧಿ ಆರೋಗ್ಯ ಔಷಧಿಗಳು, ನೋವು ನಿವಾರಕ ಮಾತ್ರೆಗಳು, ನೂಡಲ್ಸ್ ನಂಥ ಆಹಾರ ಪದಾರ್ಥಗಳಿಗೆ ಬಿಳಿ ಕಾಳುಮೆಣಸನ್ನು ಹೆಚ್ಚಾಗಿ ಬಳಕೆ ಮಾಡುವುದರಿಂದ ಭವಿಷ್ಯದಲ್ಲಿ ಕಲಬೆರಕೆಯ ಕಾರಣದಿಂದ ಉತ್ತಮ ದರ್ಜೆಯ ಉತ್ಪನ್ನಕ್ಕೂ ದರ ಕುಸಿಯುವ ಆತಂಕ ಬೆಳೆಗಾರರದ್ದಾಗಿದೆ.

ಕೆಲ ವರ್ಷಗಳಿಂದ ಬಿಳಿ ಕಾಳುಮೆಣಸು ಮಾಡಲು ಬೆಳೆಗಾರರು ಆಸಕ್ತಿ ತೋರಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿ ಅಭಾವ ಸೃಷ್ಟಿಯಾಗಿದ್ದು, ದರ ಇನ್ನಷ್ಟು ಹೆಚ್ಚುವ ಸಾಧ್ಯತೆಯಿದೆ

ರಾಜಾರಾಮ ನಾಯ್ಕ, ಕಾಳುಮೆಣಸು ವರ್ತಕ

ತಾಯಿ ಶವದ ಜತೆಗೆ 9 ದಿನ ಕಳೆದ ಪುತ್ರಿಯರು

ಹೈದರಾಬಾದ್ (ಪಿಟಿಐ): ತಾಯಿ ಸಾವಿನಿಂದ ಖಿನ್ನತೆಗೆ ಒಳಗಾದ ಇಬ್ಬರು ಪುತ್ರಿಯರು ಶವದ ಜತೆಗೆ ಮನೆಯೊಳಗೆ ಒಂಬತ್ತು ದಿನಗಳು ಕಳೆದಿರುವ ಹೃದಯ ವಿದ್ರಾವಕ ಘಟನೆ ನಗರದಲ್ಲಿ ನಡೆದಿದೆ.

45 ವರ್ಷದ ಮಹಿಳೆ ಜ.23ರಂದು ಮಲಗಿದ್ದವರು ಏಳಲೇ ಇಲ್ಲ. ತಾಯಿ ಮೃತಪಟ್ಟಿರುವುದು ಗಮನಕ್ಕೆ ಬರುತ್ತಿದ್ದಂತೆ 22 ಮತ್ತು 25 ವರ್ಷದ ಇಬ್ಬರು ಪುತ್ರಿಯರು ಮನೆ ಬಾಗಿಲು ಬಂದ್ ಮಾಡಿಕೊಂಡು ಒಳಗೆ ಒಂಬತ್ತು ದಿನಗಳನ್ನು ಕಳೆದಿದ್ದಾರೆ. ಅಕ್ಕಪಕ್ಕದ ಮನೆಗಳ ನಿವಾಸಿಗಳಿಗಳ ಗಮನಕ್ಕೂ ಇದು ಬಂದಿಲ್ಲ. ಕೊನೆಗೆ ಜ.31ರಂದು ಸಂಜೆ ಈ ಇಬ್ಬರು ಹೆಣ್ಣುಮಕ್ಕಳು ಮನೆಯಿಂದ ಹೊರಬಂದು, ಸ್ಥಳೀಯ ಶಾಸಕರ ಕಚೇರಿಗೆ ಹೋಗಿ, ತಮ್ಮ ತಾಯಿಯ ಅಂತ್ಯಕ್ರಿಯೆ ನಡೆಸಲು ಹಣವಿಲ್ಲ ಎಂದು ಅಳಲು ತೋಡಿಕೊಂಡಿದ್ದಾರೆ. ಶಾಸಕರ ಕಚೇರಿ ಸಿಬ್ಬಂದಿ, ಪೊಲೀಸರನ್ನು ಸಂಪರ್ಕಿಸಲು ಹೇಳಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ, ಈ ಸಂಗತಿ ಗೊತ್ತಾಗಿದೆ. ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಇವರ ತಂದೆ ಹಲವು ವರ್ಷಗಳ ಹಿಂದೆಯೇ ಕುಟುಂಬ ತೊರೆದು ಹೋಗಿದ್ದಾರೆ. ಅವರು ಎಲ್ಲಿದ್ದಾರೆ ಎಂಬುದು ಗೊತ್ತಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಇಸ್ರೇಲ್‌ನ ಬಂಧನದಿಂದ ಶನಿವಾರ ಬಿಡುಗಡೆಗೊಂಡ ಪ್ಯಾಲೆಸ್ಟೀನ್ ಕೈದಿಯೊಬ್ಬರು ರಮಲ್ಲಾಗೆ ಬಸ್‌ನಲ್ಲಿ ಬಂದಾಗ ಜಮಾಯಿಸಿದ್ದ ಜನರು – ಎಎಫ್‌ಪಿ ಚಿತ್ರ

ಇಸ್ರೇಲ್‌ನಿಂದ ಕೈದಿಗಳ ಬಿಡುಗಡೆ

ಓಫರ್ ಮಿಲಿಟರಿ ಜೈಲು, (ವೆಸ್ಟ್‌ಬ್ಯಾಂಕ್), (ಎಪಿ): ಕದನ ವಿರಾಮ ಒಪ್ಪಂದದ ಅನ್ವಯ ಹಮಾಸ್ ಬಂಡುಕೋರರು ಮೂವರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ ನಂತರ ಇಸ್ರೇಲ್, ಪ್ಯಾಲೆಸ್ಟೀನಿ ಕೈದಿಗಳನ್ನು ಶನಿವಾರ ಬಿಡುಗಡೆ ಮಾಡಿತು.

ಓಫರ್ ಮಿಲಿಟರಿ ಜೈಲಿನಲ್ಲಿ ಸೆರೆಯಲ್ಲಿದ್ದ 32 ಕೈದಿಗಳು ಬಸ್‌ನಲ್ಲಿ ವೆಸ್ಟ್‌ಬ್ಯಾಂಕ್‌ಗೆ ತೆರಳಿದರು. ಸುಮಾರು 150 ಇತರ ಯುದ್ಧ ಕೈದಿಗಳನ್ನು ಗಾಜಾಗೆ ಕಳುಹಿಸಲಾಗುತ್ತಿದೆ ಅಥವಾ ಗಡೀಪಾರು ಮಾಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ದೀರ್ಘಾವಧಿ ಹಾಗೂ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ 183 ಪ್ಯಾಲೆಸ್ಟೀನಿಯನ್ ಕೈದಿಗಳು ಬಿಡುಗಡೆಗೊಂಡಿದ್ದಾರೆ. ಇವರಲ್ಲಿ ಯಾವುದೇ ವಿಚಾರಣೆಯಿಲ್ಲದೆ 2023ರ ಅ.7ರಂದು ಬಂಧನಕ್ಕೊಳಗಾಗಿದ್ದ 111 ಜನರು ಇದ್ದಾರೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ.

‘ಜಿಬಿಎಸ್’ನಿಂದ ಬಾಲಕಿ ಸಾವಿನ ಶಂಕೆ

ಗುವಾಹಟಿ (ಪಿಟಿಐ): ಅಸ್ಸಾಂನ 17 ವರ್ಷದ ಬಾಲಕಿಯೊಬ್ಬರು ಶಂಕಿತ ‘ಗೀಲನ್ ಬಾರೆ’ (ಜಿಬಿಎಸ್) ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

ಈ ಋತುವಿನಲ್ಲಿ ರಾಜ್ಯದಲ್ಲಿ ಪತ್ತೆಯಾಗಿರುವ ಮೊದಲ ಪ್ರಕರಣವಿದು ಎಂದು ವೈದ್ಯರು ಶನಿವಾರ ತಿಳಿಸಿದ್ದಾರೆ.

ಜಿಬಿಎಸ್ ಸೋಂಕಿನಿಂದ ಬಾಲಕಿಯು ಸಾವಿಗೀಡಾಗಿರುವ ಬಗ್ಗೆ ಆಸ್ಪತ್ರೆ ಮತ್ತು ರಾಜ್ಯ ಆರೋಗ್ಯ ಇಲಾಖೆ ಅಧಿಕೃತವಾಗಿ ದೃಢಪಡಿಸಿಲ್ಲ.

‘12ನೇ ತರಗತಿಯ ವಿದ್ಯಾರ್ಥಿನಿಯನ್ನು ಹತ್ತು ದಿನಗಳ ಹಿಂದೆ ಪ್ರತೀಕ್ಷಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಲ್ಲಿ ಜಿಬಿಎಸ್ ಸೋಕು ಪತ್ತೆಯಾಗಿತ್ತು. ಅವರ ಆರೋಗ್ಯ ಸ್ಥಿತಿ ತೀವ್ರವಾಗಿ ಹದಗೆಟ್ಟಿದ್ದರಿಂದ ವೆಂಟಿಲೇಟರ್ ಸಹಾಯದೊಂದಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಶುಕ್ರವಾರ ರಾತ್ರಿ ಅವರು ಮೃತಪಟ್ಟರು’ ಎಂದು ಮಕ್ಕಳ ತಜ್ಞವೈದ್ಯರೊಬ್ಬರು ತಿಳಿಸಿದ್ದಾರೆ.

‘ರಾಜ್ಯದಲ್ಲಿ ಪ್ರತಿವರ್ಷ ಜಿಬಿಎಸ್ ಪ್ರಕರಣಗಳು ಪತ್ತೆಯಾಗುತ್ತಿರುತ್ತವೆ ಮತ್ತು ಅದು ತೀವ್ರತೆಯನ್ನು ಹೊಂದಿರುವುದಿಲ್ಲ’ ಎಂದು ಹಿರಿಯ ವೈದ್ಯರೊಬ್ಬರು ತಿಳಿಸಿದ್ದಾರೆ.

ಛತ್ತೀಸಗಢ 8 ನಕ್ಸಲರ ಹತ್ಯೆ

ಬಿಜಾಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಬಿಜಾಪುರದಲ್ಲಿ, ಭದ್ರತಾ ಪಡೆಗಳು ಹಾಗೂ ನಕ್ಸಲರ ನಡುವೆ ನಡೆದ ಎನ್‌ಕೌಂಟರ್‌ನಲ್ಲಿ ಎಂಟು ನಕ್ಸಲರು ಮೃತಪಟ್ಟಿದ್ದಾರೆ.

ನಕ್ಸಲರಿಂದ ಬಂದೂಕು ಹಾಗೂ ಬ್ಯಾರಲ್ ಗ್ರೆನೇಡ್ ಲಾಂಚರ್ ಸೇರಿದಂತೆ ಹಲವು ಶಸ್ತ್ರಾಸ್ತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಬಿಜಾಪುರ ಜಿಲ್ಲೆಯ ಗಂಗಲೂರ್ ಠಾಣಾ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ನಕ್ಸಲರು ಅಡಗಿರುವ ಖಚಿತ ಮಾಹಿತಿ ಆಧರಿಸಿ ಶುಕ್ರವಾರ ಜಂಟಿ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. 8 ನಕ್ಸಲರ ಮೃತದೇಹಗಳು ದೊರಕಿದ್ದು, ಕಾರ್ಯಾಚರಣೆ ಮುಂದುವರಿದಿದೆ’ ಎಂದು ಐಜಿಪಿ (ಬಸ್ತರ್ ವಲಯ) ಸುಂದರ್ ರಾಜ್ ಪಿ ಅವರು ತಿಳಿಸಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

1st Year Remembrance

Smt. Ankamma

(Wife of N.A.Krishna Reddy, Swagath Enterprises)

Birth : 8-12-1944 Death : 2-2-2024

Your life was a blessing, your memory is a treasure.
You are loved beyond words and missed beyond measure.
Life has been so different without you,
but we still feel you by our side.
There has not been a day you haven't crossed our minds.
Your laughter, your knowledge
your love are etched in our hearts.

Fondly remembered by
Shri. N.A.Krishna Reddy and Family members

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

PREM INDUSTRIES Plastic Injection Moulding Plant @ Mysore, Requires Production Head & Manager, Quality Head & Manager. Minimum 7 Years Experience in Operations & Position with Complete Knowledge in Process / Plastic Moulds. Contact: hr@premind.com 8105305827/ 9364005127

General

OFFICE ASSISTANTS Private Limited company, Peenya seeks fresh_graduates for various roles in Front office, Accounts, HR, Sales and Commercial functions. Please send your resume to freshgraduates25@gmail.com

LAB CHEMIST Reputed Manufacturing company in Peenya looking for Retired LAB_CHEMIST in Analytical Procedures. Please send your CV to labchemist25@gmail.com

Multiple Vacancy

ಅಡುಗೆ ಕೆಲಸ ಹಾಗೂ ಚಾಲಕರಾಗಿ ಕೆಲಸ ಮಾಡಲು ಗಂಡ- ಹೆಂಡತಿ ಕುಟುಂಬ ಬೇಕಾಗಿದ್ದಾರೆ. 3 ಜನರ ಕುಟುಂಬಕ್ಕೆ ಉತ್ತಮ ಸಂಬಳ, ಊಟ- ವಸತಿ ಸೌಕರ್ಯ ನೀಡಲಾಗುವುದು. ಪೊಲೀಸ್ ಪರಿಶೀಲನೆ ಕಡ್ಡಾಯ. ಸಂಪರ್ಕಿಸಿ: 9741900909

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ ಬೇಕಾಗಿದ್ದಾರೆ. ಬನ್ನೇರುಘಟ್ಟ ರಸ್ತೆ, ಬೆಂಗಳೂರು. ವೇತನ: 17-25 ಸಾವಿರ. ಊಟ+ವಸತಿ ಸೌಲಭ್ಯ ನೀಡಲಾಗುತ್ತದೆ. ಸಮಯ: ಬೆಳಿಗ್ಗೆ 8 ರಿಂದ ರಾತ್ರಿ8. ಸಂ: 8050666007/ 9880266007

ರಿಯಲ್ ಎಸ್ಟೇಟ್ ಸೆಲ್ಲಿಂಗ್

Agricultural Land Converted

Mysore

LAND SALE in Mysur City 30 to 150 Acres MUDA Limit, 1.45cr. Per Acre. 9980577227.

Agricultural Land

Tumkur

3ACRES AGRICULTURE Land for Sale in Prime Spot near Gubbi, Very fertile Soil with Borewell &120 coconut trees. Call: 9902030976.

Kanakapura Road

PROPERTIES FOR Sale. Flats, Plots. JP Nagar, Vajarahalli, Talaghattapura Metro, Kothanur Dinne, Poornapragna Nagar. Sarakki Homes, 9741812054.

Sites

Peenya

4800SQFT. PLOT For Sale in Nelagadaranahalli (N.G.Halli), Prime Spot near NTTF Suitable for Residential/ Commercial Purposes. Contact: 9902030976.

ವ್ಯಾಪಾರ

Business to Business

Business

ತತ್‌ಕ್ಷಣ ಸೇವೆಗಳ ಕಂಪನಿಯು ತನ್ನ ಫ್ರ್ಯಾಂಚೈಸ್ ಅನ್ನು 4 ಲಕ್ಷಕ್ಕೆ ನೀಡುತ್ತಿದೆ ಮತ್ತು 400 ಚದರ ಅಡಿ ಕಚೇರಿ ಸ್ಥಳವನ್ನು ನೀಡುತ್ತಿದೆ. ತಿಂಗಳಿಗೆ ಒಂದು ಲಕ್ಷ ಲಾಭವನ್ನು ಪಡೆಯಬಹುದು. 8861367034 ನಲ್ಲಿ ನಮ್ಮನ್ನು ಸಂಪರ್ಕಿಸಿ.

ಪ್ರವಾಸ

Travel

144 ವರ್ಷಗಳಿಗೊಮ್ಮೆ ಬರುವ ಮಹಾಕುಂಭಮೇಳ ಪ್ರಯುಕ್ತ 15.2.2025ರಿಂದ 10ದಿನಗಳ ಪ್ರವಾಸ. ಪ್ರಯಾಗ್ ರಾಜ್, ಆಯೋಧ್ಯ,ಕಾಶಿ,ಪರ್ಲೆ, ತುಳಜಪುರ, ಸುರೇಂದ್ರಪುರಿ, ಯಾದಗಿರಿಗುಡ್ಡ. 20.2.2025ರಿಂದ 10ದಿನಗಳ ವೈಷ್ಣೋದೇವಿ, ವಾಘ ಬಾರ್ಡರ್, ಕುಲುಮನ್ನಾಲಿ, ಸಿಮ್ಲಾ, ಅಮೃತಸರ್, ದೆಹಲಿ, ಚಂಢೀಗಢ, ಕುರುಕ್ಷೇತ್ರ. 20.2.2025ರಿಂದ 4ದಿನಗಳ ಶಿರಡಿ, ಕೊಲ್ಲಾಪುರ, ಪಂಡಾರಪುರ, ಕೂಡಲಸಂಗಮ,ಬಿಜಾಪುರ, ಶನಿಸಿಂಗಪುರ. ಶ್ರೀಗುರುರಾಜ ಟ್ರಾವೆಲ್ಸ್, ಕೋಲಾರ-9900124333, 9611082432, 8123099913

PROPERTY CORNER

COMMERCIAL SPACE AVAILABLE FOR RENT ONLY

1) KALYANA MANTAPA 2) CORPORATE OFFICE 3) GARMENTS 4) EDUCATION INSTITUTION

BUILD AREA OF TOTAL 3 FLOOR - 21000 SQFT PARKING AREA: 1 ACRE

FACILITIES
1. CAR PARKING
2. ELECTRICITY (85 KV)
3. LIFT
4. 17 A/C ROOMS
5. KITCHEN EQUPMENTS
6. 2000 MEMBERS VESSLS
7. GENERATOR (DG)
8 DINING TABLE SET 400 MEMBER & 600 CUSHION CHAIR

Address: Attach to Outer Ring Road, Near Indian Oil Petrol Bunk, Veerasagara Tumakuru. Contact Deatails: 99646 18277 / 86608 53006

05.03.2025 ರಿಂದ 17ದಿನಗಳ ಭುವನೇಶ್ವರ್,ಕೊನಾರ್ಕ್ ಪುರಿಜಗನ್ನಾಥ್ ಕಾಶಿ,ಅಲಹಾಬಾದ್ ಅಯೋಧ್ಯ,ನೇಪಾಳ ಪಶುಪತಿನಾಥ ದರ್ಶನ ಪೋಖ್ರ,ಮುಕ್ತಿನಾಥ್ 12.05.2025 ರಿಂದ ಚಾರ್ದಾಮ್‌ಯಾತ್ರೆ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70. 9342287551 8050629305

23.04. 2025, 16.05.2025 ರಿಂದ 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ 10ದೇಶಗಳು. ಪ್ರೇಕ್ಷಣೀಯ ಸ್ಥಳಗಳು ಮತ್ತು ಊಟ, ವಸತಿ ತೆರಿಗೆ ಟಿಪ್ಸ್ ಟೋಲ್ ವಿಮೆದರ ಟೂರ್ ಮ್ಯಾನೇಜರ್ ಬೆಂಗಳೂರಿಂದ ಬೆಂಗಳೂರಿನ ತನಕ ಎಲ್ಲ ಸೇರಿರುತ್ತದೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ ಬಸವನಗುಡಿ ಬೆಂಗಳೂರು-04, 9900080794, 9611329473

ಮಹಾಕುಂಭಮೇಳ ಸ್ಪೆಷಲ್: ವಿಮಾನದಲ್ಲಿ 24.2.2025 ರಂದು 6`ದಿನಗಳು ಪ್ರಯಾಗ್`ರಾಜ್,ಕಾಶಿ ಅಯೋಧ್ಯ,ಗಯಾ. ಚಾರ್`ಧಾಮ್`ಸ್ಪೆಷಲ್`ಯಾತ್ರೆ: 13.5.2025 ರಿಂದ 14`ದಿನಗಳು ಕೇದಾರನಾಥ್, ಬದರಿನಾಥ್ (ಪುಷ್ಕರ`ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ,ಇತ್ಯಾದಿ ಸಂಪರ್ಕಿಸಿ: ಕೆ.ಪಿ.ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.

28.2.25 ಕೇರಳ: 5 ದಿನ. 14.3.25 ಶ್ರೀಶೈಲ ಮಂತ್ರಾಲಯ ಹೈದರಾಬಾದ್ 5 ದಿನಗಳು 15.3.25 ರಾಜಸ್ಥಾನ 9 ದಿನ 17.3.25 ಪ್ರಯಾಗ್ ರಾಜ್ ಕಾಶಿ 25.3.25 ಮೂರು ಜ್ಯೋತಿರ್ಲಿಂಗ ಶಿರಡಿ 4 ದಿನಗಳು. 2.4.25 ಕಲ್ಕತ್ತಾ ಪುರಿ ಜಗನ್ನಾಥ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ವಾಹನ

Four Wheelers Selling

Others

SALE ISUZU DMAX CREW-CAB BOLERO CAMPER CASH VAN BOLERO PICKUP YELLOW BOARD 9606450151 CLASSIC AUTOMOTIVES

ಪ್ರಜಾವಾಣಿ ಕ್ಲಾಸಿಫೈಡ್ಸ್ ಸಾರ್ವಜನಿಕ ಪ್ರಕಟಣೆ www.dhclassifieds.com BOOK NOW BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS @500/-* PER SQCM *Conditions apply ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9886213331 9901641752

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರಾಷ್ಟ್ರೀಯ ಕ್ರೀಡಾಕೂಟ: ಫೈನಲ್‌ನಲ್ಲಿ ಉತ್ತರಾಖಂಡ ವಿರುದ್ಧ ಗೆಲುವು

ಕರ್ನಾಟಕ ಬ್ಯಾಡ್ಮಿಂಟನ್ ತಂಡಕ್ಕೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪುರುಷರ ಬ್ಯಾಡ್ಮಿಂಟನ್ ತಂಡವು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಜಯಿಸಿತು.

ರಾಷ್ಟ್ರೀಯ ಚಾಂಪಿಯನ್ ರಘು ಎಂ. ಅವರನ್ನು ಒಳಗೊಂಡ ಕರ್ನಾಟಕ ತಂಡವು ಶನಿವಾರ ನಡೆದ ಫೈನಲ್ ಹಣಾಹಣಿಯಲ್ಲಿ ಆತಿಥೇಯ ಉತ್ತರಾಖಂಡ ತಂಡವನ್ನು 3–1ರಿಂದ ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿತು.

ಸಿಂಗಲ್ಸ್ ವಿಭಾಗದ ಮೊದಲ ಸ್ಪರ್ಧೆಯಲ್ಲಿ 26 ವರ್ಷ ವಯಸ್ಸಿನ ರಘು 21-16, 17-21, 21-16ರ ಮೂರು ಗೇಮ್‌ಗಳ ರೋಚಕ ಹಣಾಹಣಿಯಲ್ಲಿ ಚಿರಾಗ್ ಸೇನ್ ಅವರನ್ನು ಮಣಿಸಿ, ಕರ್ನಾಟಕ ತಂಡಕ್ಕೆ ಆರಂಭಿಕ ಮುನ್ನಡೆ ಒದಗಿಸಿದರು.

ಎರಡನೇ ಸಿಂಗಲ್ಸ್‌ನಲ್ಲಿ 18 ವರ್ಷ ವಯಸ್ಸಿನ ತುಷಾರ್ ಸುವೀರ್ ಜಯಸಾಧಿಸಿ, ಕರ್ನಾಟಕದ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ಅವರು 21-18, 18-21, 21-16ರಿಂದ ಧ್ರುವ ನೇಗಿ ಅವರನ್ನು ಹಿಮ್ಮೆಟ್ಟಿಸಿದರು. ಆದರೆ, ಡಬಲ್ಸ್‌ನಲ್ಲಿ ನಿತಿನ್ ಎಚ್.ವಿ. ಮತ್ತು ಅಶಿತ್ ಸೂರ್ಯ ನಿರಾಸೆ ಮೂಡಿಸಿತು. ಈ ಜೋಡಿಯು 14-21, 17-21ರಿಂದ ಚಯಾನಿತ್ ಜೋಶಿ ಮತ್ತು ಧ್ರುವ್ ರಾವತ್ ವಿರುದ್ಧ ಪರಾಭವಗೊಂಡಿತು. ಮೂರನೇ ಸಿಂಗಲ್ಸ್‌ನಲ್ಲಿ ಭಾರ್ಗವ್ ಎಸ್. 21-12, 23-21ರ ನೇರ ಗೇಮ್‌ಗಳಿಂದ ಧ್ರುವ್ ರಾವತ್ ಅವರನ್ನು ಮಣಿಸಿ, ಕರ್ನಾಟಕಕ್ಕೆ ಚಿನ್ನವನ್ನು ಖಚಿತಪಡಿಸಿದರು.

ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಕರ್ನಾಟಕ ಪುರುಷರ ಬ್ಯಾಡ್ಮಿಂಟನ್ ತಂಡ

ಈಜು: ಮತ್ತೆ ಮೂರು ಚಿನ್ನ

ಹಲ್ದ್ವಾನಿ (ಪಿಟಿಐ): ಕರ್ನಾಟಕದ ಈಜುಪಟುಗಳು ಹಲ್ದ್ವಾನಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪ್ರಾಬಲ್ಯ ಮುಂದುವರಿಸಿದ್ದಾರೆ. ಶನಿವಾರ ಈಜು ಸ್ಪರ್ಧೆಯಲ್ಲಿ ಮೂರು ಚಿನ್ನ ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದರು.

ಪುರುಷರ 50 ಮೀಟರ್ ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ಕರ್ನಾಟಕದ ವಿದಿತ್ ಎಸ್. ಶಂಕರ್ ಕೂದಲೆಳೆ ಅಂತರದಲ್ಲಿ ಚಿನ್ನದ ಪದಕ ಗೆದ್ದರು. ಅವರು 20.12 ಸೆಕೆಂಡ್‌ಗಳಲ್ಲಿ ಗುರಿಮುಟ್ಟಿದರೆ, ತಮಿಳುನಾಡಿನ ಎಂ.ಎಸ್.ಯದೇಶ್ ಬಾಬು (20.20ಸೆ) ಬೆಳ್ಳಿ ಗೆದ್ದರೆ, ಎಸ್. ಧನುಷ್ (20.21ಸೆ) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ವಿದಿತ್ ಎಸ್. ಶಂಕರ್

ಪುರುಷರ ಮತ್ತು ಮಹಿಳೆಯರ 4x200 ಮೀಟರ್ ಫ್ರೀಸ್ಟೈಲ್ ರಿಲೆ ಸ್ಪರ್ಧೆಯಲ್ಲೂ ಕರ್ನಾಟಕ ತಂಡಗಳು ಚಿನ್ನದ ಸಾಧನೆ ಮಾಡಿದವು. ದಕ್ಷಣ್ ಎಸ್, ಶಾನ್ ಗಂಗೂಲಿ, ಅನೀಶ್ ಎಸ್. ಗೌಡ ಮತ್ತು ಶ್ರೀಹರಿ ನಟರಾಜ್ ಅವರನ್ನು ಒಳಗೊಂಡ ಪುರುಷರ ತಂಡವು 7 ನಿಮಿಷ 45.82 ಸೆಕೆಂಡ್‌ಗಳಲ್ಲಿ ಗುರಿ ತಲುಪಿತು. ಗುಜರಾತ್ ಮತ್ತು ಮಹಾರಾಷ್ಟ್ರ ಕ್ರಮವಾಗಿ ನಂತರದ ಸ್ಥಾನ ಪಡೆದವು.

ಶಿರೀನ್, ಶಾಲಿನಿ ಆರ್. ದೀಕ್ಷಿತ್, ಮೀನಾಕ್ಷಿ ಮೆನನ್ ಮತ್ತು ಧಿನಿಧಿ ದೇಸಿಂಗು ಅವರನ್ನು ಒಳಗೊಂಡ ಕರ್ನಾಟಕ ಮಹಿಳಾ ತಂಡವು 8 ನಿಮಿಷ 54.87 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿತು. ಮಹಾರಾಷ್ಟ್ರ ಮತ್ತು ತಮಿಳುನಾಡು ತಂಡಗಳು ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದವು.

ಮಹಿಳೆಯರ 200 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ ಕರ್ನಾಟಕದ ಸುಹಾಸಿನಿ ಘೋಷ್ 2ನಿ.24.53 ಸೆಕೆಂಡ್‌ಗಳಲ್ಲಿ ಗುರಿಮುಟ್ಟಿ ಬೆಳ್ಳಿ ಪದಕ ಗೆದ್ದರು. ಮಹಾರಾಷ್ಟ್ರದ ಧ್ರುತಿ ಅಹಿರ್ವಾಲ್ ಮತ್ತು ಅಸ್ಸಾಂನ ಅಸ್ತಾ ಚೌಧರಿ ಕ್ರಮವಾಗಿ ಚಿನ್ನ ಮತ್ತು ಕಂಚು ಜಯಿಸಿದರು. ಕರ್ನಾಟಕದ ಈಜುಪಟುಗಳು ಈತನಕ 11 ಚಿನ್ನ, ಐದು ಬೆಳ್ಳಿ, ಮೂರು ಕಂಚು ಸೇರಿದಂತೆ ಒಟ್ಟು 19 ಪದಕಗಳು ಗೆದ್ದಿದ್ದಾರೆ

ಕೊಕ್ಕೊ: ಮಹಾರಾಷ್ಟ್ರ ತಂಡಗಳು ಚಾಂಪಿಯನ್

ಹಲ್ದ್ವಾನಿ (ಪಿಟಿಐ): ಮಹಾರಾಷ್ಟ್ರದ ಪುರುಷ ಮತ್ತು ಮಹಿಳಾ ತಂಡಗಳು ರಾಷ್ಟ್ರೀಯ ಕ್ರೀಡಾಕೂಟದ ಕೊಕ್ಕೊ ಸ್ಪರ್ಧೆಯಲ್ಲಿ ಪ್ರಾಬಲ್ಯ ಮೆರೆದು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿವೆ. ಎರಡೂ ವಿಭಾಗಗಳ ಬೆಳ್ಳಿ ಪದಕಗಳು ಒಡಿಶಾ ತಂಡಗಳ ಪಾಲಾಗಿವೆ.

ಪುರುಷರ ವಿಭಾಗದಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳ ತಂಡಗಳು; ಮಹಿಳೆಯರ ವಿಭಾಗದಲ್ಲಿ ಕರ್ನಾಟಕ ಮತ್ತು ದೆಹಲಿ ತಂಡಗಳು ಜಂಟಿಯಾಗಿ ಕಂಚು ಗೆದ್ದವು.

ರಾಷ್ಟ್ರೀಯ ಕ್ರೀಡಾಕೂಟ: ಪದಕ ಪಟ್ಟಿ

	ತಂಡ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಎಸ್‌ಎಸ್‌ಸಿಬಿ	14	7	5	26
2	ಕರ್ನಾಟಕ	13	5	5	23
3	ಮಹಾರಾಷ್ಟ್ರ	11	18	12	41
4	ಮಣಿಪುರ	11	9	4	24
5	ಮಧ್ಯಪ್ರದೇಶ	9	5	4	18

ರಾಜ್ಯ ಹಾಕಿ ತಂಡಕ್ಕೆ ಸುನಿಲ್, ಸೌಮ್ಯಶ್ರೀ ಸಾರಥ್ಯ

ಬೆಂಗಳೂರು: ಸುನಿಲ್ ಎಸ್.ವಿ. ಮತ್ತು ಸೌಮ್ಯಾಶ್ರೀ ಎನ್.ಆರ್. ಅವರು ಉತ್ತ-ರಾಖಂಡದಲ್ಲಿ ನಡೆಯುತ್ತಿರುವ 38ನೇ ರಾಷ್ಟ್ರೀಯ ಕೀಡಾಕೂಟದಲ್ಲಿ ಕ್ರಮವಾಗಿ ಕರ್ನಾಟಕದ ಪುರುಷರ ಮತ್ತು ಮಹಿಳೆಯರ ಹಾಕಿ ತಂಡವನ್ನು ಮುನ್ನಡೆಸಲಿದ್ದಾರೆ.

ಪುರುಷರ ತಂಡವು ಫೆ.4ರಂದು ಕರ್ನಾಟಕ ತಂಡ ಪಂಜಾಬ್ ವಿರುದ್ಧ ಅಭಿಯಾನ ಆರಂಭಿಸಲಿದೆ. ಮಹಿಳೆಯರ ತಂಡವು ಮೊದಲ ಪಂದ್ಯದಲ್ಲಿ ಕರ್ನಾಟಕ ತಂಡವು ಮಧ್ಯಪ್ರದೇಶವನ್ನು ಎದುರಿಸಲಿದೆ.

ಪುರುಷರ ತಂಡ: ಸುನಿಲ್ ಎಸ್.ವಿ. (ನಾಯಕ), ಪ್ರಣಮ್ ಗೌಡ ವೈ.ಎಂ, ಸೋಮಯ್ಯ ಕೆ.ಪಿ, ಆಭರಣ್ ಸುದೇವ್ ಬಿ, ಮಜ್ಜಿ ಗಣೇಶ, ದೀಕ್ಷಿತ್ ಎ.ಎಚ್, ಪೃಥ್ವಿರಾಜ್ ಜಿ.ಎನ್, ಮೋಹಿತ್ ಎಚ್. ಎಸ್, ಭರತ್ ಎಂ. ಕುರ್ತಕೋಟಿ, ಶೇಷೇಗೌಡ ಬಿ.ಎಂ, ಮೊಹಮ್ಮದ್ ರಹೀಲ್ ಮೊಹಸೀನ್, ಚೆಲ್ಸಿಯಾ ಮೇದಪ್ಪ ಬಿ.ಎನ್, ಶಾನ್ ಮೋನಪ್ಪ ಎಂ.ಎ, ಚೇತನ್ ಎಂ. ಕರಿಸಿರಿ, ಲಿಖಿತ್ ಬಿ.ಎಂ, ಯತೀಶ್ ಕುಮಾರ್ ಬಿ, ಸುನಿಲ್ ಪಿ.ಬಿ, ಶಮಂತ್ ಸಿ.ಎಸ್. **ಮಹಿಳೆಯರ ತಂಡ:** ಸೌಮ್ಯಾಶ್ರೀ ಎನ್. ಆರ್. (ನಾಯಕಿ), ವಿದ್ಯಾಶ್ರೀ ವಿ, ಆದಿರಾ ಎಸ್, ಕೃತಿಕಾ ಎಸ್.ಪಿ, ನಿಶಾ ಪಿ.ಸಿ, ಸಹನಾ ಸಿ.ಎಂ, ತಾಜ್ ಬೆಳ್ಳಿಯಪ್ಪ ಕೆ, ಯಶಿಕಾ ಎಂ.ಜಿ, ಅಂಜಲಿ ಎಚ್.ಆರ್, ಕಾವ್ಯಶ್ರೀ ಎಂ.ಡಿ, ದೀಪ್ತಿ ಕೆ.ಎ, ದೇಚಮ್ಮ ಪಿ.ಜಿ, ದೀಪಾ ಶರ್ಮಾ, ಚಂದನಾ ಜೆ, ಪೂಜಾ ಎಂ.ಡಿ, ರಕ್ಷಿತಾ ಜೆ, ಶೈನಾ ತಂಗಮ್ಮ ಎಂ.ಪಿ, ಯಮುನಾ ಎಸ್

2ನೇ ಪ್ರಶಸ್ತಿ ಮೇಲೆ ಭಾರತ ಕಣ್ಣು

19 ವರ್ಷದೊಳಗಿನ ಮಹಿಳಾ ವಿಶ್ವಕಪ್ ಫೈನಲ್ ಇಂದು

ಕ್ವಾಲಾಲಂಪುರ (ಪಿಟಿಐ): ಹಾಲಿ ಚಾಂಪಿಯನ್ ಭಾರತ 19 ವರ್ಷದೊಳಗಿನ ಮಹಿಳಾ ತಂಡವು ಸತತ ಎರಡನೇ ಬಾರಿ ವಿಶ್ವಕಪ್ ಜಯದ ಮೇಲೆ ಕಣ್ಣಿಟ್ಟಿದೆ.

ಭಾನುವಾರ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಕರ್ನಾಟಕದ ಆಟಗಾರ್ತಿ ನಿಕಿ ಪ್ರಸಾದ್ ನಾಯಕತ್ವದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಸೆಣಸಲಿದೆ.

ಈ ಬಾರಿಯ ಟೂರ್ನಿಯಲ್ಲಿ ಒಂದೂ ಪಂದ್ಯ ಸೋಲದೇ ಫೈನಲ್ ತಲುಪಿರುವ ಭಾರತ ತಂಡವು ಫೈನಲ್‌ನಲ್ಲಿ ಜಯಿಸುವ ಫೆವರಿಟ್ ಆಗಿದೆ. ವೆಸ್ಟ್ ಇಂಡೀಸ್ (9 ವಿಕೆಟ್), ಮಲೇಷ್ಯಾ (10 ವಿಕೆಟ್), ಶ್ರೀಲಂಕಾ (60 ರನ್), ಬಾಂಗ್ಲಾದೇಶ (8 ವಿಕೆಟ್), ಸ್ಕಾಟ್ಲೆಂಡ್ (150 ರನ್) ಮತ್ತು ಇಂಗ್ಲೆಂಡ್ (ಸೆಮಿಫೈನಲ್‌ನಲ್ಲಿ 9 ವಿಕೆಟ್) ತಂಡಗಳ ಎದುರು ನಿಕಿ ಪ್ರಸಾದ್ ಬಳಗವು ಪಾರಮ್ಯ ಸಾಧಿಸಿತ್ತು.

ತಂಡದ ಆರಂಭಿಕ ಬ್ಯಾಟರ್ ಜಿ. ತ್ರಿಷಾ 6 ಇನಿಂಗ್ಸ್‌ಗಳಿಂದ 265 ರನ್ ಸೇರಿಸಿದ್ದಾರೆ. ಟೂರ್ನಿಯಲ್ಲಿ ಹೆಚ್ಚು ರನ್ ಗಳಿಸಿರುವ ಆಟಗಾರ್ತಿಯಾಗಿದ್ದಾರೆ. ಎಡಗೈ ಬ್ಯಾಟರ್ ಜಿ. ಕಮಲಿನಿ (135 ರನ್) ಮೂರನೇ ಸ್ಥಾನದಲ್ಲಿದ್ದಾರೆ. ಆದರೆ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಗೆ ಕಳೆದ ಪಂದ್ಯಗಳಲ್ಲಿ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಇರುವ ಅವಕಾಶ ಸಿಕ್ಕಿಲ್ಲ. ಒಂದೊಮ್ಮೆ ಫೈನಲ್‌ನಲ್ಲಿ ಆರಂಭಿಕ ಜೋಡಿ ವಿಫಲರಾದರೆ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಎಚ್ಚರಿಕೆಯಿಂದ ಹೊಣೆ ನಿಭಾಯಿಸಬೇಕಿದೆ.

ಬೌಲಿಂಗ್‌ನಲ್ಲಿ ಎಡಗೈ ಸ್ಪಿನ್ ಜೋಡಿ ವೈಷ್ಣವಿ ಶರ್ಮಾ (15 ವಿಕೆಟ್) ಮತ್ತು ಆಯುಷಿ ಶುಕ್ಲಾ (12 ವಿಕೆಟ್) ಅವರು ಉತ್ತಮ ಲಯದಲ್ಲಿದ್ದಾರೆ. ಅಂತಿಮ ಪಂದ್ಯದಲ್ಲಿ ಇವರಿಬ್ಬರ ಪಾತ್ರ ಮಹತ್ವದಾಗಲಿದೆ.

19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್‌ನೊಂದಿಗೆ ದಕ್ಷಿಣ ಆಫ್ರಿಕಾ ತಂಡದ ನಾಯಕಿ ಕೈಲಾ ರೇನೆಕೆ ಮತ್ತು ಭಾರತ ತಂಡದ ನಾಯಕಿ ನಿಕಿ ಪ್ರಸಾದ್ –ಐಸಿಸಿ ಎಕ್ಸ್ ಚಿತ್ರ

ದಕ್ಷಿಣ ಆಫ್ರಿಕಾ ತಂಡವು ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದೆ. ಸೆಮಿಫೈನಲ್‌ನಲ್ಲಿ ಬಲಿಷ್ಠ ಆಸ್ಟ್ರೇಲಿಯಾ ವಿರುದ್ಧ 5 ವಿಕೆಟ್‌ಗಳಿಂದ ಗೆದ್ದಿತ್ತು. ಇದೀಗ ಹಾಲಿ ಚಾಂಪಿಯನ್ ಬಳಗಕ್ಕೆ ಆಘಾತ ನೀಡುವ ಛಲದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 12 (ಭಾರತೀಯ ಕಾಲಮಾನ)

ಕ್ರೀಡಾ ಬಜೆಟ್ ಹೆಚ್ಚಳ: ಖೇಲೊ ಇಂಡಿಯಾಗೆ ಸಿಂಹಪಾಲು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿರುವ ಖೇಲೊ ಇಂಡಿಯಾ ಕಾರ್ಯಕ್ರಮಕ್ಕೆ ಈ ಬಾರಿ ಬಜೆಟ್‌ನಲ್ಲಿ ಅನುದಾನದ ಸಿಂಹಪಾಲು ಲಭಿಸಿದೆ. ಕ್ರೀಡಾ ಮತ್ತು ಯುವ ಇಲಾಖೆಗೆ ನೀಡಿರುವ ಅನುದಾನದಲ್ಲಿ ಕಳೆದ ಸಲಕ್ಕಿಂತ ₹ 351. 98 ಕೋಟಿ ಹೆಚ್ಚು ಹಣವನ್ನು ಮೀಸಲಿಡಲಾಗಿದೆ.

ಶನಿವಾರ ಕೇಂದ್ರ ಬಜೆಟ್ ಮಂಡಿಸಿದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅನುದಾನ ಘೋಷಿಸಿದರು.

2025–26ನೇ ಸಾಲಿನಲ್ಲಿ ಖೇಲೊ ಇಂಡಿಯಾಗೆ ₹ 1 ಸಾವಿರ ಕೋಟಿ ಹೆಚ್ಚುವರಿ ಹಣವನ್ನು ಮೀಸಲಿಡಲಾಗಿದೆ. 2024–2025ರಲ್ಲಿ ರಲ್ಲಿ ₹800 ಕೋಟಿ ಹೆಚ್ಚುವರಿಯಾಗಿ ನೀಡಲಾಗಿತ್ತು.

ಒಟ್ಟಾರೆ ಯುವ ಮತ್ತು ಕ್ರೀಡಾ ಸಚಿವಾಲಯಕ್ಕೆ ಒಟ್ಟು ₹ 3,794.30 ಕೋಟಿ ಮೀಸಲಿಡಲಾಗಿದೆ.

‘ಈ ಬಜೆಟ್‌ನಿಂದಾಗಿ ಕ್ರೀಡೆಗಳ ಮೂಲಭೂತ ಸೌಕರ್ಯ ಹೆಚ್ಚಲಿದೆ. ಯುವಸಮೂಹಕ್ಕೆ ಪ್ರಾಶಸ್ತ್ಯ ನೀಡಲಾಗಿದೆ ಮತ್ತು ಮುಂದಿನ ಪೀಳಿಗೆಯ ಅಥ್ಲೀಟ್‌ಗಳನ್ನು ಪ್ರೋತ್ಸಾಹಿಸಲು ನೆರವಾಗಲಿದೆ’ ಎಂದು ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಎಕ್ಸ್‌ನಲ್ಲಿ ಬರೆದಿದ್ದಾರೆ.

ಮುಂದಿನ ವರ್ಷ ಒಲಿಂಪಿಕ್ಸ್, ಕಾಮನ್‌ವೆಲ್ತ್ ಮತ್ತು ಏಷ್ಯನ್ ಗೇಮ್ಸ್ ಕ್ರೀಡಾಕೂಟಗಳಿಲ್ಲ. ಆದ್ದರಿಂದ ಕ್ರೀಡಾ ಅನುದಾನವನ್ನು ಮೂಲಸೌಲಭ್ಯಗಳ ಅಭಿವೃದ್ಧಿಯ ದೃಷ್ಟಿಯಿಂದ ನೀಡಲಾಗಿದೆ.

ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ ನೀಡುವ ನೆರವನ್ನು ₹ 340 ಕೋಟಿಯಿಂದ ₹ 400 ಕೋಟಿಗೆ ಏರಿಸಲಾಗಿದೆ. ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ)ಕ್ಕೆ ₹ 815 ಕೋಟಿಯಿಂದ ₹ 830 ಕೋಟಿಗೆ ಹೆಚ್ಚಿಸಲಾಗಿದೆ.

ರಾಷ್ಟ್ರೀಯ ಉದ್ದೀಪನ ಮದ್ದು ಪರೀಕ್ಷಾ ಪ್ರಯೋಗಾಲಯಕ್ಕೆ ₹ 23 ಕೋಟಿಯನ್ನು ನಿಗದಿ ಮಾಡಲಾಗಿದೆ. ಕಳೆದ ಬಜೆಟ್‌ನಲ್ಲಿ ₹ 18.70 ಕೋಟಿ ನೀಡಲಾಗಿತ್ತು.

ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಘಟಕ (ನಾಡಾ)ದ ಬಜೆಟ್ ಅನ್ನು ₹ 20.30 ಕೋಟಿಯಿಂದ ₹ 24.30 ಕೋಟಿಗೆ ಹೆಚ್ಚಿಸಲಾಗಿದೆ.

ರಣಜಿ: ಭದ್ರತೆ ಮೀರಿ ಮೈದಾನಕ್ಕೆ ನುಗ್ಗಿದ ಕೊಹ್ಲಿ ಅಭಿಮಾನಿಗಳು

ನವದೆಹಲಿ (ಪಿಟಿಐ): ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದಲ್ಲಿ ಶನಿವಾರ ವಿರಾಟ್ ಕೊಹ್ಲಿಯ ಮೂವರು ಅಭಿಮಾನಿಗಳು ಭದ್ರತೆಯನ್ನು ಮುರಿದು ಮೈದಾನದೊಳಕ್ಕೆ ನುಗ್ಗಿದರು.

ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಅವರು ದೆಹಲಿ ತಂಡವನ್ನು ರೈಲ್ವೆಸ್ ವಿರುದ್ಧ ಪ್ರತಿನಿಧಿಸುತ್ತಿದ್ದಾರೆ. 13 ವರ್ಷಗಳ ನಂತರ ಅವರು ರಣಜಿ ಕ್ರಿಕೆಟ್ ಕಣಕ್ಕೆ ಮರಳಿದ್ದಾರೆ. ಅದರಿಂದಾಗಿ ಪಂದ್ಯದ ಆರಂಭಿಕ ದಿನದಿಂದಲೂ ಸಾವಿರಾರು ಅಭಿಮಾನಿಗಳು ಮೈದಾನಕ್ಕೆ ಲಗ್ಗೆ ಹಾಕುತ್ತಿದ್ದಾರೆ. ಪಂದ್ಯದ ಮೊದಲ ದಿನವೇ ಅಭಿಮಾನಿಯೊಬ್ಬ ಆಟ ನಡೆಯುತ್ತಿರುವಾಗಲೇ ಮೈದಾನಕ್ಕೆ ನುಗ್ಗಿ ವಿರಾಟ್ ಕೊಹ್ಲಿಯ ಕಾಲು ಮುಟ್ಟಿ ನಮಸ್ಕಾರ ಮಾಡಿದ್ದು ಸುದ್ದಿಯಾಗಿತ್ತು.

ಕ್ರೀಡಾಂಗಣದ ಬಿಷನ್ ಸಿಂಗ್ ಬೇಡಿ ಸ್ಟ್ಯಾಂಡ್‌ನಲ್ಲಿ ಅಭಿಮಾನಿಗಳಿಗೆ ಉಚಿತ ಪ್ರವೇಶ ನೀಡಲಾಗಿದೆ.

ಶನಿವಾರ ಊಟದ ವಿರಾಮಕ್ಕೂ ಮುಂಚಿನ ಓವರ್‌ನಲ್ಲಿ ಮೂವರು ಅಭಿಮಾನಿಗಳು ಭದ್ರತೆ ಉಲ್ಲಂಘಿಸಿದರು. ಕವರ್ಸ್‌ನಲ್ಲಿ ಫೀಲ್ಡಿಂಗ್ ಮಾಡುತ್ತಿದ್ದ ಕೊಹ್ಲಿಯವರತ್ತ ಅಭಿಮಾನಿಗಳು ದೌಡಾಯಿಸಿದರು. ಇದೇ ಹೊತ್ತಿಗೆ ಸುಮಾರು 20 ಜನ ಭದ್ರತಾ ಸಿಬ್ಬಂದಿಯೂ ಓಡಿ ಬಂದು ಅಭಿಮಾನಿ-ಗಳನ್ನು ಹೊರಗೆ ಕರೆದೊಯ್ದರು.

‘ಅವರಿಗೆ ಹೊಡೆಯಬೇಡಿ’ ಎಂದು ಕೊಹ್ಲಿ ಅವರು ಭದ್ರತಾ ಸಿಬ್ಬಂದಿಗೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ಕೆಲಹೊತ್ತು ಆಟ ಸ್ಥಗಿತವಾಗಿತ್ತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿ —ಪಿಟಿಐ ಚಿತ್ರ

ಡ್ರೆಸಿಂಗ್ ರೂಮ್ ಮತ್ತು ಗ್ಯಾಲರಿ ನಡುವಣ ಬೇಲಿಯ ಬಳಿ ಸುಮಾರು 500ಕ್ಕೂ ಹೆಚ್ಚು ಮಂದಿ ಜಮಾಯಿಸಿದ್ದರು. ವಿರಾಟ್ ಕುಳಿತಿದ್ದ ಜಾಗದ ಪಕ್ಕಕ್ಕೆ ತೆರಳುವ ಪ್ರಯತ್ನದಲ್ಲಿ ಕೆಲವರಿದ್ದರು. ಆದರೆ ಭದ್ರತಾ ಸಿಬ್ಬಂದಿ ಅವರನ್ನು ತಡೆದರು.

ಎರಡನೇ ಇನಿಂಗ್ಸ್ ಇಲ್ಲ: ಈ ಪಂದ್ಯದಲ್ಲಿ ದೆಹಲಿ ತಂಡವು ಇನಿಂಗ್ಸ್ ಮತ್ತು 19 ರನ್‌ಗಳಿಂದ ಜಯಿಸಿತು. ಅದರಿಂದಾಗಿ ದೆಹಲಿ ಎರಡನೇ ಇನಿಂಗ್ಸ್ ಬ್ಯಾಟಿಂಗ್ ಮಾಡಲಿಲ್ಲ. ಇದರಿಂದಾಗಿ ಅಭಿಮಾನಿಗಳಿಗೆ ಕೊಹ್ಲಿ ಬ್ಯಾಟಿಂಗ್ ನೋಡುವ ಮತ್ತೊಂದು ಅವಕಾಶ ಸಿಗಲಿಲ್ಲ. ಕೊಹ್ಲಿ ಮೊದಲ ಇನಿಂಗ್ಸ್‌ನಲ್ಲಿ 6 ರನ್ ಗಳಿಸಿ ಔಟಾಗಿದ್ದರು.

ನಿಶಾಂತ್ ಶತಕ • ಆತಿಥೇಯರಿಗೆ ಸೋಲು ತಪ್ಪಿಸುವ ಸವಾಲು • ಹಾರ್ದಿಕ್‌ರಾಜ್‌ಗೆ 3 ವಿಕೆಟ್

ಹರಿಯಾಣ ಬಳಗಕ್ಕೆ ಗೆಲುವಿನ ಕನಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಈಗಾಗಲೇ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಕೌಟ್ ಪ್ರವೇಶ ಕೈತಪ್ಪಿದ ಬೇಸರದಲ್ಲಿರುವ ಕರ್ನಾಟಕ ತಂಡದ ಗಾಯಕ್ಕೆ ಹರಿಯಾಣದ ನಿಶಾಂತ್ ಸಿಂಧು ಉಪ್ಪು ಸವರಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಆತಿಥೇಯ ತಂಡವು ಮೊದಲ ಇನಿಂಗ್ಸ್ ಮುನ್ನಡೆ ಗಳಿಸುವ ಆಸೆಯೂ ಶನಿವಾರ ಕಮರಿತು. ನಿಶಾಂತ್ (165; 184ಎ, 4X15, 6X6) ಅವರ ಅಬ್ಬರದ ಶತಕದ ಬಲದಿಂದ ಹರಿಯಾಣ ತಂಡವು ಮೊದಲ ಇನಿಂಗ್ಸ್‌ನಲ್ಲಿ 115.3 ಓವರ್‌ಗಳಲ್ಲಿ 450 ರನ್ ಗಳಿಸಿತು. 146 ರನ್‌ಗಳ ಮುನ್ನಡೆಯೂ ಸಾಧಿಸಿತು.

ಇದಕ್ಕುತ್ತರವಾಗಿ ಕರ್ನಾಟಕ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಮೂರನೇ ದಿನದಾಟದ ಮುಕ್ತಾಯಕ್ಕೆ 32 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 108 ರನ್ ಗಳಿಸಿದೆ. ದೇವದತ್ತ ಪಡಿಕ್ಕಲ್ (ಬ್ಯಾಟಿಂಗ್ 41) ಮತ್ತು ಸ್ಮರಣ್ ರವಿಚಂದ್ರನ್ (ಬ್ಯಾಟಿಂಗ್ 9) ಕ್ರೀಸ್‌ನ-ಲ್ಲಿದ್ದಾರೆ. ಲೆಕ್ಕ ಚುಕ್ತಾ ಮಾಡಲು ಇನ್ನೂ 38 ರನ್‌ಗಳು ಬೇಕು.

ಪಂದ್ಯದಲ್ಲಿ ಉಳಿದಿರುವ ಒಂದು ದಿನದಾಟದಲ್ಲಿ ಹರಿಯಾಣ ತಂಡವು ಕರ್ನಾಟಕ ತಂಡದ ಏಳು ವಿಕೆಟ್‌ಗಳನ್ನು ಬೇಗನೆ ಗಳಿಸಿ ಜಯದ ಸಂಭ್ರಮ ಆಚರಿಸುವ ಛಲದಲ್ಲಿದೆ. ಸದ್ಯ 26 ಅಂಕ ಹೊಂದಿರುವ ಹರಿಯಾಣ ಈ ಪಂದ್ಯದಲ್ಲಿ ಜಯಿಸಿದರೆ 6 ಅಂಕ ಸಿಗಲಿವೆ. ಕರ್ನಾಟಕ ತಂಡದ ಬ್ಯಾಟರ್‌ಗಳು ಜಿಗುಟುತನ ತೋರಿ ಪಂದ್ಯವನ್ನು ಡ್ರಾದತ್ತ ಕೊಂಡೊಯ್ದರೆ ಹರಿಯಾಣಕ್ಕೆ 3 ಅಂಕಗಳು ಲಭಿಸುತ್ತವೆ. ಇದರಿಂದಾಗಿ ಸದ್ಯ ಪಾಯಿಂಟ್ ಪಟ್ಟಿಯ ಮೊದಲ ಸ್ಥಾನದಲ್ಲಿರುವ ಕೇರಳ (28) ತಂಡವನ್ನು ಹಿಂದಿಕ್ಕುವ ಅಂಕಿತಕುಮಾರ್ ಬಳಗವು ಅಗ್ರಸ್ಥಾನ-ಕ್ಕೇರಲಿದೆ.

ಹರಿಯಾಣ ತಂಡದ ಬ್ಯಾಟರ್ ನಿಶಾಂತ್ ಸಿಂಧು ಶತಕ ಸಂಭ್ರಮ ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ನಿಶಾಂತ್ ಸದ್ದು: ನಿಶಾಂತ್ ಸಿಂಧು ಅವರು 2022ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದ ಉಪನಾಯಕರಾಗಿದ್ದರು. ಈ ಎಡಗೈ ಬ್ಯಾಟರ್ ಕರ್ನಾಟಕದ ಅನುಭವಿ ಬೌಲರ್‌ಗಳಾದ ಪ್ರಸಿದ್ಧಕೃಷ್ಣ, ವಿದ್ವತ್ ಕಾವೇರಪ್ಪ ಮತ್ತು ವಿ. ಕೌಶಿಕ್ ಅವರನ್ನು ಭರ್ತಿ ಆತ್ಮವಿಶ್ವಾಸದಿಂದ ಎದುರಿಸಿದರು. ವಯಸ್ಸಿಗೂ ಮೀರಿದ ಪ್ರಬುದ್ಧತೆಯು ಅವರ ಬ್ಯಾಟಿಂಗ್‌ನಲ್ಲಿ ಎದ್ದು ಕಂಡಿತು.

ಶುಕ್ರವಾರ ದಿನದಾಟದ ಅಂತ್ಯಕ್ಕೆ 35 ರನ್ ಗಳಿಸಿ ಕ್ರೀಸ್‌ನಲ್ಲಿದ್ದ ನಿಶಾಂತ್ ಮೂರನೇ ದಿನ ಆತಿಥೇಯ ಬೌಲರ್‌ಗಳ ಬೆವರಿಳಿಸಿದರು. 20 ವರ್ಷದ ನಿಸಾಂತ್ ಅರ್ಧಡಜನ್ ಸಿಕ್ಸರ್‌ಗಳನ್ನು ಸಿಡಿಸಿದರು. ಪುಲ್, ಡ್ರೈವ್ ಮತ್ತು ಸ್ವೀಪ್‌ಗಳ ಚೆಂದದ ಬ್ಯಾಟಿಂಗ್ ಅವರದ್ದಾಗಿತ್ತು. ಶನಿವಾರ ಮಧ್ಯಾಹ್ನದವರೆಗೂ ಕ್ರೀಡಾಂ-ಗಣದಲ್ಲಿ ಅವರ ಬ್ಯಾಟಿಗೆ ಅಪ್ಪಳಿಸುತ್ತಿ-ದ್ದ ಚೆಂಡಿನ ಸದ್ದು ಮತ್ತು ಹರಿಯಾಣ ಡಗ್‌ಔಟ್‌ನಿಂದ ಚಪ್ಪಾಳೆ, ಕೇಕೆಗಳ ಶಬ್ದಗಳು ಪ್ರತಿಧ್ವನಿಸುತ್ತಿದ್ದವು. ಅವರಿಗೆ ಜಯಂತ್ ಯಾದವ್ (32 ರನ್), ಅನ್ಶುಲ್ ಕಾಂಭೋಜ್ (25 ರನ್) ಮತ್ತು ಅನುಜ್ ಠಕ್ರಾಲ್ (25 ರನ್) ಅವರೂ ಉತ್ತಮ ಜೊತೆ ನೀಡಿದರು. ಈ ನಡುವೆ ಪ್ರಸಿದ್ಧ ಕೃಷ್ಣ (105ಕ್ಕೆ3), ವಿ. ಕೌಶಿಕ್ (63ಕ್ಕೆ1) ಹಾಗೂ ಸ್ಪಿನ್ನರ್ ಹಾರ್ದಿಕ್ ರಾಜ್ (73ಕ್ಕೆ3) ವಿಕೆಟ್ ಗಳಿಸಿದರು. ಯಶೋವರ್ಧನ್ ಪರಂತಾಪ್ ಶುಕ್ರವಾರ ಎರಡು ವಿಕೆಟ್ ಗಳಿಸಿದ್ದರು. ನಾಯಕ ಮಯಂಕ್ ಅಗರವಾಲ್ ಕೂಡ 2 ಓವರ್ ಬೌಲಿಂಗ್ ಮಾಡಿದರು. ಅನುಜ್ ಠಕ್ರಾಲ್ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು.

ಹಾರ್ದಿಕ್ ಎಸೆತದಲ್ಲಿ ನಿಶಾಂತ್ ದೊಡ್ಡ ಹೊಡೆತಕ್ಕೆ ಯತ್ನಿಸಿದರು. ಸ್ಮರಣ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಅದರೊಂದಿಗೆ ಇನಿಂಗ್ಸ್‌ಗೂ ತೆರೆಬಿತ್ತು. ಚಹಾ ವಿರಾಮಕ್ಕೆ 35 ನಿಮಿಷಗಳು ಬಾಕಿ ಇದ್ದವು. ಈ ಅವಧಿಯಲ್ಲಿ ಕರ್ನಾಟಕದ ಆರಂಭಿಕ ಬ್ಯಾಟರ್ ಕೆ.ವಿ. ಅನೀಶ್ (4; 19ಎ) ಔಟಾದರು. ಅಲ್ಲಿಯವರೆಗೂ ಶಾಂತವಾಗಿದ್ದ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಚಲನ ಮೂಡಿತು. ರಾಹುಲ್.. ರಾಹುಲ್.. ಕೂಗುಗಳು ಪ್ರತಿಧ್ವನಿಸಿದವು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 101 ಓವರ್‌ಗಳಲ್ಲಿ 304. ಹರಿಯಾಣ: 115.3 ಓವರ್‌ಗಳಲ್ಲಿ 450 (ನಿಶಾಂತ್ ಸಿಂಧು 165, ಜಯಂತ್ ಯಾದವ್ 32; ಪ್ರಸಿದ್ಧ ಕೃಷ್ಣ 105ಕ್ಕೆ 3, ಹಾರ್ದಿಕ್ ರಾಜ್ 73ಕ್ಕೆ 3). ಎರಡನೇ ಇನಿಂಗ್ಸ್: ಕರ್ನಾಟಕ: 32 ಓವರ್‌ಗಳಲ್ಲಿ 3ಕ್ಕೆ 108 (ಕೆ. ಎಲ್.ರಾಹುಲ್ 43, ದೇವದತ್ತ ಪಡಿಕ್ಕಲ್ ಔಟಾಗದೇ 41).

ರಾಹುಲ್ ಬ್ಯಾಟಿಂಗ್

ಭಾರತ ತಂಡದ ಆಟಗಾರ ಕೆ.ಎಲ್. ರಾಹುಲ್ ಅವರು ಸುಮಾರು ಒಂದೂವರೆ ಗಂಟೆ ಕ್ರೀಸ್‌ನಲ್ಲಿದ್ದರು. ಬ್ಯಾಕ್‌ಫುಟ್ ಡ್ರೈವ್, ಆಫ್ ಡ್ರೈವ್‌ಗಳನ್ನು ಆಡಿದ ಅವರು 7 ಬೌಂಡರಿಗಳನ್ನು ಹೊಡೆದರು. ಸೊಗಸಾದ ಪಾದಚಲನೆಯ ಮೂಲಕ ಅಭಿಮಾನಿಗಳಿಗೆ ರಸದೌತಣ ನೀಡಿದರು. ಅವರೊಂದಿಗೆ ಜೊತೆಯಾಟ ಕುದುರಿಸುವ ಹಾದಿಯಲ್ಲಿದ್ದ ಮಯಂಕ್ (6; 20ಎ) ಅವರಿಗೆ ಮಧ್ಯಮವೇಗಿ ಅಜಿತ್ ಚಾಹಲ್ ಕ್ಲೀನ್ ಬೌಲ್ಡ್ ಮಾಡುವ ಮೂಲಕ ಆಘಾತ ನೀಡಿದರು.

ರಾಹುಲ್ ಜೊತೆಗೂಡಿದ ದೇವದತ್ತ ಪಡಿಕ್ಕಲ್ 3ನೇ ವಿಕೆಟ್ ಪಾಲುದಾರಿಕೆಯಲ್ಲಿ 57 ರನ್ ಸೇರಿಸಿದರು. ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಅರ್ಧಶತಕದತ್ತ ಸಾಗಿದ್ದ ರಾಹುಲ್ ಅವರು ಅನುಜ್ ಠಕ್ರಾಲ್ ಎಸೆತದಲ್ಲಿ ಕ್ಲೀನ್‌ಬೌಲ್ಡ್ ಆದರು. ಮಧ್ಯ ಮತ್ತು ಆಫ್‌ಸ್ಟಂಪ್‌ಗಳೆರಡೂ ನೆಲಕಚ್ಚುವುದರೊಂದಿಗೆ ರಾಹುಲ್ ಆಟ ಮುಗಿಯಿತು.

ದೇವದತ್ತ ಜೊತೆ ಸೇರಿದ ಸ್ಮರಣ್ ವಿಕೆಟ್ ಪತನಕ್ಕೆ ಆಸ್ಪದ ನೀಡದೇ ದಿನದಾಟ ಮುಗಿಸಿದರು.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 2-2-2000

● **ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ ಕೇಂದ್ರ ಅಸ್ತು**

ನವದೆಹಲಿ, ಫೆ. 1– ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆಗೆ ಒಪ್ಪಿಗೆ ನೀಡಿದ್ದ ಕೇಂದ್ರ ಸಚಿವ ಸಂಪುಟವು ಇಂದು ಈ ಉದ್ದೇಶಿತ ವಿಮಾನ ನಿಲ್ದಾಣವನ್ನು ಈಗಾಗಲೇ ಗೊತ್ತುಪಡಿಸಿರುವ ದೇವನಹಳ್ಳಿ ಬಳಿಯಲ್ಲಿಯೇ ಸ್ಥಾಪಿಸುವುದಕ್ಕೆ ನಿರ್ಧಾರ ಕೈಗೊಂಡಿತು.

ಈ ಉದ್ದೇಶಿತ ವಿಮಾನ ನಿಲ್ದಾಣದ ಕಾಮಗಾರಿ ಮುಗಿದ ತಕ್ಷಣವೇ, ಈಗ ಚಾಲ್ತಿಯಲ್ಲಿರುವ ಎಚ್‌ಎಎಲ್ ವಿಮಾನ ನಿಲ್ದಾಣವನ್ನು ನಾಗರಿಕ ವಿಮಾನ ಸಂಚಾರಕ್ಕೆ ಮುಚ್ಚಲು ಸಂಪುಟ ತೀರ್ಮಾನಿಸಿದೆ ಎಂದು ನಾಗರಿಕ ವಿಮಾನ ಯಾನ ಖಾತೆಯನ್ನು ಈ ಹಿಂದೆ ಹೊಂದಿದ್ದ ಅನಂತ ಕುಮಾರ್ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 2-2-1975

● **ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ: ಚವಾಣ್**

ನವದೆಹಲಿ, ಫೆ. 1– ಪಾಕಿಸ್ತಾನದ ಪ್ರಧಾನಿ ಭುಟ್ಟೋ ಅವರು ಕಾಶ್ಮೀರದ ಬಗ್ಗೆ ಇತ್ತೀಚೆಗೆ ನೀಡಿದ ಹೇಳಿಕೆಯಿಂದ ಭಾರತದ ಆಂತರಿಕ ವ್ಯವಹಾರದಲ್ಲಿ ‘ನೇರ’ ಹಸ್ತಕ್ಷೇಪ ಮಾಡಿದಂತಾಗಿದೆ ಎಂದು ವಿದೇಶಾಂಗ ಮಂತ್ರಿ ಚವಾಣ್ ಇಂದು ತಿಳಿಸಿದರು.

‘ಭುಟ್ಟೋ ಅವರ ಹೇಳಿಕೆಯು ಪ್ರಚೋದನಾತ್ಮಕವಾಗಿದ್ದರೂ ಆ ಬಗ್ಗೆ ನಾವೇನೂ ತೀರಾ ಯೋಚನಾಕ್ರಾಂತರಾಗಿಲ್ಲ. ಪಾಕಿಸ್ತಾನದ ಪ್ರಧಾನಿಯವರ ಹೇಳಿಕೆಗೆ ಶೇಖ್ ಅಬ್ದುಲ್ಲಾ ಅವರೂ ಸೇರಿ ಜಮ್ಮು ಕಾಶ್ಮೀರದ ನಾಯಕರು ಈಗಾಗಲೇ ಸೂಕ್ತ ಉತ್ತರ ಕೊಟ್ಟಿದ್ದಾರೆ’ ಎಂದೂ ಅವರು ಹೇಳಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಫೆಬ್ರುವರಿ 2, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ಥಿ ಗಂ. 09-15 **ನಕ್ಷತ್ರ:** ಉತ್ತರಾಭಾದ್ರ ಗಂ. 24-53 **ಯೋಗ:** ಶಿವ ಗಂ. 09-14 ನಂತರ ಸಿದ್ಧ ಗಂ. 30-06 **ಕರಣ:** ವಿಷ್ಟಿ ಗಂ. 09-15, ಮಕರ ಮಾಸದ 19 ನೇ ದಿನ,
ಮಳೆನಕ್ಷತ್ರ: ಶ್ರವಣ 3. **ರಾಹುಕಾಲ:** ಸಾಯಂಕಾಲ 04-30 – 06-00
ಸೂರ್ಯೋದಯ: 07-00 **ಸೂರ್ಯಾಸ್ತ:** 06-28
ಮುಸ್ಲಿಂ ದಿನಾಂಕ: 03 ಶಬನ್
ದಿನ ವಿಶೇಷ: ವರದ ಚತುರ್ಥಿ **ಅದೃಷ್ಟ ಸಂಖ್ಯೆ:** 4, 11

ಮೇಷ: ಮಾತಿನಲ್ಲಿ ಬಿಗು ಮತ್ತು ಗಾಂಭೀರ್ಯವನ್ನು ಇಟ್ಟುಕೊಳ್ಳುವುದು ಗೌರವ ಹಾಗೂ ಪ್ರತಿಷ್ಠೆಯನ್ನು ಹೆಚ್ಚಿಸುತ್ತದೆ. ನಿಮ್ಮ ನಡವಳಿಕೆಯು ಸತ್ಯಮಾರ್ಗದಲ್ಲಿ ಹಾಗೂ ಪರರಿಗೆ ಅಹಿತವಾಗದಂತೆ ಇರಲಿ.

ವೃಷಭ: ಸ್ವಂತ ಉದ್ಯಮಿಗಳಿಗೆ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಎಲ್ಲ ರೀತಿಯ ಸಹಕಾರ ಸಿಗಲಿದೆ. ಸಹೋದರಿಯ ನಿಶ್ಚಿತಾರ್ಥ ಅಥವಾ ವಿವಾಹಕ್ಕಾಗಿ ಪೂರ್ವತಯಾರಿ ನಡೆಸುವಿರಿ.

ಮಿಥುನ: ಹಣ ಹೂಡಿಕೆಯಲ್ಲಿ ಶುದ್ಧ ಹಸ್ತವಾಗಿರುವುದು ಶ್ರೇಯಸ್ಸಿಗೆ ಮೂಲ ಕಾರಣವಾಗುತ್ತದೆ. ಫಲಪುಷ್ಪಗಳ ವ್ಯಾಪಾರಿಗಳಿಗೆ ಅಧಿಕ ಲಾಭವಾಗಲಿದೆ. ಸವಾಲುಗಳನ್ನು ಧೈರ್ಯವಾಗಿ ಎದುರಿಸಿ.

ಕರ್ಕಾಟಕ: ಗುರಿ ಸಾಧನೆಯತ್ತ ಶೀಘ್ರ ಕಾರ್ಯಪ್ರವೃತ್ತರಾಗುವುದು ಉತ್ತಮ. ನಿಮ್ಮ ಇಚ್ಛೆಯ ಅನುಸಾರವೇ ವೈವಾಹಿಕ ಜೀವನ ಆರಂಭವಾಗಲಿದೆ. ಪ್ರತಿಷ್ಠಿತ ಹುದ್ದೆಗಾಗಿ ಸೆಣೆಸಾಡುವಿರಿ.

ಸಿಂಹ: ಯೋಗ್ಯತೆ ಇಲ್ಲದವರಿಗೆ ಉದಾರತೆ ತೋರಿದರೆ ಆಪತ್ತು ಕಟ್ಟಿಟ್ಟ ಬುತ್ತಿ. ತಂದೆಯ ಮಾತಿನಂತೆ ನಡೆಯುವುದು ಶ್ರೇಯಸ್ಕರ. ಕಾರ್ಮಿಕರ ಬೇಡಿಕೆಗಳು ಈಡೇರಲಿವೆ.

ಕನ್ಯಾ: ವೃತ್ತಿಯಲ್ಲಿ ಅನುಸರಿಸುತ್ತಿರುವ ಮಾರ್ಗದ ಬಗ್ಗೆ ಅವಲೋಕಿಸಿ ಮುಂದೆ ಸಾಗುವುದು ಉತ್ತಮ. ಸಾಧನೆಯ ಹಾದಿಯಲ್ಲಿರುವ ನಿಮಗೆ, ಅಗತ್ಯಕ್ಕೆ ತಕ್ಕ ಸಹಚರರು ಸಿಗುವರು.

ತುಲಾ: ಆರೋಗ್ಯ ಕಾಪಾಡಿಕೊಳ್ಳಲು ಸಮಯಕ್ಕೆ ಸರಿಯಾಗಿ ಆಹಾರ ಸೇವಿಸುವುದು ಅತ್ಯಗತ್ಯ. ಸಹೋದರ–ಸಹೋದರಿಯರ ಸಮಾಗಮವು ಸಂತಸ ತರಲಿದೆ. ಗೃಹದಲ್ಲಿ ಸುಖ–ಶಾಂತಿ ಹೆಚ್ಚುತ್ತದೆ.

ವೃಶ್ಚಿಕ: ಜನರನ್ನು ಆಕರ್ಷಿಸುವ ಕಲೆ ನಿಮ್ಮಲ್ಲಿದ್ದು, ಆ ತಂತ್ರಗಾರಿಕೆಯನ್ನು ಬಳಸಿಕೊಂಡರೆ ವ್ಯವಹಾರದಲ್ಲಿ ಲಾಭ ಗಳಿಸುವಿರಿ. ಹಿಂದಿನ ತಪ್ಪುಗಳನ್ನು ಮನ್ನಿಸುವಂತೆ ಜಗನ್ಮಾತೆಯಲ್ಲಿ ಪ್ರಾರ್ಥಿಸಿ, ನಂತರ ಕಾರ್ಯಾರಂಭ ಮಾಡಿ.

ಧನು: ದೇವತಾ ಕಾರ್ಯಗಳಿಗೆ ಹಣ ವ್ಯಯವಾದರೂ, ಆದಾಯಕ್ಕೆ ಯಾವುದೇ ಕೊರತೆ ಇಲ್ಲ. ಮಹಿಳೆಯರಿಗೆ ನೌಕರಿಯಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು. ಪ್ರಯಾಣದ ವೇಳೆ ಜಾಗ್ರತೆವಹಿಸಿರಿ.

ಮಕರ: ಸಂಘರ್ಷಗಳಿಂದ ನೊಂದಿರುವ ನಿಮ್ಮ ಮನಸ್ಸಿಗೆ ಇಂದು ಒಂದು ವಿರಾಮ ಸಿಕ್ಕಂತಾಗುವುದು. ಹಳೆಯ ನೋವುಗಳನ್ನು ಮರೆತು, ಭವಿಷ್ಯದತ್ತ ಆಲೋಚಿಸುವುದು ಒಳಿತು.

ಕುಂಭ: ಆರಂಭಿಸಿದ ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ಧೈರ್ಯ ಹೆಚ್ಚುತ್ತದೆ. ಆದರೆ ಮುಕ್ತಾಯದ ಹಂತದ ಬಗ್ಗೆ ಎಚ್ಚರ ವಹಿಸಿರಿ. ಕಪ್ಪು ವಸ್ತ್ರ ಶುಭವನ್ನು ತರಲಿದೆ.

ಮೀನ: ಕೆಲಸದಲ್ಲಿ ಯಾವುದೇ ವಿಘ್ನಗಳು ಎದುರಾದರೂ, ಉತ್ತಮ ಫಲಿತಾಂಶವೇ ಸಿಗಲಿದೆ. ದೂರ ಪ್ರಯಾಣವನ್ನು ಸಾಧ್ಯವಾದಲ್ಲಿ ಮುಂದೂಡುವುದು ಉತ್ತಮ, ಇಲ್ಲವಾದಲ್ಲಿ ರಾಹುಕಾಲದಲ್ಲಿ ಸಂಚರಿಸಬೇಡಿ.

ಪದಬಂಧ 5941

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಆಟಕ್ಕೆ ಉಪಯೋಗಿಸುವ ಚಪ್ಪಟೆ ಬಿಲ್ಲೆ (3)
4.ದಡಿ ಹಿಡಿದಿರುವ ಟೊಣಪ (3)
5.ಯುದ್ಧದಲ್ಲಿ ಸತ್ತ ವೀರರ ಸ್ಮರಣಾರ್ಥ ನೆಡುವ ಕಲ್ಲು (4)
6.ರಾತ್ರಿ ಸಂಚರಿಸುವ ಕಳ್ಳ ಪಿಶಾಚಿ ಇತ್ಯಾದಿ (4)
7.ಸಂಗಡವಿದ್ದಾಗ ಕಾಣಿಸಿದ ಸಣ್ಣಕೋಟೆ! (2)
10.ಪ್ರತಿ ತೋರಿಸುವಾಗ ಬಂದು ಅಡ್ಡಿ ಮಾಡುವುದು! (5)
12.ಅಕ್ಷಯ ಸಂವತ್ಸರದಲ್ಲಿ ಅಡರಿದ ರೋಗ (2)
14.ಬೋಗುಣಿ ಹಿಡಿದು ನಗದಾಗಿ ಮೊದಲು ವ್ಯಾಪಾರ ಮಾಡು (4)
17.ನಡುವೆ ಮಾಯವಿದ್ದಾಗ ಕಪಟವರಿಯದವಳು ಕಂಡಾಳು! (4)
18.ಬಟ್ಟೆ ಮಡಿ ಮಾಡುವವನು (3)
19.ಆರಂಭವಾಗಿರುವ ಬೇಸಾಯ! (3)

ಮೇಲಿಂದ ಕೆಳಕ್ಕೆ
1.ಬಾಣದಲ್ಲಿರುವ ರಂಧ್ರ ಕಾಣುತ್ತಿದೆಯೇ? (3)
2.ಹಾಲು ಬೆಣ್ಣೆ ಮುಂತಾದವು (3)
3.ಅಂಗಾಗಗಳಿಗೆ ಸುಗಂಧ ಲೇಪನ (4)
5.ಈತ ಪರಾಕ್ರಮಿ ಸೈನಿಕ (4)
8.ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ (2)
9.ಅಕ್ಷರಜ್ಞ ಹಿಡಿದಿರುವ ಪಗಡೆಕಾಯಿ (2)
11.ತಿರುಕಿ ಹಿಡಿದಿರುವ ಭಿಕ್ಷಾಪಾತ್ರೆ (4)
13.ಜಮಖಾನದ ಮೇಲೆ ಕುಳಿತಿರುವ ಒಡತಿ (4)
15.ನಿಸ್ಸಾರವಾದುದು ಉಲ್ಟಾ ಆಗಿಬಿಟ್ಟಿದೆ (3)
16.ಇದು ಹಿಂದಿಯವನ ಆಡು (3)



5940ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಂಪ 4.ಅರ್ಧ 6.ಚಿತೆ 7.ಯಧೇಚ್ಛಾ 8.ಕಸ 10.ಮಚ್ಚರದಾನಿ 12.ವಿಧ 14.ಕಲಹ 15.ಮಂದ್ರ 16.ಸ್ತರ 17.ತಿಭ

ಮೇಲಿಂದ ಕೆಳಕ್ಕೆ: 2.ಪರಶುರಾಮ 3.ಕಂತೆ 4.ಅತಿರೇಕ 5.ಉದಯರವಿ 6.ಚಿಕವೀರರಾಜೇಂದ್ರ 9.ಸಮ್ಮೋಹನಾಸ್ತ್ರ 11.ನಿಕಟವರ್ತಿ 13.ಧರಾಮರ 15.ಮಂದೆ

ಸುಡೊಕು 6326

						8	2	
8		9						5
	6	5			2	3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6325 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಸೂರ್ಯ, ಸಂಜುಗೆ ಲಯಕ್ಕೆ ಮರಳುವ ಸವಾಲು

ಟಿ20: ಭಾರತ – ಇಂಗ್ಲೆಂಡ್ ಪಂದ್ಯ ಇಂದು: ಸಮಾಧಾನಕರ ಗೆಲುವಿನತ್ತ ಜೋಸ್ ಬಟ್ಲರ್ ಪಡೆ ಚಿತ್ತ

ಮುಂಬೈ (ಪಿಟಿಐ): ಇಂಗ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯನ್ನು ಭಾರತ ಈಗಾಗಲೇ ಕೈವಶ ಮಾಡಿಕೊಂಡಿದೆ. ಈಗ ಸರಣಿಯಲ್ಲಿ ಉಳಿದಿರುವ ಕೊನೆಯ ಪಂದ್ಯದಲ್ಲಿ ತಂಡದಲ್ಲಿರುವ ಕೆಲವು ದೌರ್ಬಲ್ಯಗಳನ್ನು ಸರಿಪಡಿಸಿಕೊಳ್ಳುವತ್ತ ಗಮನ ಕೊಡಲಿದೆ.

ಅದರಲ್ಲೂ ಪ್ರಮುಖವಾಗಿ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಸತತವಾಗಿ ಬ್ಯಾಟಿಂಗ್‌ನಲ್ಲಿ ವೈಫಲ್ಯ ಅನುಭವಿಸುತ್ತಿದ್ದಾರೆ. ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಐದನೇ ಪಂದ್ಯದಲ್ಲಿ ಲಯಕ್ಕೆ ಮರಳುವ ನಿರೀಕ್ಷೆಯಲ್ಲಿ ಇಬ್ಬರೂ ಬ್ಯಾಟರ್‌ಗಳಿದ್ದಾರೆ.

ಶುಕ್ರವಾರ ಪುಣೆಯಲ್ಲಿ ನಡೆದಿದ್ದ ನಾಲ್ಕನೇ ಪಂದ್ಯದಲ್ಲಿ ಸಂಜು, ಸೂರ್ಯ ಮತ್ತು ತಿಲಕ್ ವರ್ಮಾ ಅವರು ವೈಫಲ್ಯ ಅನುಭವಿಸಿದ್ದರು. ಅಭಿಷೇಕ್ ಶರ್ಮಾ

ಅಭ್ಯಾಸದ ವೇಳೆ ನಾಯಕ ಸೂರ್ಯ ಕುಮಾರ್ ಯಾದವ್ ಮತ್ತು ಸಂಜು ಸ್ಯಾಮ್ಸನ್ ಕಂಡಿದ್ದು ಹೀಗೆ

ಹಾಗೂ ರಿಂಕು ಸಿಂಗ್ ಸ್ವಲ್ಪಮಟ್ಟಿಗೆ ಚೇತರಿಕೆ ನೀಡಿದ್ದರು. ಆದರೆ ತಂಡವು ಸ್ಪರ್ಧಾತ್ಮಕ ಗಳಿಸಲು ಶಿವಂ ದುಬೆ ಮತ್ತು ಹಾರ್ದಿಕ್ ಪಾಂಡ್ಯ ಅವರ ಅಬ್ಬರದ ಬ್ಯಾಟಿಂಗ್ ಕಾರಣವಾಗಿತ್ತು. ಸ್ಪಿನ್ನರ್‌ಗಳಾದ ರವಿ ಬಿಷ್ಣೋಯಿ, ವರುಣ್ ಚಕ್ರವರ್ತಿ ಅವರು ಪರಿಣಾಮಕಾರಿ ದಾಳಿ ನಡೆಸಿದ್ದರು. ಅವರಿಗೆ ವೇಗಿ ಹರ್ಷಿತ್ ರಾಣಾ ಕೂಡ ಜೊತೆ ನೀಡಿದ್ದರು. ಅದರಿಂದಾಗಿ ತಂಡವು 15 ರನ್‌ಗಳಿಂದ ಗೆದ್ದು ಸರಣಿಯಲ್ಲಿ 3–1ರ ಮುನ್ನಡೆ ಸಾಧಿಸಿತು.

ಆಲ್‌ರೌಂಡರ್ ಶಿವಂ ದುಬೆ ಬದಲಿಗೆ ಡಗ್‌ಔಟ್‌ನಲ್ಲಿದ್ದ ಮತ್ತೊಮ್ಮೆ ಆಲ್‌ರೌಂಡರ್ ರಮಣದೀಪ್ ಸಿಂಗ್ ಸೂಕ್ತವಾದ ಬದಲಾವಣೆಯಾಗುತ್ತಿತ್ತು. ಆದರೆ ಬೌಲಿಂಗ್ ಮಾಡುವ ಸಂದರ್ಭದಲ್ಲಿ ವೇಗಿಯನ್ನು ತಂಡವು ಆಯ್ಕೆ ಮಾಡಿಕೊಂಡಿದ್ದನ್ನು ಇಂಗ್ಲೆಂಡ್ ಪ್ರಶ್ನಿಸಿದೆ. ಹರ್ಷಿತ್ ಅವರು 3 ವಿಕೆಟ್ ಗಳಿಸಿದ್ದರು.

ಈ ಪಂದ್ಯದಲ್ಲಿ ದುಬೆ ಮರಳುವ ಕುರಿತು ಖಚಿತವಾಗಿಲ್ಲ.

ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿ ಹಾಗೂ ಅರ್ಷದೀಪ್ ಸಿಂಗ್ ಅವರನ್ನು ಕಣಕ್ಕಿಳಿಸುವ ಚಿಂತನೆ ನಡೆದಿದೆ. ಅದಕ್ಕಾಗಿ ಯಾರಿಗೆ ವಿಶ್ರಾಂತಿ ಕೊಡಲಿದ್ದಾರೆಂಬುದನ್ನು ಕಾದು ನೋಡಬೇಕಿದೆ.

ಇಂಗ್ಲೆಂಡ್ ತಂಡಕ್ಕೆ ಈಗ ಸರಣಿ ಗೆಲುವಿನ ಅವಕಾಶ ಕೈತಪ್ಪಿದೆ. ಆದರೆ ಸೋಲಿನ ಅಂತರ ಕಡಿಮೆ ಮಾಡಿಕೊಳ್ಳಲು ಈ ಪಂದ್ಯವನ್ನು ಜಯಿಸುವ ಛಲದಲ್ಲಿದೆ. ಆರಂಭಿಕ ಬ್ಯಾಟರ್ ಬೆನ್ ಡಕೆಟ್ ಉತ್ತಮ ಲಯದಲ್ಲಿದ್ದಾರೆ. ಕಳೆದ ಪಂದ್ಯದಲ್ಲಿ ಹ್ಯಾರಿ ಬ್ರೂಕ್ ಕೂಡ ಮಿಂಚಿನ ವೇಗದಲ್ಲಿ ಅರ್ಧಶತಕ ದಾಖಲಿಸಿದ್ದರು. ಪ್ರವಾಸಿ ತಂಡದ ಬೌಲಿಂಗ್ ವಿಭಾಗ ಸಮರ್ಥವಾಗಿದೆ. ಹೊಸಪ್ರತಿಭೆ ಸಕೀಬ್ ಮೆಹಮೂದ್ ತಮ್ಮ ಒಂದೇ ಓವರ್‌ನಲ್ಲಿ 3 ವಿಕೆಟ್ ಕಬಳಿಸಿದರು.ವಾಂಖೆಡೆ ಕ್ರೀಡಾಂಗಣದ ಸ್ಪರ್ಧಾತ್ಮಕ ಪಿಚ್‌ನಲ್ಲಿ ರನ್‌ಗಳು ಹರಿಯುವ ನಿರೀಕ್ಷೆ ಇದೆ. ಮುಸ್ಸಂಜೆ ವಾತಾವರಣದಲ್ಲಿ ತೇವ ಹೆಚ್ಚು ಇರುವುದರಿಂದ ಬೌಲರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು. ಆದ್ದರಿಂದ ಟಾಸ್ ಗೆದ್ದವರು ಮಾಡುವ ನಿರ್ಧಾರವೂ ಮಹತ್ವದ್ದಾಗಲಿದೆ.

ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



ಡೇವಿಸ್ ಕಪ್: ಶಶಿಕುಮಾರ್, ರಾಮಕುಮಾರ್‌ಗೆ ಗೆಲುವು

ಟೋಗೊ ವಿರುದ್ಧ ಭಾರತಕ್ಕೆ ಮುನ್ನಡೆ

ನವದೆಹಲಿ (ಪಿಟಿಐ): ಭಾರತ ತಂಡವು ಶನಿವಾರ ಆರಂಭವಾದ ಡೇವಿಸ್ ಕಪ್ ಟೆನಿಸ್ ವಿಶ್ವಗುಂಪಿನ ಪಂದ್ಯದಲ್ಲಿ ಟೋಗೊ ವಿರುದ್ಧ ಶುಭಾರಂಭ ಮಾಡಿದೆ.

ಇಲ್ಲಿನ ಡಿಎಲ್‌ಟಿಎ ಕಾಂಪ್ಲೆಕ್ಸ್‌ನಲ್ಲಿ ನಡೆದ ಸಿಂಗಲ್ಸ್ ಪಂದ್ಯದಲ್ಲಿ ಶಶಿಕುಮಾರ್ ಮುಕುಂದ್ ಮತ್ತು ರಾಮಕುಮಾರ್ ರಾಮನಾಥನ್ ಅವರು ಎದುರಾಳಿ ಆಟಗಾರರನ್ನು ನೇರ ಸೆಟ್‌ಗಳಿಂದ ನಿರಾಯಾಸವಾಗಿ ಮಣಿಸಿ ಭಾರತಕ್ಕೆ 2–0 ಮುನ್ನಡೆ ಒದಗಿಸಿದರು.

ಡೇವಿಸ್ ಕಪ್ ತಂಡಕ್ಕೆ ವಾಪಸಾದ 28 ವರ್ಷ ವಯಸ್ಸಿನ ಶಶಿಕುಮಾರ್ ಮೊದಲ ಪಂದ್ಯದಲ್ಲಿ 6-2, 6-1ರಿಂದ ಲಿಯೋವಾ ಅಯ್ಯೆಟ್ ಅಜಾವೊನ್ ಅವರನ್ನು ಸೋಲಿಸಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 365ನೇ ಸ್ಥಾನದಲ್ಲಿರುವ ಭಾರತದ ಆಟಗಾರನಿಗೆ ಲಿಯೋವಾ ಯಾವ ಹಂತದಲ್ಲೂ ಸರಿಸಾಟಿಯಾಗಲಿಲ್ಲ. ಕೇವಲ ಒಂದು ಗಂಟೆ 15 ನಿಮಿಷದಲ್ಲಿ ಅವರು ಗೆದ್ದು, ಭಾರತಕ್ಕೆ 1–0 ಮುನ್ನಡೆ ಒದಗಿಸಿದರು.

30 ವರ್ಷ ವಯಸ್ಸಿನ ರಾಮಕುಮಾರ್ ಎರಡನೇ ಸಿಂಗಲ್ಸ್ ಪಂದ್ಯದಲ್ಲಿ 6-0, 6-2ರಿಂದ ಟೋಗೊ ದೇಶದ ಅಗ್ರಮಾನ್ಯ ಆಟಗಾರ ಥಾಮಸ್ ಸೆಟಾಡ್ಜಿ ಅವರನ್ನು ಮಣಿಸಿದರು. ಸೆಟಾಡ್ಜಿ ಅವರಿಂದ ಉತ್ತಮ ಪೈಪೋಟಿ ನಿರೀಕ್ಷಿಸಲಾಗಿತ್ತಾದರೂ ಪಂದ್ಯ ಏಕಪಕ್ಷೀಯವಾಗಿ ಸಾಗಿತು. ವಿಶ್ವ ರ‍್ಯಾಂಕಿಂಗ್‌ನಲ್ಲಿ 395ನೇ ಸ್ಥಾನದಲ್ಲಿರುವ ರಾಮ್‌ಕುಮಾರ್ ಕೇವಲ 50 ನಿಮಿಷದಲ್ಲಿ ಗೆದ್ದು, ಭಾರತದ ಮುನ್ನಡೆಯನ್ನು ಹಿಗ್ಗಿಸಿದರು.

ಶಶಿಕುಮಾರ್ ಮುಕುಂದ್

ರೋಹಿತ್ ರಾಜ್‌ಪಾಲ್ ನೇತೃತ್ವದ ಭಾರತ ತಂಡಕ್ಕೆ ಭಾನುವಾರ ಒಂದು ಡಬಲ್ಸ್ ಮತ್ತು ಎರಡು ಸಿಂಗಲ್ಸ್ ಪಂದ್ಯಗಳಲ್ಲಿ ಟೋಗೊ ಆಟಗಾರರು ಸವಾಲೊಡ್ಡಲಿದ್ದಾರೆ.

ಡಬಲ್ಸ್‌ನಲ್ಲಿ ಶ್ರೀರಾಜ್ ಮತ್ತು ರಿತ್ವಿಕ್ ಚೌಧರಿ ಬೊಲ್ಲಿಪಲ್ಲಿ ಜೋಡಿಯು ಹೋಮಾಸ್ ಸ್ಟಿಯೋಡ್ಜಿ- ಹೊಡೆಬಾಲೊ ಇಸಾಕ್ ಪ್ಯಾಡಿಯೊ ಅವರನ್ನು ಎದುರಿಸಲಿದೆ. ಸಿಂಗಲ್ಸ್‌ನಲ್ಲಿ ಶಶಿಕುಮಾರ್ ಅವರು ಸೆಟಾಡ್ಜಿ ವಿರುದ್ಧ; ರಾಮಕುಮಾರ್ ಅವರು ಲಿಯೋವಾ ವಿರುದ್ಧ ಸೆಣಸಲಿದ್ದಾರೆ.

ಹರ್ಡಲ್ಸ್: ತೇಜಸ್ ರಾಷ್ಟ್ರೀಯ ದಾಖಲೆ

ನವದೆಹಲಿ (ಪಿಟಿಐ): ಭಾರತದ ತೇಜಸ್ ಶಿರ್ಸೆ ಅವರು ಫ್ರಾನ್ಸ್‌ನಲ್ಲಿ ನಡೆದ ಎಲೀಟ್ ಒಳಾಂಗಣ ಟ್ರ್ಯಾಕ್ ಕೂಟದಲ್ಲಿ ಪುರುಷರ 60 ಮೀಟರ್ ಹರ್ಡಲ್ಸ್‌ನಲ್ಲಿ ಎರಡನೇ ಸ್ಥಾನದೊಂದಿಗೆ, ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು.

ಶುಕ್ರವಾರ ನಡೆದ ವಿಶ್ವ ಅಥ್ಲೆಟಿಕ್ಸ್ ಒಳಾಂಗಣ ಟೂರ್ ಸಿಲ್ವರ್ ಮಟ್ಟದ ಕೂಟದಲ್ಲಿ ಅವರು 7.64 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು. ಈ ಮೂಲಕ ಜನವರಿ 19ರಂದು ಲಕ್ಸೆಂಬರ್ಗ್‌ನಲ್ಲಿ ತಾವೇ ನಿರ್ಮಿಸಿದ (7.65ಸೆ) ದಾಖಲೆಯನ್ನು ಹಿಂದಿಕ್ಕಿದರು. ಸ್ಪೇನ್‌ನ ಎನ್ರಿಕ್ ಲೋಪಿಸ್ (7.54ಸೆ) ಮೊದಲ ಸ್ಥಾನ ಪಡೆದರು.

ಜಾನ್ವಿ ಎಐಟಿಎ ಚಾಂಪಿಯನ್

ಬೆಂಗಳೂರು: ಭರವಸೆಯ ಆಟಗಾರ್ತಿ ಸಾಯಿ ಜಾನ್ವಿ ಟಿ. ಎಐಟಿಎ ರಾಷ್ಟ್ರೀಯ ಮಹಿಳಾ ರ‍್ಯಾಂಕಿಂಗ್ ಟೂರ್ನಿಯಲ್ಲಿ ಶನಿವಾರ ಭಾರತೀಯಾನ ಅವರನ್ನು ಮಣಿಸಿ ಸಿಂಗಲ್ಸ್ ಪ್ರಶಸ್ತಿ ಗೆದ್ದರು.

16 ವರ್ಷದ ಬಿಆರ್‌ಎಸ್ ಗ್ಲೋಬಲ್ ಶಾಲೆಯ ಸಾಯಿ ಜಾನ್ವಿ ಟಿ ಮಹಿಳಾ ಸಿಂಗಲ್ಸ್‌ನ ಫೈನಲ್‌ನಲ್ಲಿ ಭಾರತೀಯಾನ ಬಿ. ವಿರುದ್ಧ 6–4, 6–4 ಪಾಯಿಂಟ್‌ಗಳಿಂದ ಗೆದ್ದುಕೊಂಡರು. ಇದಕ್ಕೂ ಮುನ್ನ ಸೆಮಿಫೈನಲ್‌ನಲ್ಲಿ ಜಾನ್ವಿ ಎದುರಾಳಿ ಅಮೋದಿನಿ ನಾಯಕ್ ಅವರನ್ನು6–1, 6–4 ಪಾಯಿಂಟ್‌ಗಳಿಂದ ಮಣಿಸಿದರು.

ರನ್ನರ್‌ಅಪ್ ಭಾರತೀಯಾನ ಸೆಮಿಫೈನಲ್‌ನಲ್ಲಿ ವಿದುಲಾ ಅಮರ್ ಅವರನ್ನು ಮಣಿಸಿ ಅಂತಿಮ ಸುತ್ತು ಪ್ರವೇಶಿಸಿದ್ದರು. ಆದರೆ ಫೈನಲ್‌ನಲ್ಲಿ ಜಾನ್ವಿ ಎದುರು ಸೋತರು.

ಲೂಕಾ ಕಾಲ್ಚಳಕ: ಮತ್ತೆ ಮುಗ್ಗರಿಸಿದ ಬಿಎಫ್‌ಸಿ

ನವದೆಹಲಿ (ಪಿಟಿಐ): ಪಂದ್ಯದ ಕೊನೆಯ ಹಂತದಲ್ಲಿ ಲೂಕಾ ಮೆಜೆಸಿನ್ ಗಳಿಸಿದ ಗೋಲಿನಿಂದ ಪಂಜಾಬ್ ಫುಟ್‌ಬಾಲ್ ಕ್ಲಬ್ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ಎದುರು ರೋಚಕ ಜಯ ಸಾಧಿಸಿತು.

ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಪಂಜಾಬ್ ತಂಡವು 3–2ರಿಂದ ಬೆಂಗಳೂರು ವಿರುದ್ಧ ಗೆದ್ದಿತು. ಪಂದ್ಯದಲ್ಲಿ ಬೆಂಗಳೂರು ತಂಡವೇ ಗೋಲು ಖಾತೆ ತೆರೆಯಿತು. 49ನೇ ನಿಮಿಷದಲ್ಲಿ ಎಡ್ಗರ್ ಮೆಂಡೇಜ್ ಗೋಲು ಹೊಡೆದು ಬಿಎಫ್‌ಸಿಗೆ 1–0 ಮುನ್ನಡೆ ಒದಗಿಸಿದರು. ಐದು ನಿಮಿಷಗಳ ನಂತರ ತಿರುಗೇಟು ನೀಡಿದ ಪಂಜಾಬ್ ತಂಡದ ಅಸ್ಮಿರ್ ಸುಜಿಚ್ (55ನೇ ನಿ) ಪೆನಾಲ್ಟಿಯನ್ನು ಗೋಲಿನಲ್ಲಿ ಪರಿವರ್ತಿಸಿ ಸಮಬಲ ಸಾಧಿಸಿದರು.

ನಂತರದ ಹೋರಾಟ ಕುತೂಹಲಭರಿತವಾಗಿತ್ತು. ಉಭಯ ತಂಡಗಳ ಜಿದ್ದಾಜಿದ್ದಿ ಮುಗಿಲುಮುಟ್ಟಿತು. ಈ ಹಂತದಲ್ಲಿ ಪಂಜಾಬ್ ತಂಡದ 3 ಆಟಗಾರರು ಹಳದಿ ಕಾರ್ಡ್ ದರ್ಶನ ಮಾಡಿದರು. 79ನೇ ನಿಮಿಷದಲ್ಲಿ ಪಂಜಾಬ್ ತಂಡದ ಫ್ಲಿಪ್ ಮರ್ಝೋಕ್ ಗೋಲು ಹೊಡೆಯುವ ಮೂಲಕ ಬಿಎಫ್‌ಸಿ ರಕ್ಷಣಾ ಪಡೆಗೆ ಪೆಟ್ಟು ಕೊಟ್ಟರು. ನಂತರದ ತುರುಸಿನ ಹೋರಾಟದಲ್ಲಿ ಬಿಎಫ್‌ಸಿಯ ರಾಹುಲ್ ಭೆಕೆ (90 + 2) ಗೋಲು ಹೊಡೆದರು. ಇದರಿಂದಾಗಿ 2–2ರ ಸಮಬಲವಾಯಿತು. ಪಂದ್ಯ ಡ್ರಾ ಆಗುವ ಸಾಧ್ಯತೆ ಇತ್ತು. ಆದರೆ ಲೂಕಾ (90 + 6ನಿ) ಕಾಲ್ಚಳಕ ಮೆರೆದರು. ಗೋಲು ಹೊಡೆದು ಬಿಎಫ್‌ಸಿಯನ್ನು ಮಣಿಸಿದರು. ಬೆಂಗಳೂರು ತಂಡಕ್ಕೆ ಇದು 7ನೇ ಸೋಲು. ಒಟ್ಟು 19 ಪಂದ್ಯಗಳನ್ನು ಆಡಿರುವ ತಂಡವು 8 ಜಯ ಮತ್ತು 4 ಡ್ರಾ ಸಾಧಿಸಿದೆ. ಒಟ್ಟು 28 ಅಂಕಗಳೊಂದಿಗೆ 5ನೇ ಸ್ಥಾನದಲ್ಲಿದೆ. ಪಂಜಾಬ್ ತಂಡವು 17 ಪಂದ್ಯಗಳಲ್ಲಿ 7ರಲ್ಲಿ ಜಯಿಸಿದೆ, 2 ಡ್ರಾ ಸಾಧಿಸಿದೆ. 8ರಲ್ಲಿ ಸೋತಿದೆ. 23 ಅಂಕಗಳೊಂದಿಗೆ 9ನೇ ಸ್ಥಾನದಲ್ಲಿದೆ.

ಸಚಿನ್‌ಗೆ ಗೌರವ

ಮುಂಬೈನಲ್ಲಿ ಶನಿವಾರ ನಡೆದ ಬಿಸಿಸಿಐ ವಾರ್ಷಿಕ ಕಾರ್ಯಕ್ರಮದಲ್ಲಿ ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ ಅವರಿಗೆ ಜೀವಮಾನ ಸಾಧನೆಗಾಗಿ ಕರ್ನಲ್ ಸಿ.ಕೆ. ನಾಯ್ಡು ಪ್ರಶಸ್ತಿಯನ್ನು ಐಸಿಸಿ ಅಧ್ಯಕ್ಷ ಜಯ್ ಶಾ ಪ್ರದಾನ ಮಾಡಿದರು –ಬಿಸಿಸಿಐ ಎಕ್ಸ್ ಚಿತ್ರ

ಗುಕೇಶ್ ಮುನ್ನಡೆ; ಎರಡನೇ ಸ್ಥಾನಕ್ಕೆ ಪ್ರಜ್ಞಾನಂದ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ಚೀನಾದ ವೀ ಯಿ ಜೊತೆ 30 ನಡೆಗಳಲ್ಲಿ ಸುಲಭವಾಗಿ ಡ್ರಾ ಸಾಧಿಸಿದ ವಿಶ್ವ ಚಾಂಪಿಯನ್ ಗುಕೇಶ್, ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ 11ನೇ ಸುತ್ತಿನ ನಂತರ ಅರ್ಧ ಪಾಯಿಂಟ್ ಮುನ್ನಡೆ ಉಳಿಸಿಕೊಂಡಿದ್ದಾರೆ.

ಭಾರತದ ಇನ್ನೊಬ್ಬ ಆಟಗಾರ ಆರ್.ಪ್ರಜ್ಞಾನಂದ ಶುಕ್ರವಾರ ಇನ್ನೊಂದು ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ ಅವರನ್ನು 37 ನಡೆಗಳಲ್ಲಿ ಸೋಲಿಸಿ ಅಗ್ರಸ್ಥಾನದ ಬಳಿಯಿದ್ದಾರೆ. ಗುಕೇಶ್ 11 ಸುತ್ತುಗಳಿಂದ ಎಂಟು ಅಂಕ ಕಲೆಹಾಕಿದ್ದರೆ, ಪ್ರಜ್ಞಾನಂದ 7.5 ಪಾಯಿಂಟ್ಸ್ ಗಳಿಸಿದ್ದಾರೆ. ಜರ್ಮನಿಯ ವಿನ್ಸೆಂಟ್ ಕೀಮರ್ ಜೊತೆ ಪಾಯಿಂಟ್ ಹಂಚಿಕೊಂಡ ಉಜ್ಬೇಕ್ ಗ್ರ್ಯಾಂಡ್‌ಮಾಸ್ಟರ್ ನದಿರ್ಬೆಕ್ ಅಬ್ದುಸತ್ತಾರೋವ್ ಕೂಡ 7.5 ಪಾಯಿಂಟ್ಸ್ ಸಂಗ್ರಹಿಸಿ ಜಂಟಿಯಾಗಿ ಎರಡನೇ ಸ್ಥಾನದಲ್ಲಿದ್ದಾರೆ.

ಭಾರತದ ಪಿ.ಹರಿಕೃಷ್ಣ (5.5) ಅವರು ಸರ್ಬಿಯಾದ ಅಲೆಕ್ಸಿ ಸರನ (5) ಅವರನ್ನು ಮಣಿಸಿದರು. ಭಾರತದ ಮತ್ತೊಬ್ಬ ಆಟಗಾರ ಲಿಯಾನ್ ಲ್ಯೂಕ್ ಮೆಂಡೋನ್ಸ (4), ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ (6) ಅವರನ್ನು ಸೋಲಿಸಿದರು. ಈ ಟೂರ್ನಿಯಲ್ಲಿ ಸಪ್ಪೆಯಾಗಿರುವ ಅರ್ಜುನ್ ಇರಿಗೇಶಿ (3.5), ಹಾಲೆಂಡ್‌ನ ಜೋರ್ಡನ್ ವಾನ್ ಫೊರೀಸ್ಟ್ (4.5) ಜೊತೆ ಡ್ರಾ ಮಾಡಿಕೊಂಡರು.

ಚಾಲೆಂಜರ್ಸ್ ವಿಭಾಗದಲ್ಲಿ ದಿವ್ಯಾ ದೇಶಮುಖ್ (3), ರುಮೇನಿಯಾದ ಐರಿಆ ಬುಲ್ಮಾಗ (1) ಅವರನ್ನು ಸೋಲಿಸಿದರು. ಆದರೆ ಆರ್.ವೈಶಾಲಿ (5), ಅಜರ್‌ಬೈಜಾನ್‌ನ ಐದಿನ್ ಸುಲೇಮಾನ್ಲಿ (7.5) ಎದುರು ಸೋಲನುಭವಿಸಿದರು.

ಲಂಕಾ ವಿರುದ್ಧ ಆಸ್ಟ್ರೇಲಿಯಾ ಜಯ

ಗಾಲೆ, ಶ್ರೀಲಂಕಾ (ಎಎಫ್‌ಪಿ): ಬ್ಯಾಟಿಂಗ್ ಬಳಿಕ ಬೌಲಿಂಗ್‌ನಲ್ಲೂ ಅಮೋಘ ಆಟವಾಡಿದ ಆಸ್ಟ್ರೇಲಿಯಾ ತಂಡವು ಶ್ರೀಲಂಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯವನ್ನು ಇನಿಂಗ್ಸ್ ಮತ್ತು 242 ರನ್‌ಗಳಿಂದ ಗೆದ್ದುಕೊಂಡಿತು.

ಇದು ಶ್ರೀಲಂಕಾದ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅತಿ ದೊಡ್ಡ ರನ್ ಅಂತರದ ಸೋಲಾಗಿದೆ. 2017ರಲ್ಲಿ ನಾಗ್ಪುರದಲ್ಲಿ ನಡೆದ ಪಂದ್ಯದಲ್ಲಿ ಭಾರತ ವಿರುದ್ಧ ಲಂಕಾ ಪಡೆ ಇನಿಂಗ್ಸ್ ಮತ್ತು 239 ರನ್‌ಗಳ ಸೋಲು ಕಂಡಿದ್ದು, ಈವರೆಗಿನ ದಾಖಲೆಯಾಗಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 154 ಓವರ್‌ಗಳಲ್ಲಿ 6ಕ್ಕೆ 654 ಡಿಕ್ಲೇರ್ಡ್. ಶ್ರೀಲಂಕಾ: 52.2 ಓವರ್‌ಗಳಲ್ಲಿ 165. ಎರಡನೇ ಇನಿಂಗ್ಸ್: 54.3 ಓವರ್‌ಗಳಲ್ಲಿ 247 (ಏಂಜಲೊ ಮ್ಯಾಥ್ಯೂಸ್ 41, ಧನಂಜಯ ಡಿಸಿಲ್ವ 39, ಜೆಫ್ರಿ ವಾಂಡರ್ಸೆ 53; ಮ್ಯಾಥ್ಯೂ ಕುಹ್ನೆಮನ್ 86ಕ್ಕೆ 4, ನೇಥನ್ ಲಯನ್ 78ಕ್ಕೆ 4). **ಪಂದ್ಯದ ಆಟಗಾರ:** ಉಸ್ಮಾನ್ ಖ್ವಾಜಾ.